# ಕಿರಿಯ ರೆಡ್ ಕ್ರಾಸ್ ಕೈಪಿಡಿ



**ಜೀನ್ ಹೆನ್ರಿ ಡ್ಯೂನಾಂಟ್**
ಸಂಸ್ಥಾಪಕರು
1828–1910

**ಭಾರತೀಯ ರೆಡ್ ಕ್ರಾಸ್ ಸಂಸ್ಥೆ**
ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು - 560 001

100 YEARS OF INDIAN RED CROSS

## Indian Red Cross Society has been Awarded Nobel Peace Prize for 4 Times

| | |
|---|---|
| 1901 | Henry Dunant was awarded 1st Nobel Peace Prize |
| 1917 | International Committee of the Red Cross awarded Nobel Peace Prize |
| 1944 | International Committee of the Red Cross awarded Nobel Peace Prize |
| 1963 | International Committee of the Red Cross & League Jointly awarded Nobel Peace Prize |

# ಸಭಾಪತಿಗಳ ಸಂದೇಶ

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯು 1921ರಿಂದಲೂ ತನ್ನ ಮಾನವೀಯ ಕಾರ್ಯಗಳನ್ನು ನಿರ್ವಹಿಸುತ್ತಾ ಸಾಗಿದೆ. ನಮ್ಮ ಸದಸ್ಯರ ಹಾಗೂ ಸ್ವಯಂ ಸೇವಕರ ಅವಿರತ ಪ್ರಯತ್ನದಿಂದ; ಮಾನವೀಯ ಮೌಲ್ಯಗಳನ್ನು ನಿರಂತರವಾಗಿ ಅಳವಡಿಸಿಕೊಂಡು ಸೇವೆ ಮಾಡುವ ಧ್ಯೇಯದಲ್ಲಿ ಈ ಸಂಸ್ಥೆಯು ನೂರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ.

ಮೂಲತಃ ಈ ಸಂಸ್ಥೆಯ ಧ್ಯೇಯ, ನೊಂದವರಿಗೆ ಸಹಾಯ ಹಾಗೂ ಗಾಯಾಳುಗಳಿಗೆ ಚಿಕಿತ್ಸೆ ಮತ್ತು ನೆರವು ನೀಡುವುದಾಗಿದೆ. ಬದಲಾದ ಕಾಲದಲ್ಲಿ ಈ ಮೇಲಿನ ಸೇವೆಗಳೊಂದಿಗೆ ಯುದ್ಧ ಕಾಲದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಶಾಂತಿಯನ್ನು ಕಾಪಾಡುವಲ್ಲಿ ತನ್ನದೇ ಆದ ಪಾತ್ರ ವಹಿಸುತ್ತಿದೆ. ಸಮಾಜದಲ್ಲಿ ಮಾನವೀಯತೆಯನ್ನು ಬೆಳೆಸುವುದು, ಆರೋಗ್ಯ ಜಾಗೃತಿ ಮೂಡಿಸುವುದು, ವಿಪತ್ತಿನ ಸಂದರ್ಭದಲ್ಲಿ ಪರಿಹಾರ ಒದಗಿಸುವುದು ಮತ್ತು ಸಮುದಾಯದಲ್ಲಿ ಈ ಸಂದರ್ಭಗಳ ಬಗ್ಗೆ ಜಾಗೃತಿ ಮೂಡಿಸುವುದು ಅಲ್ಲದೇ ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಸಾವಿರಾರು ಕುಟುಂಬಗಳಿಗೆ ತನ್ನ ಸಹಾಯ ಹಸ್ತವನ್ನು ನೀಡುವ ಮೂಲಕ ಜೀವನಾಸರೆಯಾಗಿದೆ.

ಪ್ರಪಂಚವು ತ್ವರಿತ ಗತಿಯಲ್ಲಿ ಬದಲಾಗುತ್ತಿದ್ದು, ಅದನ್ನು ಹಿಂಬಾಲಿಸಲು ಹೋಗಿ ಮಾನವನು ತನ್ನ ಮೂಲಭೂತ ಮೌಲ್ಯಗಳಾದ ಮಾನವೀಯತೆ, ಸಹೋದರತೆ, ಶಾಂತಿ ಮತ್ತು ಸಹಬಾಳ್ವೆ ಇತ್ಯಾದಿಗಳನ್ನು

ಮರೆತು ಸಂಘರ್ಷದ ಮನಸ್ಥಿತಿಗೆ ಒಳಗಾಗಿ ಮಾನವೀಯ ಗುಣಗಳನ್ನು ಮರೆತುಬಿಟ್ಟಿದ್ದಾನೆ. ಬದಲಾಗುತ್ತಿರುವ ನಗರೀಕರಣದಿಂದ ಸಕಾರಾತ್ಮಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಮತ್ತು ತನ್ನ ಸುತ್ತ ಮುತ್ತಲಿನ ಪ್ರಾಕೃತಿಕ ಸೌಂದರ್ಯವನ್ನು ಸವಿಯುವ ಅವಕಾಶದಿಂದ ವಂಚಿತನಾಗುತ್ತಿದ್ದಾನೆ.

ವಿಶ್ವದಲ್ಲಿ ಭಾರತ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗುತ್ತಿದೆ. ನವ ಸಮಾಜದ ಬೆಳವಣಿಗೆಯಲ್ಲಿ ಮಕ್ಕಳ ಮುಂದಿನ ಉಜ್ವಲ ಭವಿಷ್ಯ ಅಡಗಿದೆ. ಮಕ್ಕಳ ಮನಸ್ಸು ಮೃದುವಾಗಿದ್ದು, ಅವರಿಗೆ ಧನಾತ್ಮಕ ಮತ್ತು ನೈತಿಕವಾದ ಸಕಾರಾತ್ಮಕ ಆಲೋಚನೆಗಳನ್ನು ತುಂಬಿದಾಗ ನಾಳಿನ ಜವಾಬ್ದಾರಿಯುತವಾದ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಆದ್ದರಿಂದ, ಅವರಿಗೆ ಶಿಕ್ಷಣದ ಜೊತೆಗೆ, ನೈತಿಕ ಶಿಕ್ಷಣದ ಅಗತ್ಯತೆ ಇದೆ. ಮಾತ್ರವಲ್ಲದೇ, ಸಾಂಸ್ಕೃತಿಕ ಹಾಗೂ ಆಧುನಿಕ ಮೌಲ್ಯಗಳೆರಡರಿಂದಲೂ ಕೂಡ ಮಾನವೀಯ ಮೌಲ್ಯಗಳನ್ನು ಬೆಳೆಸಲು ಸಾಧ್ಯವಾಗುತ್ತದೆ.

ನಾನು ಈ ಸಂದರ್ಭದಲ್ಲಿ ಎಲ್ಲಾ ಕಿರಿಯರನ್ನು ಅಭಿನಂದಿಸುವ ಮೂಲಕ ಮಾನವೀಯ ಸೇವೆಗೆ ಸ್ವಾಗತವನ್ನು ಬಯಸುತ್ತೇನೆ. ಮಕ್ಕಳಿಗೆ ನನ್ನ ಸಂದೇಶವೆಂದರೆ "ರೆಡ್‌ಕ್ರಾಸ್‌ನ ಮೂಲಭೂತ ತತ್ವಗಳನ್ನು ನೆನಪಿಡಿ, ಅವುಗಳೆಂದರೆ – ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥತೆ, ಸ್ವಾತಂತ್ರ್ಯ, ಸ್ವಯಂ ಸೇವೆ, ಏಕತೆ ಮತ್ತು ಸಾರ್ವತ್ರಿಕತೆ . ನಿಮ್ಮ ಜೀವನದ ಪ್ರತಿಯೊಂದು ಸಂದರ್ಭದಲ್ಲೂ ಈ ತತ್ವಗಳನ್ನು ಅಳವಡಿಸಿಕೊಂಡು, ವ್ಯಾಪಕವಾಗಿ ಹರಡಿ ಶಾಂತಿಯುತ ಜಗತ್ತನ್ನು ನಿರ್ಮಿಸಲು ನಮ್ಮೊಂದಿಗೆ ಕೈ ಜೋಡಿಸಿ.

**ಶ್ರೀ ವಿಜಯಕುಮಾರ ಪಾಟೀಲ ಶಾವಂತಗೇರ**
ಸಭಾಪತಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ
ಕರ್ನಾಟಕ ರಾಜ್ಯ ಶಾಖೆ
ಬೆಂಗಳೂರು

# ಉಪ ಸಭಾಪತಿಗಳ ಸಂದೇಶ

ಇಂದಿನ ಮಕ್ಕಳ ನಾಳಿನ ಪ್ರಜೆಗಳು ಎನ್ನುವ ಗಾದೆ ಮಾತಿನಂತೆ ಸಮಾಜಿಕ ಮೌಲ್ಯಗಳನ್ನು ಬೆಳಸುವ ನಿಟ್ಟಿನಲ್ಲಿ ಕಿರಿಯ ರೆಡ್ ಕ್ರಾಸ್ ಸಂಸ್ಥೆಯು ಹಲವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ನಮ್ಮ ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಪಠ್ಯಪುಸ್ತಕಗಳಿಂದ ವಿದ್ಯಾರ್ಥಿಗಳಿಗೆ ವಿಷಯ ಜ್ಞಾನವನ್ನು ನೀಡುವುದರ ಮೇಲೆ ಹೆಚ್ಚು ಕೇಂದ್ರೀಕರಿಸುತ್ತಿದೆ ಎನ್ನಬಹುದು. ಇದರಿಂದ ಪಠ್ಯೇತರ ವಿಷಯಗಳ ಅರಿವಿಲ್ಲದೆ ಮತ್ತು ಮಾನವೀಯ ಮೌಲ್ಯಗಳಿಂದ ದೂರ ಉಳಿಯುವ ನಾಗರಿಕರನ್ನು ಸೃಷ್ಟಿಸಬಹುದು. ವ್ಯಕ್ತಿಗಳು ಸಮಾಜದ ಸುಖ ದುಃಖಗಳ ಕಡೆಗೆ ಗಮನ ಹರಿಸದೆ ತಮ್ಮ ವೈಯಕ್ತಿಕ ಅಭಿವೃದ್ಧಿಯತ್ತ ಹೆಚ್ಚಿನ ಗಮನಹರಿಸುತ್ತಾರೆ. ಜಗತ್ತು ಬೆಳೆದರೆ ಮಾತ್ರ ನಾವು ಕೂಡ ನಿಜವಾಗಿ ಬೆಳೆಯುತ್ತೇವೆ ಎಂಬ ಅಂಶವನ್ನು ಮರೆತುಬಿಡುತ್ತಿದ್ದಾರೆ. ಮಕ್ಕಳು ತಮ್ಮ ಜೀವನದಲ್ಲಿ ಮಾನವೀಯತೆಯ ಪ್ರಗತಿಯನ್ನು ಎತ್ತಿ ಹಿಡಿಯಬೇಕಾದರೆ ಮಾನವೀಯ ಗುಣಗಳನ್ನು ಅವರ ಜೀವನದಲ್ಲಿ ಅಳವಡಿಸಿಕೊಳ್ಳುವುದು ತುಂಬಾ ಮುಖ್ಯವಾಗಿರುತ್ತದೆ. ಮಕ್ಕಳ ಭವಿಷ್ಯ ಸರಿಯಾದ ಹಾದಿಯಲ್ಲಿ ಸಾಗುವ ರೀತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ. ಮಕ್ಕಳನ್ನು ಉತ್ತಮ ನಾಗರೀಕರನ್ನಾಗಿ ಬೆಳೆಸಲು ಪ್ರಯತ್ನಿಸುವುದು ಮತ್ತು ಸಮುದಾಯಗಳನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವುದು ನಮ್ಮ ಸಾಮೂಹಿಕ ಜವಾಬ್ದಾರಿಯಾಗಿದೆ.

ಭಾರತೀಯ ರೆಡ್‌ಕ್ರಾಸ್ ಕರ್ನಾಟಕ ರಾಜ್ಯ ಶಾಖೆಯ ಅಡಿಯಲ್ಲಿ ಜೂನಿಯರ್ ರೆಡ್‌ಕ್ರಾಸ್ ಘಟಕವು ಶಾಲಾ ಮಕ್ಕಳಿಗೆ ಜೀವನ ಶೈಲಿ, ದೇಶಭಕ್ತಿ, ಶಿಸ್ತು, ಸೌಹಾರ್ದಯುತ ಬದುಕು ಮತ್ತು ಪರಂಪರೆಯ ಮೌಲ್ಯಗಳನ್ನು ಉತ್ತೇಜಿಸುವ ನೈತಿಕ ಮತ್ತು ಸಾಂಸ್ಕೃತಿಕ ಶಿಕ್ಷಣವನ್ನು ನೀಡುವ ಗುರಿಯನ್ನು ಹೊಂದಿದೆ. ಇದು ಆರಂಭದಲ್ಲಿ ಪ್ರೌಢಶಾಲೆಗಳನ್ನು ಗುರಿಯಾಗಿಸಿಕೊಂಡಿದ್ದರೆ, ಈಗ ಕರ್ನಾಟಕ ಸರ್ಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಡಿಯಲ್ಲಿ ಪದವಿ ಪೂರ್ವ ಕಾಲೇಜುಗಳಿಗೂ ವಿಸ್ತರಿಸಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದ ಎಲ್ಲಾ (ಸರ್ಕಾರಿ, ಅನುದಾನಿತ, ಅನುದಾನರಹಿತ ಮತ್ತು ಖಾಸಗಿ) ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಕಡ್ಡಾಯವಾಗಿ ನೋಂದಾಯಿಸಲು ಸರ್ಕಾರಿ ಆದೇಶವನ್ನು ಹೊರಡಿಸಿದೆ.

ಯುವ ಮನಸ್ಸುಗಳಲ್ಲಿ ಮಾನವೀಯ ತತ್ವಗಳು ಮತ್ತು ದೇಶಭಕ್ತಿಯನ್ನು ಬಿತ್ತುವುದು. ಪ್ರಥಮ ಚಿಕಿತ್ಸೆ, ವಿಪತ್ತು ನಿರ್ವಹಣೆ, ವೈಯಕ್ತಿಕ ನೈರ್ಮಲ್ಯ, ತಾರುಣ್ಯ ವ್ಯವಸ್ಥೆಯಲ್ಲಿನ ಗೊಂದಲಗಳನ್ನು ಸಮರ್ಪಕವಾಗಿ ನಿರ್ವಹಿಸಲು ಆಪ್ತ ಸಮಾಲೋಚನೆಯನ್ನು ಕೈಗೊಳ್ಳುವುದು, ತಾಳ್ಮೆ, ಶಿಸ್ತು ಮತ್ತು ಇತರ ಸಾಮಾಜಿಕ ಜವಾಬ್ದಾರಿಗಳಲ್ಲಿ ತರಬೇತಿ ನೀಡುವ ಮೂಲಕ ಅವರ ಕೌಶಲ್ಯವನ್ನು ಹೆಚ್ಚಿಸುವುದೇ ಕಾರ್ಯಕ್ರಮದ ಉದ್ದೇಶವಾಗಿದೆ. ಇದು ಮಕ್ಕಳಿಗೆ ತಮ್ಮ ಜೀವನವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ಆರೋಗ್ಯವಾಗಿರಲು, ಮಾನಸಿಕ ಸ್ಥೈರ್ಯವನ್ನು ಸುಧಾರಿಸಲು, ಆತ್ಮವಿಶ್ವಾಸವನ್ನು ಹೆಚ್ಚಿಸಲು ಮತ್ತು ಸಮಾಜದ ಪ್ರಗತಿಗೆ ಗಣನೀಯವಾಗಿ ಕೊಡುಗೆ ನೀಡುವ ಸಾಮರ್ಥ್ಯವನ್ನು ಹೊಂದಿರುವ ಆತ್ಮವಿಶ್ವಾಸದ ಯುವಕರನ್ನಾಗಿ ಮಾಡಲು ಸಾಧ್ಯವಾಗುವಂತಹ ಕೌಶಲ್ಯಗಳನ್ನು ಕಲಿಸಲು ಕೂಡಾ ಉದ್ದೇಶಿಸಿದೆ. ವಾರ್ಷಿಕವಾಗಿ ನಡೆಸುವ ಜೂನಿಯರ್ ರೆಡ್ ಕ್ರಾಸ್ ಪರೀಕ್ಷೆಯು ರೆಡ್ ಕ್ರಾಸ್ ಇತಿಹಾಸ, ತತ್ವಗಳು ಮತ್ತು ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುತ್ತದೆ.

ರೆಡ್ ಕ್ರಾಸ್ ಚಟುವಟಿಕೆಗಳನ್ನು ಉತ್ತೇಜಿಸುವಲ್ಲಿ ಮತ್ತು ಉತ್ಸಾಹವನ್ನು ಜೀವಂತವಾಗಿರಿಸುವಲ್ಲಿ ಪಾತ್ರ ವಹಿಸಿದ ಪ್ರತಿಯೊಬ್ಬರ ಪ್ರಯತ್ನಗಳನ್ನು ನಾನು ಪ್ರಶಂಸಿಸುತ್ತೇನೆ.

ಒಂದು ಉದಾತ್ತ ಉದ್ದೇಶಕ್ಕೆ ಕೊಡುಗೆ ನೀಡಲು ಕೆಲವು ಗಂಟೆಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಈ ಕ್ರಿಯೆಯ ಪರಿಣಾಮಗಳು ಶಾಶ್ವತವಾಗಿ ಉಳಿಯುವ ಹೆಜ್ಜೆ ಗುರುತನ್ನು ಬಿಟ್ಟು ಹೋಗುತ್ತದೆ. ಮಾನವೀಯತೆಯ ಒಂದು ಸಣ್ಣ ಸೂಚಕವು ಫಲಾನುಭವಿಗಳ ಜೀವನವನ್ನು ಬದಲಾಯಿಸುವ ಕ್ಷಣವಾಗಿದೆ. ಸಮಾಜದಲ್ಲಿ ಸಕ್ರಿಯ ಪಾತ್ರ ವಹಿಸಿ ಅದರ ಯೋಗಕ್ಷೇಮಕ್ಕೆ ಕೊಡುಗೆ ನೀಡಿ ಭವಿಷ್ಯದ ಶಿಲ್ಪಿಗಳಾಗಿ ಎಂದು ಈ ಪುಸ್ತಕವನ್ನು ಓದುವ ಯುವ ಮನಸ್ಸುಗಳಲ್ಲಿ ನಾನು ಕೋರುತ್ತೇನೆ.

**ಶ್ರೀ ಆನಂದ ಎಸ್. ಜಿಗಜಿನ್ನಿ**
ಉಪ ಸಭಾಪತಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ
ಕರ್ನಾಟಕ ರಾಜ್ಯ ಶಾಖೆ
ಬೆಂಗಳೂರು

# ಗೌರವ ಕೋಶಾಧ್ಯಕ್ಷರ ಸಂದೇಶ

ಆತ್ಮೀಯ ಜೂನಿಯರ್ ರೆಡ್ ಕ್ರಾಸ್ ಸದಸ್ಯರೇ,

ನಾವು ಒಟ್ಟಿಗೆ ಸೇರಿ ಕೆಲಸ ಕಾರ್ಯಗಳನ್ನು ಮಾಡುವಾಗ ನಿಮ್ಮ ಪಾತ್ರಗಳು ಎಷ್ಟೊಂದು ಪ್ರಭಾವ ಶಾಲಿ ಎಂಬುದನ್ನು ನಾನು ನಿಮಗೆ ತಿಳಿಸಲು ಬಯಸುತ್ತೇನೆ. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಇತರರ ಜೀವನದಲ್ಲಿ ಬದಲಾವಣೆ ಮಾಡುವ ಸಾಮರ್ಥ್ಯವಿದೆ. ನೆನಪಿಡಿ, ದಯೆಯ ಚಿಕ್ಕ ಪ್ರಮಾಣ ಕೂಡ ಬದಲಾವಣೆಯನ್ನು ಪ್ರೇರೇಪಿಸುವ ಏರಿಳಿತದ ಪರಿಣಾಮವನ್ನು ಉಂಟುಮಾಡಬಹುದು. ನೀವು ಸ್ವಯಂಸೇವಕರಾಗಿರಲಿ, ಜಾಗೃತಿ ಮೂಡಿಸುವವರಾಗಿರಲಿ ಅಥವಾ  ಪರಸ್ಪರ ಪ್ರೀತಿ ಹಂಚಿ ಸಹಕರಿಸುವ ನಿಮ್ಮ ಪ್ರಯತ್ನಗಳು ಉಜ್ವಲ ಜಗತ್ತಿಗೆ ಕೊಡುಗೆ ನೀಡುತ್ತವೆ.

ಕಲಿಯಲು, ಬೆಳೆಯಲು ಮತ್ತು ಸೇವೆ ಮಾಡಲು ಪ್ರತಿಯೊಂದು ಅವಕಾಶವನ್ನು ಸ್ವೀಕರಿಸಿ. ನಾವು ಪರಸ್ಪರ ಬೆಂಬಲಿಸುವುದನ್ನು ಮುಂದುವರಿಸೋಣ ಮತ್ತು ನಮ್ಮ ಸಮುದಾಯಗಳಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಸೃಷ್ಟಿಸಲು ಒಟ್ಟಾಗಿ ಕೆಲಸ ಮಾಡೋಣ. ಉತ್ತಮ ಕೆಲಸವನ್ನು ಮುಂದುವರಿಸೋಣ ಮತ್ತು ಭವಿಷ್ಯದ ಯೋಜನೆಗಳಿಗಾಗಿ ನಿಮ್ಮ ಆಲೋಚನೆಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಲು ಹಿಂಜರಿಯಬೇಡಿ! ನಿಮ್ಮ ಉತ್ಸಾಹ ಮತ್ತು

ಸಮರ್ಪಣೆಯೇ ಜೂನಿಯರ್ ರೆಡ್ ಕ್ರಾಸ್ ಸಮುದಾಯಕ್ಕೆ ಸ್ಫೂರ್ತಿ. ಒಬ್ಬರನ್ನೊಬ್ಬರು ಬೆಂಬಲಿಸಿ ಮತ್ತು ಸಹಕರಿಸಿ.

ಒಟ್ಟಾಗಿ, ನಾವು ಸವಾಲುಗಳನ್ನು ಜಯಿಸಬಹುದು ಮತ್ತು ಎಲ್ಲರಲ್ಲಿ ಭರವಸೆಯ ಬೆಳಕನ್ನು ಮೂಡಿಸುವ. ದೊಡ್ಡ ದೊಡ್ಡ ಕನಸು ಕಾಣೋಣ ಮತ್ತು ಅವುಗಳನ್ನು ನನಸಾಗಿಸಲು ಸಕಾರಾತ್ಮಕ ಚಿಂತನೆಗಳನ್ನು ಬೆಳೆಸೋಣ.

ಎಲ್ಲರನ್ನು ಪ್ರೇರೇಪಿಸಿ ಮತ್ತು ನಕ್ಷತ್ರಗಳಂತೆ ಹೊಳೆಯುತ್ತಿರಿ!

**ಶ್ರೀ ಯತೀಶ್ ಬೈಕಂಪಾಡಿ**
ಗೌರವ ಕೋಶಾಧ್ಯಕ್ಷರು
ಭಾರತೀಯ ರೆಡ್‌ಕ್ರಾಸ್ ಸಂಸ್ಥೆ
ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು

# ಒಳಪುಟಗಳಲ್ಲಿ


| ಅಧ್ಯಾಯ | ವಿಷಯ | ಪುಟ ಸಂಖ್ಯೆ |
|---|---|---|
| i | ರೆಡ್ ಕ್ರಾಸ್ ಸಂಸ್ಥೆಯ ಉಗಮ | 09 |
| ii | ಜೀನ್ ಹೆನ್ರಿ ಡ್ಯೂನಾಂಟ್‌ರವರ ಜೀವನ ಚರಿತ್ರೆ | 19 |
| iii | ಜಿನೀವಾ ಒಪ್ಪಂದಗಳು | 23 |
| iv | ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಮತ್ತು ಅದರ ಸಂಘಟನೆಗಳು | 32 |
| v | ರೆಡ್ ಕ್ರಾಸ್‌ನ ಮೂಲ ತತ್ವಗಳು | 40 |
| vi | ರೆಡ್ ಕ್ರಾಸ್ ಲಾಂಛನ | 43 |
| vii | ವಿಪತ್ತು ನಿರ್ವಹಣೆ | 48 |
| viii | ಭಾರತೀಯ ರೆಡ್ ಕ್ರಾಸ್ ಸಂಸ್ಥೆ | 54 |
| ix | ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ | 60 |
| x | ಕಿರಿಯ ರೆಡ್ ಕ್ರಾಸ್ ಮತ್ತು ಯುವ ರೆಡ್ ಕ್ರಾಸ್ | 67 |
| xi | ಪ್ರಥಮ ಚಿಕಿತ್ಸೆ | 83 |
| xii | ವೈಯಕ್ತಿಕ ಸ್ವಚ್ಛತೆ | 91 |
| xiii | ಶಾಲಾ ಸುರಕ್ಷತೆ | 95 |
| xiv | ಕೋವಿಡ್–19 ಸೋಂಕು | 100 |
| xv | ಹದಿಹರೆಯದವರ ಸಮಸ್ಯೆಗಳು ಮತ್ತು ಉಪಕ್ರಮಗಳು | 105 |
| xvi | ಸ್ವಾವಲಂಬನೆ ಬದುಕು | 114 |
| xvii | ಸಂಬಂಧಗಳ ಮೌಲ್ಯ | 116 |
| xviii | ಅಂತರ್ಜಾಲ ಮತ್ತು ಅಂರ್ಜಾಲ ಸಂಬಂಧಿತ ಉಪಕರಣಗಳ ಉಪಯೋಗಗಳು | 120 |
| xix | ರಸ್ತೆ ಸುರಕ್ಷತೆಯ ಕ್ರಮಗಳು | 123 |
| xx | ಕ್ಯಾನ್ಸರ್ ಕಾಯಿಲೆ ಬಗ್ಗೆ ಜಾಗೃತಿ | 126 |

ಅಧ್ಯಾಯ
I

# ರೆಡ್ ಕ್ರಾಸ್ ಸಂಸ್ಥೆಯ ಉಗಮ

## (ಭಾರತೀಯ ರೆಡ್ ಕ್ರಾಸ್ ಸಂಸ್ಥೆ)

ಸಲ್ಫಾರಿನೋ ಯುದ್ಧ: ರೆಡ್ ಕ್ರಾಸ್ ಸಂಸ್ಥೆಯ ಉಗಮ ಮಾನವ ಇತಿಹಾಸದಲ್ಲೊಂದು ಕುತೂಹಲಕರ ಅಧ್ಯಾಯ. ಜೂನ್ 1859ರ 24ರಂದು ಜರುಗಿದ ಅಮಾನವೀಯ ಯುದ್ಧದ ರಣರಂಗದಲ್ಲಿ 'ರೆಡ್ ಕ್ರಾಸ್' ಜನನವಾಯಿತು. ಒಂದು ಕಡೆ ಫ್ರಾನ್ಸ್ ಮತ್ತು ಇಟಲಿಯ ಸಂಯುಕ್ತ ಸೈನ್ಯ: ಇನ್ನೊಂದೆಡೆ ಆಸ್ಟ್ರಿಯಾ ಸೈನ್ಯ ಆ ಯುದ್ಧರಂಗದಲ್ಲಿದ್ದವು. ಆ ಸಮಯದಲ್ಲಿ ನೆಪೋಲಿಯನ್ III ಯುದ್ಧಕ್ಕೆ ಆಜ್ಞಾಪಿಸಿದನು. ಮೂರು ಲಕ್ಷಕ್ಕೂ ಅಧಿಕ ಸೈನಿಕರು ಆ ಯುದ್ಧದಲ್ಲಿದ್ದರು.

1859ರ ಜೂನ್ 24ರಂದು "ಸಲ್ಫಾರಿನೋ"ದಲ್ಲಿ ನಡೆದ ಈ ಯುದ್ಧ ಭಯಂಕರವಾಗಿತ್ತು. 15 ಗಂಟೆಗಳ ಕಾಲ ನಡೆದ ಘೋರ ಯುದ್ಧ ಮುಗಿದಾಗ ಮೃತ ಮತ್ತು ಗಾಯಗೊಂಡ ದೇಹಗಳು ಆ ರಣರಂಗದ ತುಂಬ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಆ ದಿನಗಳಲ್ಲಿ ಕೆಲವೇ ಆಸ್ಪತ್ರೆಗಳು ಹಾಗೂ ವೈದ್ಯರು ಆ ಸೈನ್ಯಗಳಿಗೆ ಲಭ್ಯವಿದ್ದರು. ಹಾಗಾಗಿ ಗಾಯಾಳು ಸೈನಿಕರನ್ನು ಉಪಚರಿಸಲಿಕ್ಕಾಗಲೀ ಅಥವಾ ಚಿಕಿತ್ಸೆ ಮಾಡುವುದಕ್ಕಾಗಲೀ ವೈದ್ಯಕೀಯ ಸಹಾಯ ಅಲ್ಪ ಪ್ರಮಾಣದಲ್ಲಿತ್ತು.

ಸಾಯಂಕಾಲದ ಹೊತ್ತಿಗೆ ಸ್ವಿಡ್ಜರ್ಲೆಂಡ್ ದೇಶದ 'ಹೆನ್ರಿ ಡ್ಯೂನಾಂಟ್' ಎಂಬಾತನು ಗಾಯಾಳುಗಳಿಗೆ ತನ್ನಿಂದಾಗುವ ಸೇವೆ ಸಲ್ಲಿಸಲು ಪ್ರಾರಂಭಿಸಿದನು. ಸ್ಥಳೀಯ ಗ್ರಾಮಸ್ಥರ ಸಹಕಾರ ಪಡೆದು ಗಾಯಾಳುಗಳನ್ನು ಎತ್ತಿನ ಗಾಡಿಗಳಲ್ಲಿ ಹಾಕಿಕೊಂಡು ಕ್ರಾಸ್ಟೆಗ್ಲಿಯನ್ ಪ್ರದೇಶಕ್ಕೆ ಸಾಗಿಸಿದನು. ಅವರನ್ನು ಖಾಸಗಿ ಮನೆಗಳಲ್ಲಿ, ಚರ್ಚ್‌ಗಳಲ್ಲಿ, ಆಶ್ರಮಗಳಲ್ಲಿ ಹಾಗೂ ಸೇನಾ ಪಾಳ್ಯಗಳಲ್ಲಿ ಇರಿಸಿದನು.

ಹೆನ್ರಿ ಡ್ಯೂನಾಂಟ್ ಸ್ವಿಸ್ ವ್ಯಾಪಾರಿ. ಅಲ್ಜೀರಿಯಾದಲ್ಲಿ ಕಾರ್ನ್ ಮಿಲ್‌ಗಳನ್ನು ಪ್ರಾರಂಭಿಸಲು ಅನುಮತಿ ಪಡೆಯುವುದಕ್ಕಾಗಿ ನೆಪೋಲಿಯನ್





ದೊರೆಯನ್ನು ಕಾಣಲು ಬಂದಿದ್ದನು. ತಾನು ಸಾಗುತ್ತಿದ್ದ ಮಾರ್ಗದಲ್ಲಿನ ರಣರಂಗದಲ್ಲಿಯ ಈ ಭಯಂಕರ ಮಾರಣಾಂತಿಕ ದೃಶ್ಯ ನೋಡಿದನು. ಅಲ್ಲಿನ ಯುದ್ಧ ಗಾಯಾಳುಗಳ ಆರ್ತನಾದ ಕೇಳಿಸಿತು. ಕೂಡಲೇ ಅವರಿಗಾಗಿ ವೈದ್ಯಕೀಯ ನೆರವು ಒದಗಿಸಲು ಸ್ವಯಂಸೇವಕರ ತಂಡವನ್ನು ಸಜ್ಜುಗೊಳಿಸಿದನು. ಗಾಯಾಳುಗಳಲ್ಲಿ ಎಲ್ಲ ದೇಶದ ಸೈನಿಕರೂ ಇದ್ದರು.

ದಿನಕಳೆದಂತೆ ಇಂತಹ ಭಯಂಕರ ಯುದ್ಧವನ್ನು ಸಹ ಜನ ಮರೆತರು. ಆದರೆ ಡ್ಯೂನಾಂಟ್ ಅದನ್ನು ಮರೆಯಲಿಲ್ಲ. ಆ ಸಂಕಟಮಯ ದೃಶ್ಯವು ಆತನ ಮನಸ್ಸಿನಲ್ಲಿ ಪ್ರಭಾವ ಬೀರಿತು. ಇದರಿಂದಾಗಿ ಮುಂದೆ ಮಾನವ ಜನಾಂಗವು ಎದುರಿಸುವ ಭಯಂಕರ ಯಾತನೆಗಳನ್ನು ತಪ್ಪಿಸಲು ಎರಡು ಅಗತ್ಯವಾದ ಅಂಶಗಳು ಮನದಟ್ಟಾದವು.

1. ಅಂತರರಾಷ್ಟ್ರೀಯ ಸ್ವಯಂಸೇವಕರ ಸಂಘಟನೆಯನ್ನು ಎಲ್ಲ ರಾಷ್ಟ್ರಗಳಲ್ಲೂ ಶಾಂತಿಕಾಲದಲ್ಲಿ ಪ್ರತಿಷ್ಠಾಪಿಸಬೇಕು. ಇದರಲ್ಲಿನ ಸ್ವಯಂ ಸೇವಕ ತಂಡವು ಯುದ್ಧ ಮುಕ್ತಾಯವಾದ ಕೂಡಲೇ ಅಲ್ಲಿನ ಗಾಯಾಳುಗಳನ್ನು ಅವರ ರಾಷ್ಟ್ರೀಯತೆಯನ್ನು ಗಮನಿಸದೇ ಉಪಚರಿಸಬೇಕು.

ಇದನ್ನು ಸಾಧ್ಯವಾಗಿಸಲು, ರಾಷ್ಟ್ರಗಳು ಗಾಯಾಳು ಸೈನಿಕರನ್ನು, ವೈದ್ಯರನ್ನು ಹಾಗೂ ಇತರ ಸಹಾಯಕರನ್ನು, ತಟಸ್ಥರೆಂದು (ಯಾವ ಪಕ್ಷಕ್ಕೂ ಸೇರದವರೆಂದು) ಘೋಷಿಸಿ, ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಬೇಕು.

ಹೆನ್ರಿ ಡ್ಯೂನಾಂಟ್‌ರು "ದಿ ಮೆಮೊರಿ ಆಫ್ ಸಲ್ಫಾರಿನೋ" ಎಂಬ ಪುಸ್ತಕವನ್ನು ಪ್ರಕಟಿಸಿದರು ಅದರ ಪ್ರತಿಗಳನ್ನು ವಿಶ್ವಾದಾದ್ಯಂತ ವಿತರಿಸಿದರು. ಈ ಪುಸ್ತಕದಲ್ಲಿ ರಾಷ್ಟ್ರಗಳು ಗಾಯಾಳು ಸೈನಿಕರನ್ನು, ವೈದ್ಯರನ್ನು ಹಾಗೂ ಇತರ ಸಹಾಯಕರನ್ನು ತಟಸ್ಥರೆಂದು (ಯಾವ ಪಕ್ಷಕ್ಕೂ ಸೇರದವರೆಂದು) ಘೋಷಿಸಿ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಬೇಕೆಂದು ತಿಳಿಸಲಾಗಿತ್ತು.

ಈ ಅದ್ಭುತ ಪುಸ್ತಕವನ್ನು ಓದಿದ ಜಿನೀವಾದಲ್ಲಿನ ಜಿನೀವಾ ಸಂಸ್ಥೆ ಧರ್ಮದತ್ತಿ ಸಂಸ್ಥೆಯು ಡ್ಯೂನಾಂಟ್ ಅವರ ಸಂಕಲ್ಪಗಳ ಕಾರ್ಯಾಚರಣೆಗೆ ಸಹಾಯ ಮಾಡುವ ಭರವಸೆ ನೀಡಿತು. ಐದು ವ್ಯಕ್ತಿಗಳ ಒಳಗೊಂಡಿರುವ ಸಮಿತಿಯನ್ನು ರಚಿಸಲಾಯಿತು. ಡ್ಯೂನಾಂಟ್‌ರನ್ನು ಸಮಿತಿಯ ಕಾರ್ಯದರ್ಶಿಯನ್ನಾಗಿ ಮಾಡಲಾಯಿತು. ಈ ಸಮಿತಿಯ ಮೂಲಕ ಡ್ಯೂನಾಂಟ್‌ರವರ ಧ್ಯೇಯೋದ್ದೇಶಗಳ ಕಾರ್ಯಾಚರಣೆಗಾಗಿ

ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಉದ್ದೇಶಿಸಲಾಯಿತು. ಆ ಸಮಿತಿಯ ಪದಾಧಿಕಾರಿಗಳೆಂದರೆ:

| | | | |
|---|---|---|---|
| * | ಜನರಲ್ ಜಿ. ಹೆನ್ರಿ ಡ್ಯೂಫೋರ್ | – | ಅಧ್ಯಕ್ಷರು |
| * | ಶ್ರೀ ಗಸೆಜೀವ್ ಮಾಯ್ನಿಯರ್ | – | ಉಪಾಧ್ಯಕ್ಷರು |
| * | ಡಾ. ಥಿಯೋಡರ್ ಮ್ಯಾಮ್ನೊಯಿರ್ | – | ಸದಸ್ಯರು |
| * | ಡಾ. ಲ್ಯೂಯಿಸ್ ಆಪ್ಪಿಯಾ | – | ಸದಸ್ಯರು |
| * | ಜೀನ್ ಹೆನ್ರಿ ಡ್ಯೂನಾಂಟ್ | – | ಕಾರ್ಯದರ್ಶಿ |

ಇವರಲ್ಲಿ ಹೆನ್ರಿ ಡ್ಯೂಫೋರ್ ಎಂಬುವರು ಸ್ವಿಡ್ಜರ್ಲೆಂಡ್ ದೇಶದ ಫೆಡರಲ್ ಸೈನ್ಯದ ನಿವೃತ್ತ ಮುಖ್ಯ ಕಮಾಂಡರ್ ಆಗಿದ್ದರು. ಥಿಯೋಡರ್ ಮ್ಯಾಮ್ನೊಯಿರ್ ಎಂಬುವರು ಸಮಾಜ ಸೇವಕರಾಗಿದ್ದರು. ಸಮಿತಿಯಲ್ಲಿನ ವೈದ್ಯರು ತಜ್ಞ ಶಸ್ತ್ರಚಿಕಿತ್ಸಕರಾಗಿದ್ದರು.

ಈ ಸಮಿತಿಯು 17ನೇ ಫೆಬ್ರವರಿ 1863ರಂದು ಸಭೆ ಸೇರಿ ಅಂತರರಾಷ್ಟ್ರೀಯ ಸಮ್ಮೇಳನವನ್ನು ಜಿನೀವಾದಲ್ಲಿ ಅಕ್ಟೋಬರ್ 1863ರಲ್ಲಿ ಏರ್ಪಡಿಸಿ, ತತ್ಸಂಬಂಧವಾದ ಸಂಘಟನೆಗಳನ್ನು ಸ್ಥಾಪಿಸಲು ನಿರ್ಧರಿಸಿತು. ಆನಂತರದಲ್ಲಿ ಡ್ಯೂನಾಂಟ್‌ರವರು ಯುರೋಪ್, ರಷ್ಯಾ, ಬವೇರಿಯಾ, ಆಸ್ಟ್ರಿಯಾ ಇತ್ಯಾದಿ ರಾಷ್ಟ್ರಗಳಲ್ಲಿನ ವಿವಿಧ ರಾಜ್ಯಗಳಲ್ಲಿ ಪ್ರವಾಸ ಮಾಡಿ ಸಂಘಟನೆಯ ಧ್ಯೇಯೋದ್ದೇಶಗಳ ಬಗ್ಗೆ ಪ್ರಚಾರ ನೀಡಿದರು. ಆಗ ಹಲವಾರು ರಾಜರನ್ನು, ಮಂತ್ರಿಗಳನ್ನು ಸಂಪರ್ಕಿಸಿದರು. ಅವರೆಲ್ಲರೂ ಸಹಾಯ ನೀಡುವ ವಚನವಿತ್ತರು.

ಡ್ಯೂನಾಂಟ್‌ರವರು ವಿಶ್ವದ ವಿವಿಧ ಪ್ರಮುಖ ವ್ಯಕ್ತಿಗಳನ್ನು ತನ್ನ ಧ್ಯೇಯೋದ್ದೇಶಗಳ ಸಾಧನೆಗಾಗಿ ಸಹಾಯ ಪಡೆಯಲು ಭೇಟಿಯಾದರು. ಈ ದೀರ್ಘ ಪ್ರಯತ್ನಗಳ ಫಲವಾಗಿ 26ನೇ ಅಕ್ಟೋಬರ್ 1863ರಲ್ಲಿ ಜಿನೀವಾದಲ್ಲಿ ಜರುಗಿದ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ವಿವಿಧ ರಾಷ್ಟ್ರಗಳ ನಾಯಕರು ಭಾಗವಹಿಸಿದ್ದರು. ಅವರೆಲ್ಲರೂ ಯೋಜನೆಗಳ ಪ್ರಸ್ತಾವನೆಗಳನ್ನು ಕುರಿತು ಚರ್ಚಿಸಿದರು. ಜನರಲ್ ಡ್ಯೂಫೋರ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. 16 ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ಇದರಲ್ಲಿ ಪಾಲ್ಗೊಂಡಿದ್ದರು.

'ಗಾಯಗೊಂಡ ಸೈನಿಕರ ಸಹಾಯ ಸಂಸ್ಥೆ' ಎಂಬ ಹೆಸರಿನ ಅಂತರರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸಲು ಈ ಸಮ್ಮೇಳನದಲ್ಲಿ ನಿರ್ಣಯಿಸಲಾಯಿತು. ಮುಂದೆ ಇದೇ ಸಂಸ್ಥೆ "ರೆಡ್ ಕ್ರಾಸ್ ಸಂಸ್ಥೆ" ಎಂಬ ಹೆಸರಿನಿಂದ ಕರೆಯಲ್ಪಟ್ಟಿತು.

## ಈ ಸಂಸ್ಥೆಯ ಉದ್ದೇಶಗಳೆಂದರೆ:–

ಮೊದಲನೆಯದಾಗಿ, ಪ್ರತಿಯೊಂದು ರಾಷ್ಟ್ರವು ತನ್ನ ಶಾಂತಿಕಾಲದಲ್ಲಿ ಸ್ವಯಂ ಸೇವಾ ಸಂಸ್ಥೆಯೊಂದನ್ನು ಸ್ಥಾಪಿಸಿಕೊಳ್ಳಬೇಕು. ಯುದ್ಧದ ಸಮಯದಲ್ಲಿ ಕಾದಾಟ ಮುಕ್ತಾಯವಾದ ಕೂಡಲೇ ಗಾಯಾಳುಗಳ ಚಿಕಿತ್ಸೆ, ಉಪಚಾರಕ್ಕಾಗಿ ಕಾಲಹರಣ ಮಾಡದೇ ಕ್ರಿಯಾಶೀಲವಾಗಬೇಕು. ಯುದ್ಧದಲ್ಲಿ ಗಾಯಗೊಂಡ ಸೈನಿಕರಿಗೆ ಚಿಕಿತ್ಸೆ ಹಾಗೂ ಉಪಚಾರದ ಸೇವೆ ಒದಗಿಸುವುದೇ ಸಂಘಟನೆಯ ಮುಖ್ಯ ಉದ್ದೇಶವಾಗಿರಬೇಕು.

ಎರಡನೆಯದಾಗಿ, ಇಂತಹ ಚಿಕಿತ್ಸಕ ಸೇವೆಯನ್ನೊದಗಿಸಲು ನಿಯಮಿಸಲಾದ ಕೆಲಸಗಾರರನ್ನು ತಟಸ್ಥರೆಂದು ಪರಿಗಣಿಸಬೇಕು. ಏಕೆಂದರೆ, ಅವರು ಯುದ್ಧದಲ್ಲಿ ಪಾಲ್ಗೊಂಡಿರುವುದಿಲ್ಲ. ಬಿಳಿ ಹಿನ್ನೆಲೆಯಲ್ಲಿನ ಕೆಂಪು ಕ್ರಾಸ್ ಮುದ್ರೆಯು ಇಂತಹ ಸ್ವಯಂ ಸೇವಾ ಕಾರ್ಯಕರ್ತರನ್ನು ತಟಸ್ಥರೆಂದು ಪರಿಗಣಿಸುವುದು. ಇಂತಹ ಮುದ್ರೆಯನ್ನೇ ಬ್ಯಾಡ್ಜ್‌ಗಳ ಹಾಗೂ ಧ್ವಜದ ಮೇಲೆ ರೆಡ್ ಕ್ರಾಸ್ ಸಂಸ್ಥೆಯು ಉಪಯೋಗಿಸಬೇಕು. ಸ್ವಿಡ್ಜರ್ಲೆಂಡ್ ದೇಶದ ರಾಷ್ಟ್ರಧ್ವಜದಲ್ಲಿ ಕೆಂಪು ಹಿನ್ನೆಲೆಯಲ್ಲಿ ಬಿಳಿ ಕ್ರಾಸ್ ಇತ್ತು. ಡ್ಯೂನಾಂಟ್‌ರವರು ಸ್ವಿಡ್ಜರ್ಲೆಂಡ್ ದೇಶದ ರಾಷ್ಟ್ರಧ್ವಜದ ಬಣ್ಣಗಳನ್ನು ತಿರುವು ಮುರುವಾಗಿ ರೂಪಿಸಿ ದೇಶಕ್ಕೆ ಮತ್ತು ಸಮ್ಮೇಳನಕ್ಕೆ ಗೌರವ ಸಲ್ಲಿಸಿದರು. ಇಂಥ ಸಂಘಟನೆಗಳು ಎಲ್ಲ ರಾಷ್ಟ್ರಗಳಲ್ಲೂ ಅಸ್ತಿತ್ವದಲ್ಲಿ ಬರಬೇಕು ಹಾಗೂ ಅಂತರರಾಷ್ಟ್ರೀಯ ಸಮಿತಿಯನ್ನು ನೇಮಿಸಿ, ವಿವಿಧ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಸಮಿತಿಗಳನ್ನು ಸಂಘಟಿಸುವಂತಾಗಬೇಕೆಂದು ತೀರ್ಮಾನಿಸಲಾಯಿತು. ಈ ರಾಷ್ಟ್ರೀಯ ಸಮಿತಿಗಳು, ವಿವಿಧ ರಾಷ್ಟ್ರಗಳಲ್ಲಿನ ರೆಡ್ ಕ್ರಾಸ್ ಸೊಸೈಟಿಗಳಿಗೆ ಕೇಂದ್ರ ಕಾರ್ಯನಿರ್ವಹಣಾ ಸ್ಥಾನಗಳಂತೆ ಪಾತ್ರವಹಿಸುತ್ತಿದ್ದವು.

ಪಂಚ ಸದಸ್ಯರ ಈ ಸಮಿತಿಯು ಇತರ ರಾಷ್ಟ್ರಗಳ ಪ್ರತಿನಿಧಿಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸುವಂತೆ, ಸ್ವಿಸ್ ಸರ್ಕಾರವನ್ನು ವಿನಂತಿಸಿಕೊಂಡಿತು. ಅದರಂತೆ 1964 ಮೇ 8ರಂದು ರಾಯಭಾರಿ ಮಟ್ಟದ ಅಂತರರಾಷ್ಟ್ರೀಯ ಸಮ್ಮೇಳನವನ್ನು ಸ್ವಿಡ್ಜ್‌ರ್ಲೆಂಡ್ ಸರಕಾರವು ಏರ್ಪಡಿಸಿತು. ಎರಡು ವಾರಗಳವರೆಗೆ ನಡೆದ ಸಮಾಲೋಚನೆಗಳ ನಂತರ ಭಾಗವಹಿಸಿದ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳು ರಾಷ್ಟ್ರೀಯ ಹಾಗೂ

ಅಂತರರಾಷ್ಟ್ರೀಯ ಸಂಘಟನೆಗಳಿಗೆ ಮಾನ್ಯತೆ ನೀಡಲು ಸಲಹೆಗಳನ್ನು ಸ್ವೀಕರಿಸಿದರು. 1864ರ ಪ್ರಥಮ ಜಿನೀವಾ ಸಮ್ಮೇಳನ ಎಂದು ಕರೆಯಲ್ಪಡುವ ಕರಡು ಒಪ್ಪಂದಕ್ಕೆ 1864ರ ಆಗಸ್ಟ್ 12ರಂದು ಸಹಿ ಹಾಕಲಾಯಿತು. ಈ ಒಪ್ಪಂದದ ಅನ್ವಯ ಯುದ್ಧದಲ್ಲಿ ತೊಡಗಿದ ರಾಷ್ಟ್ರಗಳು ಈ ಕೆಳಗಿನ ಕರ್ತವ್ಯಗಳ ಪಾಲನೆಗೆ ಬದ್ದವಾಗಬೇಕಾಯಿತು.

1. ಯುದ್ಧದಲ್ಲಿ ಪಾಲ್ಗೊಂಡ ಆನಾರೋಗ್ಯ ಮತ್ತು ಗಾಯಗೊಂಡ ಸೈನಿಕರಿಗೆ ಅವರ ರಾಷ್ಟ್ರೀಯತೆಯನ್ನು ಗಮನಿಸದೇ, ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕು.

2. ಸೈನ್ಯ ವೈದ್ಯಾಧಿಕಾರಿ, ತುರ್ತು ಚಿಕಿತ್ಸಾ ಘಟಕ, ಅವರು ಕಾರ್ಯನಿರ್ವಹಿಸುವ ಆಸ್ಪತ್ರೆ ಸಹಾಯಕ ಸಿಬ್ಬಂದಿ – ಇವರೆಲ್ಲರನ್ನು ತಟಸ್ಥರೆಂದು ಪರಿಗಣಿಸಬೇಕು, ಅವರ ಸುರಕ್ಷತೆಯ ಬಗ್ಗೆ ಗಮನವಿರಬೇಕು.

3. ಬಿಳಿ ಹಿನ್ನೆಲೆಯಲ್ಲಿನ ಕೆಂಪು ಕ್ರಾಸ್‌ನ್ನು ಸುರಕ್ಷಿತಾ ಲಾಂಛನವೆಂದು ಮಾನ್ಯತೆ ನೀಡಬೇಕು.

"ಅಂತರರಾಷ್ಟ್ರೀಯ ಸಮಿತಿ ಐದು" ಎಂಬ ಹೆಸರು ಈ ಸಮ್ಮೇಳನದಲ್ಲಿ "ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ" ಎಂದು ಬದಲಾಯಿಸಲ್ಪಟ್ಟಿತು.

ಇಂದು ವಿಶ್ವದ 186ಕ್ಕೂ ಅಧಿಕ ರಾಷ್ಟ್ರಗಳು ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಅವುಗಳು ರೆಡ್ ಕ್ರೆಸೆಂಟ್, ರೆಡ್

ಲಯನ್ ಸನ್ ಸಂಸ್ಥೆ ಇತ್ಯಾದಿ ವಿವಿಧ ಹೆಸರುಗಳಿಂದ ಕಾರ್ಯ ನಿರ್ವಹಿಸುತ್ತಿವೆ. ಆನಂತರದ ವರ್ಷಗಳಲ್ಲಿ ಹೆನ್ರಿ ಡ್ಯೂನಾಂಟ್ ಅವರು ರೆಡ್ ಕ್ರಾಸ್ ಸಂಸ್ಥೆಗಳ ರಚನೆಯಲ್ಲಿ ಕ್ರಿಯಾಶೀಲರಾದರು. ಅವರ ಸತತ ಪ್ರಯತ್ನದಿಂದಾಗಿಯೇ ಪ್ರಥಮ ಜಿನೀವಾ ಸಮ್ಮೇಳನದಲ್ಲಿ ಈ ಕೆಳಗಿನ ಮಾರ್ಗದರ್ಶಕ ತತ್ವಗಳನ್ನು ಅಂಗೀಕರಿಸಲಾಯಿತು.

**ಲಾಂಛನ:** ಯುದ್ಧರಂಗದಲ್ಲಿ ಸ್ವಯಂ ಸೇವಕರನ್ನು ರಕ್ಷಿಸುವುದಕ್ಕಾಗಿ ವಿಶಿಷ್ಟವಾದ ಬಿಳಿ ಹಿನ್ನೆಲೆಯಲ್ಲಿನ ಕೆಂಪು ಕ್ರಾಸ್ ಹೊಂದಿರುವ ಲಾಂಛನವನ್ನು ಸಮ್ಮೇಳನವು ನಿಗದಿಪಡಿಸಿತು. ಈ ಲಾಂಛನದಲ್ಲಿ ಬಣ್ಣಗಳು, ಸ್ವಿಡ್ಜರ್ಲೆಂಡ್ ದೇಶದ ರಾಷ್ಟ್ರಧ್ವಜದಲ್ಲಿನ ಬಣ್ಣಗಳನ್ನೇ ತಿರುವುಮುರುವಾಗಿ ಬದಲಾಯಿಸಲಾಗಿದೆ. ಕ್ರಾಸ್‌ನ ಎಲ್ಲ ಬಾಹುಗಳೂ ಪರಸ್ಪರ ಸಮನಾಗಿವೆ.

ವೈದ್ಯಕೀಯ ಸೇವೆಗಾಗಿ ಬಳಸುವ ಉಪಕರಣಗಳ ಮೇಲೆ ಹಾಗೂ ಧ್ವಜದ ಮೇಲೆ ಈ ಲಾಂಛನವನ್ನು ಉಪಯೋಗಿಸುವುದು. ರೆಡ್ ಕ್ರಾಸ್ ಮುದ್ರೆಯನ್ನು ಧರಿಸಿದ ವ್ಯಕ್ತಿಗಳು ಹಾಗೂ ವಸ್ತುಗಳನ್ನು ತಟಸ್ಥರೆಂದು ಪರಿಗಣಿಸಬೇಕು ಮತ್ತು ಜಿನೀವಾ ಸಮ್ಮೇಳನದ ನಿರ್ಣಯಗಳ ಅನ್ವಯ ಸಂರಕ್ಷಿಸಬೇಕು.

ಆಶ್ಚರ್ಯವೇನೆಂದರೆ, ಅಂತರರಾಷ್ಟ್ರೀಯ ಸಮ್ಮೇಳನದ 2 ತಿಂಗಳ ಒಳಗಾಗಿ ಗಾಯಗೊಂಡ ಸೈನಿಕರ ಸಹಾಯ ರಾಷ್ಟ್ರೀಯ ಸಂಸ್ಥೆಯನ್ನು ರಚಿಸಲಾಯಿತು. ನೆದರ್‌ಲ್ಯಾಂಡ್ ಸಂಸ್ಥೆಯು 1867ರಲ್ಲಿ ರೆಡ್ ಕ್ರಾಸ್ ಸಂಸ್ಥೆ

ಎಂಬ ಹೆಸರಿನಿಂದ ಅಸ್ತಿತ್ವಕ್ಕೆ ಬಂದಿತು. ಇದು ಇತರ ರಾಷ್ಟ್ರೀಯ ಸಂಸ್ಥೆಗಳಿಗೆ ಅನುಕರಣೆಯಾಯಿತು. 1878ರಿಂದ ಎಲ್ಲ ರಾಷ್ಟ್ರೀಯ ಸಂಘಟನೆಗಳು ರೆಡ್ ಕ್ರಾಸ್ ಸಂಸ್ಥೆಗಳೆಂದು ಹೆಸರು ಬದಲಾಯಿಸಿಕೊಂಡವು. "ಅಂತರರಾಷ್ಟ್ರೀಯ ಗಾಯಗೊಂಡ ಸೈನಿಕರ ಸಹಾಯ ಸಮಿತಿ"ಯು ತಮ್ಮ ಹೆಸರನ್ನು "ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ" ಎಂದು 1880ರಲ್ಲಿ ಅಧಿಕೃತವಾಗಿ ಬದಲಾಯಿಸಿಕೊಂಡಿತು.

* * * *

ಅಧ್ಯಾಯ
II

# ಜೀನ್ ಹೆನ್ರಿ ಡ್ಯೂನಾಂಟ್‌ರವರ ಜೀವನ ಚರಿತ್ರೆ

ಜೀನ್ ಹೆನ್ರಿ ಡ್ಯೂನಾಂಟ್ ಜಿನೀವಾ ದೇಶದಲ್ಲಿ 1828 ರ ಮೇ 8 ರಂದು ಜನಿಸಿದರು. ತಂದೆಯ ವ್ಯವಹಾರದಲ್ಲಿದ್ದ ಆಸಕ್ತಿ, ತಾಯಿಯಲಿದ್ದ ಆಳವಾದ ಧಾರ್ಮಿಕ ಮನೋಭಾವ ಇವೆರಡನ್ನೂ ಡ್ಯುನಾಂಟ್ ಮುಂದುವರೆಸಿದರು. ಬಾಲ್ಯದಲ್ಲಿ ತನ್ನ ತಾಯಿಯೊಂದಿಗೆ ಬಡವರ ಮನೆಗಳಿಗೆ ಹೋಗಿ ಅಲ್ಲಿನ ವೃದ್ಧರಿಗೆ, ರೋಗಿಗಳಿಗೆ ಆಹಾರ ಸಾಮಾಗ್ರಿ ಹಾಗೂ ಔಷಧಗಳನ್ನು ಕೊಡುತ್ತಿದ್ದರು. ಅವರ ತಂದೆ ಜೀನ್ ಜ್ಯಾಕ್ ಡ್ಯೂನಾಂಟ್ ಸಮಾಜ ಸೇವಕರೂ ಆಗಿದ್ದರು.

ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಜೀನ್ ಹೆನ್ರಿ ಡ್ಯೂನಾಂಟ್ ಪ್ರತಿಭಾವಂತರಾಗಿದ್ದರು. ಆದರೆ ಅವರಿಗೆ ಪದವಿ ಪಡೆಯುವುದಕ್ಕಿಂತ ಸೇವಾ ಕಾರ್ಯದಲ್ಲಿಯೇ ಆಸಕ್ತಿಯಿತ್ತು. ಯಾವಾಗಲೂ ಬಡವರಿಗೆ ಸಹಾಯ ಮಾಡುವುದೇ ಅವರ ಉದ್ದೇಶವಾಗಿತ್ತು. ಆಕರ್ಷಕ ಮಾತುಗಾರರಾಗಿದ್ದ ಅವರು ತಮ್ಮ ಗೆಳೆಯರೊಂದಿಗೆ ಧಾರ್ಮಿಕ ಚರ್ಚೆಗಳನ್ನು ಮಾಡುವುದರಲ್ಲಿ ಆಸಕ್ತಿ ಹೊಂದಿದ್ದರು. ಅವರು ಇಂತಹ ಧಾರ್ಮಿಕ ತಂಡಗಳನ್ನು ಸ್ವಿಡ್ಜರ್ಲೆಂಡ್‌ನ ಇತರ ಭಾಗಗಳಲ್ಲಿ ಹಾಗೂ

ಇತರ ರಾಷ್ಟ್ರಗಳಲ್ಲೂ ರಚಿಸಿದರು. 1844ರಲ್ಲಿ 'ಕ್ರಿಶ್ಚಿಯನ್ ಯುವಕರ ಸಂಘ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅಂತಹ ಧಾರ್ಮಿಕ ಸಂಸ್ಥೆಗಳನ್ನು ವೈ.ಎಂ.ಸಿ.ಎ. ಎಂಬ ಹೆಸರಿನಿಂದ ಕರೆದರು.

ಡ್ಯೂನಾಂಟ್‌ರವರು ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಬಗ್ಗೆ ಚಿಂತಿತರಾಗಿದ್ದರು. ಜೇನೀವಾದ ಬ್ಯಾಂಕ್ ನೌಕರರಾಗಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದ ಇವರನ್ನು 1853ರಲ್ಲಿ ಹೊಸ ಶಾಖೆಯ ಖಜಾಂಚಿಯಾಗಿ ಉತ್ತರ ಆಫ್ರಿಕಾದಲ್ಲಿನ ಅಲ್ಜೀರಿಯಕ್ಕೆ ಕಳುಹಿಸಲಾಯಿತು.

ವೈ.ಎಂ.ಸಿ.ಎ. ಸದಸ್ಯರಾದ ಡ್ಯೂನಾಂಟ್ ಅಲ್ಜೀರಿಯಾದಲ್ಲಿಯೂ ಸಹ ತನ್ನ ಸೇವಾ ಸಂಕಲ್ಪ ಧ್ಯೇಯವನ್ನು ಮುಂದುವರೆಸಿದರು. ಇವರ ಧರ್ಮಾಸಕ್ತಿಯು, ಗುಲಾಮಗಿರಿ ವಿರುದ್ಧದ ಮಾನವೀಯ ಕಾರ್ಯಗಳಿಗೆ ಬದಲಾಯಿತು. ಇವರು ವೈ.ಎಂ.ಸಿ.ಎ. ಸದಸ್ಯನಾಗಿ ಅದರ ತಂಡಗಳಿಗೆ ಗುಲಾಮಗಿರಿಯ ನಾಶದ ಬಗ್ಗೆ ಕ್ರಿಯಾಶೀಲರಾಗುವಂತೆ ಮನವೊಲಿಸಿದರು. ನಂತರದಲ್ಲಿ ಕ್ರಿಶ್ಚಿಯನ್ ಯುವಕರ ಸಂಘವು ಜಾಗತಿಕ ಒಕ್ಕೂಟಗಳ ರಚನೆಗೆ ಪ್ರಸ್ತಾಪಿಸಿತು. ಈ ಜಾಗತಿಕ ಒಕ್ಕೂಟ ರಚಿಸುವುದಕ್ಕಾಗಿ ಪ್ಯಾರಿಸ್‌ನಲ್ಲಿ ಅಂತರರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸಲು ಸೂಚಿಸಿದರು.

1870 ಹಾಗೂ 1871 ರ ಫ್ರಾಕೋ – ಪರ್ಷಿಯ ಯುದ್ಧದಲ್ಲಿ ಫ್ರಾನ್ಸ್‌ನ ಕೆಲವು ನಗರಗಳನ್ನು ತಟಸ್ಥವಾಗಿಸಬೇಕೆಂದು ಡ್ಯೂನಾಂಟ್ ಫ್ರಾನ್ಸ್ ಸರ್ಕಾರಕ್ಕೆ ಸಲಹೆ ಮಾಡಿದರು. ಏಕೆಂದರೆ ಅಂತಹ ನಗರಗಳಲ್ಲಿ ಯುದ್ಧದ ಗಾಯಾಳು ಹಾಗೂ ರೋಗಗ್ರಸ್ಥ ಸೈನಿಕರನ್ನು ಆಶ್ರಯನೀಡಲಾಗಿತ್ತು.

ಅಂತಹ ವಿಷಮ ಪರಿಸ್ಥಿತಿಗಳಲ್ಲೂ ಹೆನ್ರಿ ಡ್ಯೂನಾಂಟ್‌ರವರು ಸಂಕಟದಲ್ಲಿರುವವರಿಗಾಗಿ ಪರಿಹಾರ ಒದಗಿಸುವ ಬಗ್ಗೆ ಯಾವಾಗಲೂ ಆಲೋಚಿಸುತ್ತಿದ್ದರು. ಯುದ್ಧ ಖೈದಿಗಳ ಕಲ್ಯಾಣಾಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸಿದರು. ಈ ಯೋಜನೆಯು 1929ರ ಮೂರನೆ ಜಿನೀವಾ ಒಪ್ಪಂದಕ್ಕೆ ಆಧಾರವಾಯಿತು. ಡ್ಯೂನಾಂಟ್‌ರವರು ಸಮುದ್ರದಲ್ಲಿ ಗಾಯಗೊಂಡವರಿಗಾಗಿ ಹಾಗೂ ರೋಗಿಗಳಿಗಾಗಿ ಪ್ರಸ್ತಾವನೆಗಳ ಪ್ರಾಯೋಜನವನ್ನು ಸಹ ಪಡೆದುಕೊಂಡರು.

ಸುಮಾರು 1876ರ ಸಂದರ್ಭದಲ್ಲಿ ಅವರು ತೀವ್ರ ಬಡತನದಿಂದ ಕಷ್ಟಕರ ಜೀವನ ನಡೆಸಬೇಕಾಯಿತು. ಆಗ ಕೆಲ ವರ್ಷಗಳವರೆಗೆ ಜನರಿಂದ ದೂರವಿದ್ದರು. 1887ರಲ್ಲಿ ಮತ್ತೆ ಸೇವೆ ಆರಂಭಿಸಿದರು. ಪಶ್ಚಿಮ ಸ್ವಿಟ್ಜರ್ಲೆಂಡ್‌ನಲ್ಲಿನ ಹೈಡನ್ ಎಂಬ ಸಣ್ಣ ಪಟ್ಟಣದ ವಸತಿಗೃಹದಲ್ಲಿ ವಾಸವಾಗಿದ್ದುಕೊಂಡು ಅಲ್ಲಿಂದಲೇ ಸೇವೆ ಸಲ್ಲಿಸುತ್ತಿದ್ದರು.

1895ರಲ್ಲಿ ಹೈಡನ್ ನಗರಕ್ಕೆ ಬಂದ ಪತ್ರಕರ್ತನೊಬ್ಬ ಡ್ಯೂನಾಂಟ್‌ರವರ ಸಂದರ್ಶನವನ್ನು ಪ್ರಕಟಿಸಿ, ಅವರ ಧ್ಯೇಯೋದ್ದೇಶಗಳಿಗೆ ವ್ಯಾಪಕ ಪ್ರಚಾರ ದೊರಕಿಸಿದನು. 1901ರಲ್ಲಿ ಹೆನ್ರಿಯ ಧ್ಯೇಯೋದ್ದೇಶಗಳ ಸಾಧನೆಗಾಗಿ ವಿಶ್ವದ ಅತ್ಯುನ್ನತ ಗೌರವವಾದ 'ನೊಬೆಲ್ ಶಾಂತಿ ಪುರಸ್ಕಾರ' ಪ್ರಪ್ರಥಮವಾಗಿ ದೊರಕಿತು. ರೆಡ್ ಕ್ರಾಸ್ ಸಂಸ್ಥೆಯ ಅಂತರರಾಷ್ಟ್ರೀಯ ಸಮಿತಿಯು ಜೀನ್ ಹೆನ್ರಿ ಡ್ಯೂನಾಂಟ್‌ರವರ ಬಗ್ಗೆ ಈ ಕೆಳಗಿನ ಸಂದೇಶವನ್ನು ಜಿನೀವಾದಿಂದಲೇ ಕಳುಹಿಸಿತು:–

**"ಇಂತಹ ಘನವಾದ ಗೌರವಕ್ಕೆ ನಿಮ್ಮಂತೆ ಪಾತ್ರರಾದವರು ಬೇರೊಬ್ಬರಿಲ್ಲ. 40 ವರ್ಷಗಳ ಸತತ ಪರಿಶ್ರಮದಿಂದ ಈ ಅಂತರರಾಷ್ಟ್ರೀಯ ಸಂಘಟನೆಯನ್ನು ಯುದ್ಧರಂಗದಲ್ಲಿನ ಗಾಯಾಳುಗಳ ಚಿಕಿತ್ಸೆಗಾಗಿ ನೀವು ಪ್ರಾರಂಭಿಸಿದಿರಿ. ನೀವಿಲ್ಲದಿದ್ದರೆ 19ನೇ ಶತಮಾನದ ಸರ್ವೋಚ್ಚ ಮಾನವೀಯ ಸಾಧನೆಯಾದ ರೆಡ್ ಕ್ರಾಸ್ ಸಂಸ್ಥೆಯು ಉದಯಿಸುತ್ತಿರಲಿಲ್ಲ".** ತನ್ನ ಮರಣದವರೆಗೂ ಡ್ಯೂನಾಂಟ್‌ರವರು ಧರ್ಮಾರ್ಥ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಾ ಇದ್ದರು. ಅವರು 30ನೇ ಅಕ್ಟೋಬರ್ 1910 ರಂದು ಹೈಡನ್ ನಗರದಲ್ಲಿ ಮೃತರಾದರು.

ಹೆನ್ರಿ ಡ್ಯೂನಾಂಟ್‌ರವರ ಜನ್ಮದಿನವಾದ ಮೇ 8 ಪ್ರತಿವರ್ಷ "ವಿಶ್ವ ರೆಡ್ ಕ್ರಾಸ್ ದಿನ"ವೆಂದು ವಿಶ್ವಾದ್ಯಂತ ಆಚರಿಸಲಾಗುತ್ತಿದೆ.

ಹೆನ್ರಿ ಡ್ಯೂನಾಂಟ್‌ರು ತನ್ನ ಉದ್ದೇಶವನ್ನು ತುಂಬ ಸರಳವಾದ ಮೂರು ಪದಗಳಲ್ಲಿ ಹಿಂದೊಮ್ಮೆ ಬರೆದಿದ್ದರು. **"ಜನತೆಯಿಂದ ಜನತೆಗೆ ನೆರವು".** ಈ ಪದಗಳು ರೆಡ್ ಕ್ರಾಸ್ ಸಂಸ್ಥೆಯು ಹೇಗೆ ಕಾರ್ಯಾಚರಣೆ ಮಾಡುತ್ತದೆ. ಎಂಬುದನ್ನು ವ್ಯಕ್ತಪಡಿಸುತ್ತವೆ. ತನ್ನ ಸೇವಾರ್ಥ ಸಹಾಯಗಳಿಂದಾಗಿ ರೆಡ್ ಕ್ರಾಸ್ ಸಂಸ್ಥೆ ಜಾಗತಿಕ ಮಟ್ಟದಲ್ಲಿ ಆಶಾಕಿರಣವಾಯಿತು. ಇದು ಸರ್ವಕಾಲಿಕ ಸೇವಾ ಸಂಘಟನೆಯಾಗಿದ್ದು, ಯುದ್ಧಕಾಲದಲ್ಲಿ ಹಾಗೂ ಶಾಂತಿಕಾಲದಲ್ಲಿ ತನ್ನ ನಿರಂತರ ಶಾಂತಿ ಪ್ರಕ್ರಿಯೆಯ ಚಟುವಟಿಕೆಗಳ ಮೂಲಕ ಕಾರ್ಯ ನಿರ್ವಹಿಸುತ್ತಲಿದೆ.

* * * *

ಅಧ್ಯಾಯ

III

## ಜಿನೀವಾ ಒಪ್ಪಂದಗಳು

1864ರವರೆಗೂ ರಾಷ್ಟ್ರಗಳನ್ನು ಖಾಯಂ ಆಗಿ ಜನಸೇವೆಗೆ ಬದ್ಧವಾಗಿಸಲು ಯಾವುದೇ ಒಪ್ಪಂದಗಳಿರಲಿಲ್ಲ. ಆದರೆ ಎರಡು ರಾಷ್ಟ್ರಗಳ ನಡುವೆ ಯುದ್ಧ ಸಂಭವಿಸಿದಾಗ ಸೋತ ಸೈನ್ಯವನ್ನು ರಕ್ಷಿಸುವುದಕ್ಕಾಗಿ ಅಥವಾ ಗಾಯಗೊಂಡ ಸೈನಿಕರಿಗೆ ಚಿಕಿತ್ಸೆ ನೀಡಲು ತಾತ್ಕಾಲಿಕ ಒಡಂಬಡಿಕೆಗಳಾಗುತ್ತಿದ್ದವು. ಅಂತಹ ಒಡಂಬಡಿಕೆಗಳು ಖಾಯಂ ಒಪ್ಪಂದಗಳಾಗಿರಲಿಲ್ಲ. ಆಗಾಗ ಬದಲಾಗುತ್ತಿದ್ದವು. ರೆಡ್ ಕ್ರಾಸ್ ಸಂಸ್ಥೆಯ ಮೂಲತತ್ವಗಳನ್ನೊಳಗೊಂಡ "ಪ್ರಥಮ ಜಿನೀವಾ ಒಪ್ಪಂದ"ವನ್ನು 1864ರಲ್ಲಿ ಮಾಡಿಕೊಳ್ಳಲಾಗಿದ್ದು, ಅದಕ್ಕೆ ಡ್ಯೂನಾಂಟ್ ಅವರು ಸಹಿ ಮಾಡಿದ್ದರು ಹಾಗೂ ಈ ಒಪ್ಪಂದಕ್ಕೆ 1864 ರ ಆಗಸ್ಟ್ 12 ರಂದು 12 ರಾಷ್ಟ್ರಗಳು ಸಹಿ ಮಾಡಿದ್ದವು. ಅನಂತರದ ವರ್ಷಗಳಲ್ಲಿ ಯುದ್ಧಗಳು ಜರುಗುತ್ತಲೇ ಇದ್ದವು. ಅಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸಲಾಗುತ್ತಿತ್ತು. ಇವುಗಳು ಮುಂದಿನ ಒಪ್ಪಂದಗಳಲ್ಲಿ ಸೇರ್ಪಡೆ ಆಗುತ್ತಿದ್ದವು.

ಎರಡನೆಯ ಜಿನೀವಾ ಒಪ್ಪಂದವು 1906ರ ಜುಲೈ 6ರಂದು ಸಹಿ ಮಾಡಲ್ಪಟ್ಟಿತು. ಮೂರನೇ ಜಿನೀವಾ ಒಪ್ಪಂದವನ್ನು 1929ರ ಜುಲೈ 12 ರಂದು ಏರ್ಪಡಿಸಿದ್ದು, ಅದು ಯುದ್ಧ ಕೈದಿಗಳ ಆರೈಕೆಗೆ ಸಂಬಂಧಿಸಿತ್ತು.

ಅಂತಿಮವಾಗಿ ನಾಲ್ಕನೆಯ ಜಿನೀವಾ ಒಪ್ಪಂದಕ್ಕೆ 1949ರ ಆಗಸ್ಟ್ 12 ರಂದು ಸಹಿ ಮಾಡಲಾಯಿತು, ಅದರಲ್ಲಿ ಯುದ್ಧೇತರ ವ್ಯಕ್ತಿಗಳು ಒಳಗೊಂಡಿದ್ದರಿಂದ ಗಮನಾರ್ಹವಾಯಿತು.

## ಮೊದಲನೇ ಜಿನೀವಾ ಒಪ್ಪಂದ :-

ಈ ಒಪ್ಪಂದದಂತೆ ಯುದ್ಧರಂಗದಲ್ಲಿ ಗಾಯಗೊಂಡ ಹಾಗೂ ರೋಗಗ್ರಸ್ಥ ಸೈನಿಕರನ್ನು ರಕ್ಷಿಸುವ ಉದ್ದೇಶವಾಗಿತ್ತು. ಅದರ ಕೆಲವು ಮುಖ್ಯ ಅಂಶಗಳು ಈ ಕೆಳಗಿನಂತಿವೆ:-

1. ಯುದ್ಧರಂಗದಲ್ಲಿನ ರೋಗಿ ಹಾಗೂ ಗಾಯಾಳುಗಳನ್ನು ಗುರುತಿಸಬೇಕು, ರಕ್ಷಿಸಬೇಕು ಹಾಗೂ ವೈದ್ಯಕೀಯ ಉಪಚಾರ ಒದಗಿಸಬೇಕು. ಅಂತಹವರ ರಾಷ್ಟ್ರೀಯತೆಯಲ್ಲಿ ಭೇದ ತೋರಬಾರದು.
2. ಯುದ್ಧದಲ್ಲಿ ಮೃತಪಟ್ಟವರನ್ನು ಪತ್ತೆ ಹಚ್ಚಬೇಕು ಹಾಗೂ ಅವರ ಮಾಹಿತಿ ವಿವರಗಳನ್ನು ರೆಡ್ ಕ್ರಾಸ್ ಸಂಸ್ಥೆಗೆ ಒದಗಿಸಬೇಕು.
3. ಗಾಯಗೊಂಡ ಸೈನಿಕರ ಹಾಗೂ ಶರಣಾಗತರಾದ ಸೇನಾ ತುಕಡಿಗಳ ಮೇಲೆ ಆಕ್ರಮಣ ಮಾಡಬಾರದು.
4. ತುರ್ತು ಚಿಕಿತ್ಸಾ ಘಟಕ, ವೈದ್ಯಾಧಿಕಾರಿಗಳು ಹಾಗೂ ಆಸ್ಪತ್ರೆ ಸಿಬ್ಬಂದಿ ಇವರ ಮೇಲೆ ದಾಳಿ ಮಾಡುವಂತಿಲ್ಲ. ಇವರನ್ನು ಯುದ್ಧ ತಟಸ್ಥರೆಂದು ಪರಿಗಣಿಸಬೇಕು. ಅವರಿಗೆ ಸುರಕ್ಷತಾ ಭದ್ರತೆಯನ್ನು ಒದಗಿಸಬೇಕು.
5. ಬಿಳಿ ಹಿನ್ನೆಲೆಯಲ್ಲಿನ ಕೆಂಪು ಕ್ರಾಸ್‌ನ್ನು ಸುರಕ್ಷಾ ಲಾಂಛನವಾಗಿ ಮಾನ್ಯತೆ ನೀಡಬೇಕು.

6. ಒಪ್ಪಂದದಲ್ಲಿ ನಮೂದಿಸಲ್ಪಟ್ಟ ಆಸ್ಪತ್ರೆ ಹಾಗೂ ಇತರ ಸಂಘಟನೆಗಳನ್ನು ಯುದ್ಧದಲ್ಲಿ ನಿರತರಾದವರು ಯುದ್ಧಕ್ಕೆ ಬೆಂಬಲಿಸುವ ಯಾವುದೇ ಯುದ್ಧ ಕಾರ್ಯಗಳಿಗಾಗಿ ಬಳಸಬಾರದು.

7. ಸೈನ್ಯಾಧಿಕಾರಿಗಳು, ಗಾಯಗೊಂಡ ಖಾಯಿಲೆಯಿಂದ ಮೃತರಾದ ಸೈನಿಕರ ಮಾಹಿತಿ ವಿವರಗಳನ್ನು ದಾಖಲಿಸಿಡುವ ಅಗತ್ಯವಿದೆ. ಆ ಮಾಹಿತಿಯನ್ನು ಕೇಂದ್ರೀಯ ಯುದ್ಧ ಖೈದಿಗಳ ಏಜೆನ್ಸಿ ಎಂಬ ಮಧ್ಯವರ್ತಿಯ ಮೂಲಕ ವೈರಿ ಪಡೆಗೆ ತಿಳಿಸಬೇಕು.

8. ಯುದ್ಧರಂಗದ ವ್ಯಾಪ್ತಿ ಪ್ರದೇಶದಲ್ಲಿರುವ ಇತರ ನಾಗರೀಕರನ್ನು ಹಾಗೂ ಪರಿಹಾರಕಾರಕ ಸಂಘಟನೆಗಳನ್ನು, ಗಾಯಾಳುಗಳನ್ನು ಪತ್ತೆ ಹಚ್ಚಲು ಹಾಗೂ ಅವರಿಗೆ ಚಿಕಿತ್ಸಾ ಉಪಚಾರವನ್ನು ಒದಗಿಸಲು ಸಹಾಯ ಪಡೆಯಬಹುದು. ಗಾಯಾಳುಗಳನ್ನು ಉಪಚರಿಸುವ ಇಂತಹ ವ್ಯಕ್ತಿಗಳಿಗೆ ತೊಂದರೆ ನೀಡಬಾರದು ಮತ್ತು ಬಂಧಿಸಬಾರದು.

9. ಸೈನ್ಯದಲ್ಲಿ ಪಾದ್ರಿಗಳನ್ನು ತಟಸ್ಥರೆಂದು ಗಮನಿಸಿ ರಕ್ಷಣೆ ನೀಡಬೇಕು.

## ಎರಡನೇ ಜಿನೀವಾ ಒಪ್ಪಂದ :-

ಈ ಒಪ್ಪಂದಲ್ಲಿ ಮೊದಲನೇ ಜಿನೀವಾ ಒಪ್ಪಂದದ ಎಲ್ಲ ನಿಯಮಗಳನ್ನೂ ನೌಕಾಯುದ್ಧದಲ್ಲಿ ಗಾಯಗೊಂಡ ಹಾಗೂ ಖಾಯಿಲೆಯಿಂದ ನರಳುತ್ತಿರುವ ಸೈನಿಕರಿಗೆ ಅನ್ವಯಿಸಿ, ನೆರವು ನೀಡುವುದನ್ನು ಸೂಚಿಸಿದೆ. ಹಡಗು ಮುಳುಗಿದಾಗ ಆಪತ್ತಿಗೀಡಾದ ಎಲ್ಲ ನಾವಿಕರಿಗೂ ಇವು ಅನ್ವಯಿಸುತ್ತವೆ.

## ಮೂರನೇ ಜಿನೀವಾ ಒಪ್ಪಂದ :–

ಈ ಒಪ್ಪಂದವು ಯುದ್ಧ ಖೈದಿಗಳಿಗೆ ಸಂಬಂಧಿಸಿದ್ದಾಗಿದೆ:

1. ಯುದ್ಧಖೈದಿಗಳನ್ನು ಸುರಕ್ಷಿತ ಸ್ಥಳಗಳಲ್ಲಿಡಬೇಕು. ಅವರಿಗೆ ಉತ್ತಮ ಆಹಾರ, ಬಟ್ಟೆ ಒದಗಿಸಬೇಕು, ಅಗತ್ಯವಾದಾಗ ವೈದ್ಯಕೀಯ ಉಪಚಾರವನ್ನು ನೀಡಬೇಕು. ಅವರ ನಂಬಿಕೆಯಂತೆ ಪೂಜಿಸುವ ಸ್ವಾತಂತ್ರ್ಯ ಅವರಿಗಿರಬೇಕು.
2. ನಿಗದಿತ ಪತ್ರ ವ್ಯವಹಾರ ಸೌಲಭ್ಯವನ್ನು ಅವರಿಗೆ ಒದಗಿಸಬೇಕು.
3. ಯುದ್ಧ ಕೈದಿಗಳನ್ನು ಹೆಣ್ಣು–ಗಂಡು ಎಂಬ ಬೇದವಿಲ್ಲದೆ. ಗೌರವದಿಂದ ನೋಡಿಕೊಳ್ಳಬೇಕು.
4. ಖೈದಿಗಳು ತಮ್ಮ ಹೆಸರು, ವಿಳಾಸ ಗುರುತಿನ ಸಂಖ್ಯೆ ಮತ್ತು ಸೇನಾಪಡೆಯ ವಿವರ ಇತ್ಯಾದಿ ಕೊಡಬೇಕಾಗುತ್ತದೆ.
5. ರೆಡ್ ಕ್ರಾಸ್ ಸಂಸ್ಥೆಯು ಅಂತರರಾಷ್ಟ್ರೀಯ ಸಮಿತಿಗೆ ಪರಿಹಾರ ಸಾಮಗ್ರಿಯನ್ನು ವಿತರಿಸುವ ಸೌಲಭ್ಯ ಹೊಂದಿರಬೇಕು.
6. ರೆಡ್ ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳಿಗೆ ಯುದ್ಧ ಖೈದಿಗಳನ್ನು ಅವರ ಶಿಬಿರಗಳಲ್ಲಿ ಭೇಟಿಯಾಗುವ ಸೌಲಭ್ಯಗಳಿರಬೇಕು. ಅವರ ಜೀವನ ಸ್ಥಿತಿ ಹಾಗೂ ಕುಂದು–ಕೊರತೆಗಳನ್ನು ತಿಳಿದುಕೊಳ್ಳಲು ಅವರೊಂದಿಗೆ ಖಾಸಗಿಯಾಗಿ ಸಮಾಲೋಚನೆ ಮಾಡಲು ಅವಕಾಶಗಳಿರಬೇಕು.
7. ಯುದ್ಧ ಖೈದಿಗಳನ್ನು ಅಮಾನವೀಯ ಕೃತ್ಯಗಳಿಂದ ರಕ್ಷಿಸಬೇಕು. ಅವರನ್ನು ಪ್ರಾಯೋಗಿಕ ಉದ್ದೇಶಗಳಿಗಾಗಿ ಬಳಸಬಾರದು. ಸಮರ್ಪಕ ನ್ಯಾಯ ವಿಚಾರಣೆ ನಡೆಸದೆ, ಅವರನ್ನು ಮರಣದಂಡನೆಗೆ ಗುರಿಪಡಿಸುವಂತಿಲ್ಲ.

8. ಯುದ್ಧ ಕೈದಿಗಳನ್ನು ಪ್ರತಿ ಆರು ತಿಂಗಳಿಗೊಮ್ಮೆ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು.

9. ಯುದ್ಧ ಖೈದಿಗಳನ್ನು ಅವರ ವಯಸ್ಸು, ಲಿಂಗ ಹಾಗೂ ದರ್ಜೆಗೆ ಅನುಗುಣವಾಗಿ ಕಾರ್ಮಿಕರಾಗಿ ಉಪಯೋಗಿಸಬಹುದು.

10. ಅಂತಹ ಯುದ್ಧ ಖೈದಿ ಕಾರ್ಮಿಕರಿಗೆ ಅವರ ದರ್ಜೆಗನುಸಾರವಾಗಿ ಅವರು ಮಾಡಿದ ಕೆಲಸಕ್ಕೆ ಸಂಬಳ ಕೊಡಬೇಕು.

11. ಯುದ್ಧ ಖೈದಿಗಳು ಗುಪ್ತ ಮತದಾನದ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಅನುಮತಿಯಿರಬೇಕು. ಆ ಪ್ರತಿನಿಧಿಗಳು ಸೈನ್ಯದ ಅಧಿಕಾರಿಗಳನ್ನು ಹಾಗೂ ರೆಡ್ ಕ್ರಾಸ್‌ನ ಅಂತರರಾಷ್ಟ್ರೀಯ ಸಮಿತಿಯನ್ನು ಯುದ್ಧ ಖೈದಿಗಳ ಪರವಾಗಿ ಪ್ರಾತಿನಿಧ್ಯ ವಹಿಸಿ ಸಂಪರ್ಕಿಸುತ್ತಾರೆ.

## ನಾಲ್ಕನೆಯ ಜಿನೀವಾ ಒಪ್ಪಂದ :–

ಈ ಒಪ್ಪಂದವು ಯುದ್ಧ ಸಮಯದಲ್ಲಿ ಯುದ್ಧೇತರ ನಾಗರೀಕರ ಸಂರಕ್ಷಣೆಗೆ ಸಂಬಂಧಿಸಿದೆ. ಅವರನ್ನು ಸಂರಕ್ಷಿಸುವುದು ಆಕ್ರಮಿಸಿದ ಸೈನ್ಯದ ಹೊಣೆಗಾರಿಕೆಯಾಗಿದೆ.

1. **ಸುರಕ್ಷಿತ ವಲಯಗಳನ್ನು ನಿರ್ಮಿಸಬೇಕು:** ಅವುಗಳೆಂದರೆ ಯುದ್ಧ ಗಾಯಾಳುಗಳನ್ನು ರಕ್ಷಿಸಲು ವ್ಯವಸ್ಥೆ ಮಾಡಿದ ಆಸ್ಪತ್ರೆಗಳು ಮತ್ತು ಪ್ರದೇಶಗಳಾಗಿವೆ. ಇಲ್ಲಿ ಗಾಯಾಳು ಸೈನಿಕರನ್ನು ವೃದ್ಧ ವ್ಯಕ್ತಿಗಳನ್ನು 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು, ಗರ್ಭಿಣಿ ತಾಯಂದಿರನ್ನು, 7 ವರ್ಷಕ್ಕಿಂತ ಕಿರಿಯ ಮಕ್ಕಳ ತಾಯಂದಿರನ್ನು ಯುದ್ಧ ಪರಿಣಾಮಗಳಿಂದ ರಕ್ಷಿಸುವ ಕಾರ್ಯವನ್ನು ಈ ಸುರಕ್ಷಿತ

ವಲಯದಲ್ಲಿ ಕೈಗೊಳ್ಳುವುದು. ಯುದ್ಧನಿರತರು ತಾವು ಆಕ್ರಮಿಸಿಕೊಂಡ ಅಥವಾ ಮುತ್ತಿಗೆ ಹಾಕಿದ ಸೈನ್ಯದಿಂದ ಗಾಯಾಳು ಸೈನಿಕರನ್ನು, ರೋಗಗ್ರಸ್ಥರನ್ನು, ವೃದ್ಧರನ್ನು, ಮಕ್ಕಳನ್ನು ಹಾಗೂ ಗರ್ಭಿಣಿ ತಾಯಂದಿರನ್ನು, ತಮ್ಮ ಆಕ್ರಮಣದಿಂದ ಹೊರತುಪಡಿಸಬೇಕು. ಪಾದ್ರಿಗಳು, ವೈದ್ಯರು, ವೈದ್ಯಕೀಯ ಸಾಮಾಗ್ರಿ ಇತ್ಯಾದಿ ಯುದ್ಧನಿರತ ಪ್ರದೇಶಗಳಿಗೆ ಮುಕ್ತವಾಗಿ ಪ್ರವೇಶಿಸುವ ಅವಕಾಶಗಳಿರಬೇಕು.

2. ಯುದ್ಧದಲ್ಲಿನ ಗಾಯಾಳುಗಳನ್ನು, ಖಾಯಿಲೆಯಿಂದ ನರಳುತ್ತಿರುವವರನ್ನು, ವೃದ್ಧರನ್ನು ಹಾಗೂ ಆಸ್ಪತ್ರೆಗಳನ್ನು "ಯುದ್ಧೇತರ ಆಸ್ಪತ್ರೆ" ಗಳೆಂದು ಪರಿಗಣಿಸಬೇಕು. ಅವುಗಳನ್ನು ಆಕ್ರಮಿಸಬಾರದು. ಅವುಗಳಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಒದಗಿಸಬೇಕು.



3. **ಪರಿಹಾರ ಸಾಮಾಗ್ರಿಗಳು:** ವೈದ್ಯಕೀಯ ಹಾಗೂ ಆಸ್ಪತ್ರೆ ಸಾಮಾಗ್ರಿಗಳು ಹಾಗೂ ಧಾರ್ಮಿಕ ಪೂಜಾ ಸಾಮಾಗ್ರಿಗಳನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೇ ಸಾಗಿಸಲು ಅನುಮತಿಯಿರಬೇಕು.

4. **ಮಕ್ಕಳ ಕಲ್ಯಾಣ:** ಯುದ್ಧದಿಂದ ಅನಾಥರಾದ ಅಥವಾ ಕುಟುಂಬದಿಂದ ಬೇರ್ಪಟ್ಟ 15 ವರ್ಷಕ್ಕಿಂತ ಕಿರಿಯ ವಯಸ್ಸಿನ ಮಕ್ಕಳಿಗೆ ಅವರ ಧಾರ್ಮಿಕ ಪದ್ಧತಿಯಂತೆ ಶಿಕ್ಷಣ ಹಾಗೂ ಇನ್ನಿತರ ವ್ಯವಸ್ಥೆ ಒದಗಿಸುವಂತೆ ನೋಡಿಕೊಳ್ಳಬೇಕು.

5. **ಕುಟುಂಬದ ವರ್ತಮಾನ:** ವೈರಿ ಪಡೆಯಿಂದ ಎಲ್ಲ ವ್ಯಕ್ತಿಗಳು, ದೂರ ಪ್ರದೇಶದಲ್ಲಿರುವ ತಮ್ಮ ಕುಟುಂಬದವರಿಗೆ ಕ್ಷೇಮ ಸಮಾಚಾರವನ್ನು ತಿಳಿಸುವ ಮತ್ತು ಅವರಿಂದ ಉತ್ತರ ಪಡೆಯುವ ಅವಕಾಶ ನೀಡಬೇಕು.



6. **ಆಶ್ರಿತ ವ್ಯಕ್ತಿಗಳು:** ಯುದ್ಧ ತಲೆದೋರಿದಾಗ ಯುದ್ಧನಿರತ ಪಕ್ಷಗಳ ಅಥವಾ ಆಕ್ರಮಿಸಿಕೊಂಡ ಸೈನ್ಯದ ವಶದಲ್ಲಿರುವ ಯಾವುದೇ ಪಕ್ಷದ ರಾಷ್ಟ್ರಕ್ಕೆ ಸಂಬಂಧಿಸಿದ ವ್ಯಕ್ತಿಯನ್ನು "ರಕ್ಷಿತವ್ಯಕ್ತಿ/ಆಶ್ರಿತವ್ಯಕ್ತಿ" ಎಂದು ಪರಿಗಣಿಸಲಾಗುತ್ತದೆ.

   * ಆಶ್ರಿತ ವ್ಯಕ್ತಿಗಳು ಧಾರ್ಮಿಕ ಶ್ರದ್ಧೆಗಳನ್ನು ಮುಂದುವರೆಸಲು ಅನುಮತಿಸಲ್ಪಟ್ಟಿರಬೇಕು ಹಾಗೂ ತಮ್ಮ ಹಕ್ಕುಗಳಿಗಾಗಿ ಮಾನವೀಯ ಹಾರೈಕೆಗಾಗಿ ಹಕ್ಕು ಹೊಂದಿರಬೇಕು.

   * ಆಶ್ರಿತ ವ್ಯಕ್ತಿಗಳು ರೆಡ್ ಕ್ರಾಸ್ ಸಂಸ್ಥೆಯ ಅಂತರರಾಷ್ಟ್ರೀಯ ಸಮಿತಿ ಅಥವಾ ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗೆ – ಇವುಗಳ ಸಂರಕ್ಷಣಾ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶವಿರಬೇಕು.

   * ಆಶ್ರಿತ ವ್ಯಕ್ತಿಗಳಿಗೆ ಗೊತ್ತಿರುವ ವಿಷಯವನ್ನು ಬಹಿರಂಗಪಡಿಸಲು ಅವರನ್ನು ಒತ್ತಾಯ ಪಡಿಸಬಾರದು.

   * ಆಸ್ತಿಯನ್ನು ಅಪಹರಿಸುವುದಾಗಲಿ ಅಥವಾ ದರೋಡೆ ಮಾಡುವುದಾಗಲಿ ನಿಷೇಧಿಸಲ್ಪಟ್ಟಿದೆ.

7. **ವಿದೇಶಿಯರು:** ಯುದ್ಧ ತಲೆದೋರಿದಾಗ ವೈರಿ ರಾಷ್ಟ್ರಕ್ಕೆ ಸಂಬಂಧಿಸಿದ ವಿದೇಶಿಯರು ಯುದ್ಧ ಸಂಭವಿಸಲಿರುವ ರಾಷ್ಟ್ರದಲ್ಲಿ ವಾಸಿಸುತ್ತಿದ್ದರೆ, ಅವರಿಗೆ ಆ ದೇಶ ಬಿಡಲು ಅನುಮತಿಯಿರಬೇಕು. ಯುದ್ಧ ಸಾರಿರುವ ರಾಷ್ಟ್ರದಿಂದ ಅಂತಹ ವಿದೇಶಿಯರು ಬಂಧನಕ್ಕೂ ಒಳಗಾಗಬಹುದು. ಅಂತಹ ಸಂದರ್ಭದಲ್ಲಿ ಅವರಿಗೆ ಅಗತ್ಯವಿರುವ ಪರಿಹಾರ, ವೈದ್ಯಕೀಯ ಉಪಚಾರ ಹಾಗೂ ಚಿಕಿತ್ಸೆ ನೀಡಬೇಕು. ಅದಕ್ಕಾಗಿ ವೈರಿ ರಾಷ್ಟ್ರವು ಸೌಲಭ್ಯ ಒದಗಿಸಬೇಕು.

8. ಆಕ್ರಮಿತ ಪ್ರದೇಶದಿಂದ ವೈರಿ ಪ್ರದೇಶಕ್ಕೆ ಆಶ್ರಿತ ವ್ಯಕ್ತಿಗಳನ್ನು ಸ್ಥಳಾಂತರಿಸುವುದು ನಿಷೇಧಿಸಲಾಗುತ್ತದೆ.

9. ಅತಿಕ್ರಮಿತ ರಾಷ್ಟ್ರವು ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕಾಗಿ ನಿಯೋಜಿತವಾಗಿರುವ ಸಂಸ್ಥೆಗಳೊಂದಿಗೆ ಸೌಹಾರ್ದತೆಯಿಂದ ವರ್ತಿಸಬೇಕು.

10. ಅತಿಕ್ರಮಿತ ರಾಷ್ಟ್ರವು ಕಾನೂನು ಮತ್ತು ಸುವ್ಯವಸ್ಥೆ ಕಾಪಾಸುಲು ಹೊಣೆಗಾರನಾಗಿರಬೇಕು.

11. ಆಕ್ರಮಿಸಿರುವ ಪ್ರದೇಶದ ನಾಗರೀಕರಿಗೆ ಆಹಾರದ ಹಾಗೂ ಇತರ ಸಾಮಾಗ್ರಿಗಳ ಸಮರ್ಪಕ ಪೂರೈಕೆಗಾಗಿ ಅತಿಕ್ರಮಿತ ರಾಷ್ಟ್ರೀಯ ವ್ಯವಸ್ಥೆ ಮಾಡಬೇಕು.

12. ಖಾಸಗಿ ಆಸ್ತಿ ಹಾಳು ಮಾಡುವುದನ್ನು ನಿಷೇಧಿಸಲಾಗಿದೆ.

13. ಜನರಿಗೆ ಪರಿಹಾರ ಸಾಮಾಗ್ರಿ ಒದಗಿಸಲು ಮತ್ತು ತನ್ನ ಮಾನವೀಯ ಕಾರ್ಯಗಳನ್ನು ನಿರ್ವಹಿಸಲು ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗೆ ಅನುಮತಿಯಿರಬೇಕು.

14. ಬಂಧಿತ ನಾಗರೀಕರನ್ನು ಕೆಲಸ ಮಾಡಲಿಕ್ಕೆ ಒತ್ತಾಯಿಸಬಾರದು.

ಈ ಒಪ್ಪಂದಗಳು ಯಾವುದೇ ರಾಷ್ಟ್ರಗಳಲ್ಲಿನ ದಂಗೆಯ ಅಥವಾ ನಾಗರೀಕ ಯುದ್ಧಗಳಿಗೆ ಅನ್ವಯಿಸುತ್ತವೆ.

* * * *

ಅಧ್ಯಾಯ
IV

# ಅಂತರ ರಾಷ್ಟ್ರೀಯ ರೆಡ್ ಕ್ರಾಸ್– ಅದರ ಸಂಘಟನೆಗಳು

"ಅಂತರ ರಾಷ್ಟ್ರೀಯ ರೆಡ್ ಕ್ರಾಸ್" ಎಂಬ ಸಂಸ್ಥೆಯು ಸಂಕೀರ್ಣಮಯವಾಗಿದೆ.

ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ, ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗಳು ಮತ್ತು ರೆಡ್ ಕ್ರಾಸ್ ಸೊಸೈಟಿಗಳ ಒಕ್ಕೂಟ–ಇವುಗಳ ಸಾಮೂಹಿಕ ಹೆಸರೇ "ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗಳು" ಎಂಬುದು ಸಂಯೋಜನೆ ಮತ್ತು ಕಾರ್ಯಾಚರಣೆಯಲ್ಲಿ ಭಿನ್ನವಾಗಿ ತೋರಿದರೂ ಈ ಮೂರೂ ಸಂಘಟನೆಗಳನ್ನು "ಅಂತರ ರಾಷ್ಟ್ರೀಯ ರೆಡ್ ಕ್ರಾಸ್" ಎಂದು ಒಟ್ಟಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗಿದೆ.

ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮ್ಮೇಳನವು ರೆಡ್ ಕ್ರಾಸ್ ಸಂಸ್ಥೆಗಳ ಸರ್ವೋಚ್ಚ ಪ್ರಾಧಿಕಾರವಾಗಿದೆ. ಈ ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮ್ಮೇಳನ ಸಮಿತಿಯು ಸಾರ್ವತ್ರಿಕವಾಗಿ ರೆಡ್ ಕ್ರಾಸ್ ಸಂಘಟನೆಗಳು ಪಾಲಿಸಬೇಕಾದ ಮೂಲತತ್ವಗಳನ್ನು ಅಧಿಕೃತವಾಗಿ ರೂಪಿಸಿತು ಮತ್ತು ರೆಡ್ ಕ್ರಾಸ್ ಸಂಘಟನೆಯ ಅಂಗಸಂಸ್ಥೆಗಳಿಗೆ ವಹಿಸಿಕೊಟ್ಟ ಕಾರ್ಯನಿರ್ವಹಣೆಗಾಗಿ ಮಾರ್ಗದರ್ಶನಗಳನ್ನು ಒದಗಿಸುತ್ತದೆ.

ಈ ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯು ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಸಭೆ ಸೇರುತ್ತದೆ. ಈ ಸಭೆಯಲ್ಲಿ ರೆಡ್ ಕ್ರಾಸ್ ಸಂಸ್ಥೆಗಳು ಹಾಗೂ ಜಿನೀವಾ ಒಪ್ಪಂದ ಮಾಡಿಕೊಂಡ ರಾಷ್ಟ್ರಗಳ ಸರ್ಕಾರಗಳು ಪಾಲ್ಗೊಳ್ಳುತ್ತವೆ.

ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಂಘಟನೆ ಮತ್ತು ಅದರ ಐದು ಅಂಗ ಸಂಸ್ಥೆಗಳ ರಚನೆ ಹಾಗೂ ಕಾರ್ಯಗಳ ವಿವರ ಈ ಕೆಳಗಿನಂತಿವೆ:–

1. ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ
2. ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗಳು
3. ರೆಡ್ ಕ್ರಾಸ್ ಸೊಸೈಟಿಗಳ ಒಕ್ಕೂಟ
4. ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮ್ಮೇಳನ
5. ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಯ ಸ್ಥಾಯಿ ಆಯೋಗ

## 1. ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ :–

“ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ”ಯು ಸರ್ಕಾರೇತರ, ರಾಜಕೀಯೇತರ, ಧಾರ್ಮಿಕೇತರ, ಸ್ವಾಯತ್ತ ಧರ್ಮಾರ್ಥ ಸಂಸ್ಥೆಯಾಗಿದೆ. ಇದು ಯಾವುದೇ ದೇಶದ ಸರ್ಕಾರ, ರಾಜಕೀಯ ಅಥವಾ ಧರ್ಮಕ್ಕೆ ಸಂಬಂಧಿಸಿಲ್ಲ, ಅದೊಂದು ಮಾನವೀಯ ಸೇವಾ ಮನೋಭಾವವಿರುವ ಸಂಘಟನೆಯಾಗಿದೆ.

ಈ ಸಂಸ್ಥೆಯ ಕೇಂದ್ರ ಕಛೇರಿಯು ಯುದ್ಧ ತಟಸ್ಥ ರಾಷ್ಟ್ರವಾದ ಸ್ವಿಡ್ಜರ್ಲೆಂಡ್‌ನ ಜಿನೀವಾ ನಗರದಲ್ಲಿದೆ. ಈ ದೇಶವು ಯುದ್ಧ ತಟಸ್ಥ ರಾಷ್ಟ್ರವಾಗಿಯೇ ಉಳಿದಿದೆ. ಈ ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯು ಸಂಪೂರ್ಣವಾಗಿ ಸ್ವಿಡ್ಜರ್ಲೆಂಡ್ ನಾಗರೀಕರಿಂದಲೇ ರಚಿತವಾಗಿದ್ದು, ಅದರಲ್ಲಿ ಆ ದೇಶದ 25 ಸದಸ್ಯರಿದ್ದಾರೆ. ಈ ಸದಸ್ಯ ವ್ಯಕ್ತಿಗಳು ಆ ದೇಶದ ಪ್ರತಿಷ್ಠಿತ ವ್ಯಕ್ತಿಗಳಾಗಿರುತ್ತಾರೆ. ಈ ಸದಸ್ಯರನ್ನು ಸರ್ಕಾರ ನೇಮಕ ಮಾಡಿಲ್ಲ, ಅವರು ಚುನಾಯಿಸಲ್ಪಟ್ಟಿಲ್ಲ, ಸೇವೆ ಸಲ್ಲಿಸಲು ಸ್ವಯಂ ಪ್ರೇರಣೆಯಿಂದ ಮುಂದೆ ಬಂದವರು.

ಸಮಿತಿಯು ತನ್ನ ಅಧ್ಯಕ್ಷರನ್ನು ತಾನೇ ಚುನಾಯಿಸುತ್ತದೆ. ಸಮಿತಿಯಲ್ಲಿ ಯಾರಾದರೂ ಮೃತರಾದರೆ, ಆ ಸ್ಥಾನಕ್ಕೆ ಮತ್ತೊಬ್ಬ ಸ್ವಿಡ್ಜರ್ಲೆಂಡ್ ದೇಶದ ನಾಗರೀಕನನ್ನು ತೆಗೆದುಕೊಳ್ಳಲಾಗುತ್ತದೆ. "ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ" ಈ ಪದದ ಅರ್ಥವೇನೆಂದರೆ ಈ ಸಮಿತಿಯು ಹಲವಾರು ರಾಷ್ಟ್ರಗಳ ನಾಗರೀಕರನ್ನು ಒಳಗೊಂಡಿದೆ ಎಂಬುದಲ್ಲ. "ಸಮಿತಿಯ ಕಾರ್ಯಾಚರಣೆಯು ಅಂತರ ರಾಷ್ಟ್ರೀಯವಾಗಿ ವ್ಯಾಪಿಸಿದೆ" ಎಂಬ ಅರ್ಥ ನೀಡುತ್ತದೆ.

## 2. ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗಳು :–

ಸ್ಟಾಕ್ ಹೋಂನಲ್ಲಿ 1948ರಲ್ಲಿ ಜರುಗಿದ 17ನೇ ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮ್ಮೇಳನವು 10 ಷರತ್ತುಗಳನ್ನು ವಿಧಿಸಿರುತ್ತದೆ. ಅದರ ಪ್ರಕಾರ

ಯಾವುದೇ ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಯು "ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ"ಯಿಂದ ಮಾನ್ಯತೆ ಪಡೆಯಬೇಕಾದರೆ ಈ ಕೆಳಕಂಡ ಷರತ್ತುಗಳನ್ನು ಪುರೈಸಬೇಕಾಗಿರುತ್ತದೆ. ಕೆಲವು ಷರತ್ತುಗಳು ಹೀಗಿವೆ:

1. ಜಿನೀವಾ ಒಪ್ಪಂದವನ್ನು ಮಾಡಿಕೊಳ್ಳುವ ಪ್ರತಿಯೊಂದು ರಾಷ್ಟ್ರವು ಸ್ವಾತಂತ್ರ್ಯ ಪಡೆದಿರಬೇಕು.
2. ಪ್ರತಿ ರಾಷ್ಟ್ರದಲ್ಲಿ ಏಕಮಾತ್ರ ರಾಷ್ಟ್ರೀಯ ರೆಡ್ ಕ್ರಾಸ್ ಸಂಘಟನೆ ಇರಬೇಕು.
3. ಅದು ಆ ದೇಶದ ಸಹಾಯಕ ಪರಿಹಾರ ಸಂಘಟನೆಯೆಂದು ಆ ದೇಶದ ಸರ್ಕಾರದಿಂದ ಮಾನ್ಯತೆ ಪಡೆದಿರಬೇಕು.
4. ಅದು ಸರ್ಕಾರದ ಹಿಡಿತದಿಂದ ಸ್ವತಂತ್ರವಾಗಿರಬೇಕು. ಅಂದರೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು.
5. ಯಾವುದೇ ಧರ್ಮ, ವರ್ಣ, ರಾಜಕೀಯ ಶ್ರದ್ಧೆ ಇತ್ಯಾದಿಗಳ ತಾರತಮ್ಯ ಮಾಡದೇ ರಾಷ್ಟ್ರೀಯ ರೆಡ್ ಕ್ರಾಸ್ ಸಂಘಟನೆ ಸೇವೆಯ ಪ್ರಯೋಜನಗಳನ್ನು ದೇಶಾದ್ಯಂತ ವಿಸ್ತರಿಸಬೇಕು.
6. ರಾಷ್ಟ್ರದ ನೈಸರ್ಗಿಕ ವಿಕೋಪ ಪರಿಸ್ಥಿತಿ ಇಲ್ಲದ ಸಮಯದಲ್ಲಿ ಮಾನವೀಯ ಸೇವಾ ಕಾರ್ಯಾಚರಣೆಗಳ ಹೊಣೆಗಾರಿಕೆಯು "ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ"ಯದೇ ಆಗಿರುತ್ತದೆ.

**ಅದರ ಮೂರು ಮುಖ್ಯ ಉದ್ದೇಶಗಳೆಂದರೆ:**

(ಅ) ಆರೋಗ್ಯ ಸುಧಾರಣೆ

(ಆ) ರೋಗಗಳ ನಿವಾರಣೆ

(ಇ) ಸಂಕಟಗಳ ನಿವಾರಣೆ/ ಉಪಶಮನ

## 3. ರೆಡ್ ಕ್ರಾಸ್ ಸಂಸ್ಥೆಗಳ ಒಕ್ಕೂಟ :–

ಈ ಒಕ್ಕೂಟವು ಎಲ್ಲಾ ರಾಷ್ಟ್ರೀಯ ರೆಡ್ ಕ್ರಾಸ್, ರೆಡ್‌ಕ್ರೆಸೆಂಟ್, ರೆಡ್ ಲಯನ್ ಹಾಗೂ ಸನ್ ಸೊಸೈಟಿ ಇವುಗಳ ಅಂತರ ರಾಷ್ಟ್ರೀಯ ಒಕ್ಕೂಟವಾಗಿದೆ.

ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗಳಲ್ಲಿ ಪರಸ್ಪರ ಸಹಕಾರ ಉಂಟು ಮಾಡಲು ಹಾಗೂ ಆರೋಗ್ಯ ಸುಧಾರಣೆ, ರೋಗ ನಿರ್ಮೂಲನೆ ಹಾಗೂ ಸಂಕಟ ನಿವಾರಣೆ, ಇವೇ ಮುಂತಾದ ಚಟುವಟಿಕೆಗಳಲ್ಲಿ ಸೇವೆ ಮಾಡುವ ಉದ್ದೇಶಗಳಿಗಾಗಿ ಈ ಅಂತರ ರಾಷ್ಟ್ರೀಯ ಒಕ್ಕೂಟವನ್ನು 1919ರ ಮೇ 5ರಂದು ಪ್ಯಾರಿಸ್‌ನಲ್ಲಿ ಸ್ಥಾಪಿಸಲಾಗಿದೆ.

## 4. ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮ್ಮೇಳನ :–

ರೆಡ್ ಕ್ರಾಸ್ ಸೊಸೈಟಿಗಳ ಸರ್ವೋಚ್ಚ ಪ್ರಾಧಿಕಾರವೇ ಈ "ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮ್ಮೇಳನ". ಇದು ಸಾಮಾನ್ಯವಾಗಿ ಪ್ರತಿ 4 ವರ್ಷಕ್ಕೊಮ್ಮೆ ಸಮಾವೇಶಗೊಳ್ಳುತ್ತದೆ. ಸಾಮಾನ್ಯವಾಗಿ ಯಾವ ರಾಷ್ಟ್ರದಲ್ಲಿ ಸಮ್ಮೇಳನವು ಸಮಾವೇಶಗೊಳ್ಳುವುದೋ ಆ "ರಾಷ್ಟ್ರದ ರೆಡ್ ಕ್ರಾಸ್" ಸಂಸ್ಥೆಯ ಮುಖ್ಯಸ್ಥನು ಆ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ.

ಈ ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮ್ಮೇಳನವು ಈ ಕೆಳಗಿನ ಅಂಗ ಸಂಸ್ಥೆಗಳನ್ನು ಒಳಗೊಂಡಿರುತ್ತದೆ:

1. ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ
2. ರೆಡ್ ಕ್ರಾಸ್ ಸೊಸೈಟಿಗಳ ಒಕ್ಕೂಟ
3. ಎಲ್ಲಾ ನ್ಯಾಷನಲ್ ರೆಡ್ ಕ್ರಾಸ್, ರೆಡ್ ಕ್ರೆಸೆಂಟ್, ರೆಡ್ ಲಯನ್ ಮತ್ತು ಸನ್ ಸೊಸೈಟಿಗಳ ಪ್ರತಿನಿಧಿಗಳು.
4. ಜಿನೀವಾ ಒಪ್ಪಂದಕ್ಕೆ ಸಹಿ ಹಾಕಿದ ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳು
5. ಅಂತರ ರಾಷ್ಟ್ರೀಯ ರೆಡ್ ಕ್ರಾಸ್‌ನ ಸ್ಥಾಯಿ ಆಯೋಗ

ಈ ಸ್ಥಾಯಿ ಸಮಿತಿಯು 9 ಸದಸ್ಯರಿಂದ ರಚಿತವಾಗಿದೆ. ಅದರ ಕಾರ್ಯಗಳು ಈ ಕೆಳಗಿನಂತಿವೆ:

1. ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಯ ಪ್ರಾಯೋಜಕತ್ವದಲ್ಲಿ ಮುಂಬರುವ ಅಂತರ ರಾಷ್ಟ್ರೀಯ ಸಮ್ಮೇಳನವನ್ನು ಏರ್ಪಡಿಸುವುದಕ್ಕಾಗಿ ವ್ಯವಸ್ಥೆ ಮಾಡುವುದು ಹಾಗೂ ಕಾರ್ಯಕ್ರಮ ಪಟ್ಟಿ ಸಿದ್ಧಪಡಿಸುವುದು.
2. ಎರಡು ಸಮ್ಮೇಳನಗಳ ಅವಧಿಯಲ್ಲಿ ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ ಹಾಗೂ ಒಕ್ಕೂಟ ಇವುಗಳ ನಡುವೆ ಸಾಮರಸ್ಯ ಮೂಡಿಸುವುದು.

## ಪ್ರಸ್ತುತ ವರದಿಯ ಪ್ರಕಾರ ಅಂತರರಾಷ್ಟ್ರೀಯ ರೆಡ್ ಕ್ರಾಸ್‌ಗಳಲ್ಲಿ ಮೂರು ಅಂಗ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ

### ಇಂಟರ್ ನ್ಯಾಷನಲ್ ಕಮಿಟಿ ಆಫ್ ರೆಡ್ ಕ್ರಾಸ್ (ಐ.ಸಿ.ಆರ್.ಸಿ.)

ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಮತ್ತು ರೆಡ್ ಕ್ರೆಸೇಂಟ್ ಚಳುವಳಿಯ ಸಂಯೋಜನೆಯಿಂದ 1863ರಲ್ಲಿ ಸ್ಥಾಪನೆಯಾದ ಐ.ಸಿ.ಆರ್.ಸಿ. ಯುದ್ಧದಲ್ಲಿ ಗಾಯಗೊಂಡವರ ಆರೋಗ್ಯ ಸುಧಾರಣೆ ಹಾಗೂ ಶುಶ್ರೂಷೆ ಮಾಡುವುದು, ಜೀವ ರಕ್ಷಣೆ, ಆರೋಗ್ಯ ಸುಧಾರಣೆ ಹಾಗೂ ಮಾನವನ ಘನತೆಯನ್ನು ಎತ್ತಿ ಹಿಡಿಯುವುದು. ಯುದ್ಧ ಖೈದಿಗಳನ್ನು ಸಂಪರ್ಕಿಸಿ ಅವರ ಆರೋಗ ಕ್ಷೇಮವನ್ನು ವಿಚಾರಿಸುವುದು, ಶಾಂತಿ ಸಂವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಂತರರಾಷ್ಟ್ರೀಯ ಮಾನವೀಯ ಕಾನೂನುಗಳನ್ನು ಅಳವಡಿಸಿಕೊಂಡು ಕಾನೂನುಗಳನ್ನು ಬಲಪಡಿಸಲು ಮತ್ತು ಎಲ್ಲಾ ರಾಷ್ಟ್ರಗಳಲ್ಲೂ ಕಾನೂನಿನ ಅರಿವನ್ನು ಮೂಡಿಸಲು ಪ್ರಯತ್ನಿಸುತ್ತಿದೆ.

### ಇಂಟರ್ ನ್ಯಾಷನಲ್ ಫೆಡರೇಷನ್ ಆಫ್ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟೀಸ್ (ಐ.ಎಫ್.ಆರ್.ಸಿ.)

ಐ.ಎಫ್.ಆರ್.ಸಿ.ಯು ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗಳ ಒಕ್ಕೂಟವಾಗಿದ್ದು ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗಳ ತತ್ವಗಳು ಹೊಂದಿದೆ. ಅಂತರರಾಷ್ಟ್ರೀಯ ಮುಖವಾಣಿ ಹಾಗೂ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತದೆ. ಪ್ರಪಂಚದಾದ್ಯಂತ ರಾಷ್ಟ್ರೀಯ ಸೊಸೈಟಿಗಳ ರಚನೆ ಹಾಗೂ ಅವುಗಳ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ. ಪ್ರಕೃತಿ ವಿಕೋಪಕ್ಕೆ ತುತ್ತಾದವರು ಮತ್ತು ನಿರಾಶ್ರಿತರ ರಕ್ಷಣೆ ಹಾಗೂ ಅವರಿಗೆ ಸೂಕ್ತ ಪರಿಹಾರ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನೆರವು ನೀಡಬೇಕೆಂದು ವಿಶ್ವದಾದ್ಯಂತ ಮನವಿ ಮಾಡುತ್ತದೆ. 1919ರಲ್ಲಿ ಸ್ಥಾಪಿತವಾದ

ಈ ಸಂಸ್ಥೆಯು ರಾಷ್ಟ್ರೀಯ ಸೊಸೈಟಿಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ.

## ರಾಷ್ಟ್ರೀಯ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟೀಸ್

ರಾಷ್ಟ್ರೀಯ ರೆಡ್ ಕ್ರಾಸ್‌ಗಳು ಪ್ರಸ್ತುತ 192 ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇಂಟರ್ ನ್ಯಾಷನಲ್ ರೆಡ್ ಕ್ರಾಸ್ ಸಮಿತಿ ಹಾಗೂ ಐ.ಎಫ್.ಆರ್.ಸಿ.ಗಳ ತತ್ವಗಳು ಸಾಕಾರಗೊಳಿಸುವ ಕಾರ್ಯಕ್ರಮಗಳನ್ನು ರೂಪಿಸಿ ಪ್ರವಾಹ, ಕ್ಷಾಮ, ಭೂಕಂಪಕ್ಕೊಳಗಾದವರಿಗೆ ಸಹಾಯ ಮಾಡುವುದು ಆರೋಗ್ಯ ಕಾರ್ಯಕ್ರಮಗಳು, ರಕ್ತನಿಧಿಗಳನ್ನು ಸ್ಥಾಪಿಸುವುದು, ಪ್ರಕೃತಿ ವಿಕೋಪಗಳಿಂದ ಉಂಟಾಗುವ ಅನಾಹುತಗಳ ನಿರ್ವಹಣೆ, ಸಂತ್ರಸ್ಥರಿಗೆ ಕುಡಿಯುವ ನೀರು, ಆಹಾರ, ಔಷಧಿಗಳು, ಬಟ್ಟೆ–ಬರೆಗಳು ಸಂತ್ರಸ್ಥರ ನೋವು ಕಡಿಮೆ ಮಾಡುವುದು, ಶಮನಗೊಳಿಸುವುದು ಮತ್ತು ಇತರ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನೊಂದವರ ಸೇವೆಯಲ್ಲಿ ನಿರತವಾಗಿವೆ. ಯುದ್ಧಕಾಲದಲ್ಲಿ ತೊಂದರೆಗೊಳಗಾದ ನಾಗರೀಕರಿಗೆ ಸಹಾಯ ಮಾಡುವುದು, ಕೇಂದ್ರ ಹಾಗೂ ರಾಜ್ಯ ಸರ್ಕಾರ ಕಾರ್ಯಕ್ರಮಗಳಿಗೆ ಕೈ ಜೋಡಿಸಿ ಕಾರ್ಯನಿರ್ವಹಿಸುತ್ತಿವೆ.

* * * *

ಅಧ್ಯಾಯ
V

# ರೆಡ್ ಕ್ರಾಸ್‌ನ ಮೂಲ ತತ್ವಗಳು

ಯುದ್ಧ ಕಾಲದಲ್ಲಿ ರೆಡ್ ಕ್ರಾಸ್ ಸಂಸ್ಥೆಯು 1965ರ ಅಕ್ಟೋಬರ್‌ನಲ್ಲಿ ವಿಯನ್ನಾದಲ್ಲಿ ನಡೆದ ಜಿನೀವಾ ಸಮಾವೇಶದಲ್ಲಿ ರೂಪಿಸಲಾದ ಮೂಲ ತತ್ವಗಳ ಅನ್ವಯ ಕಾರ್ಯನಿರ್ವಸುವುದಕ್ಕೆ ಪ್ರೇರೇಪಿಸುತ್ತದೆ. ರೆಡ್ ಕ್ರಾಸ್ ಸಂಸ್ಥೆಗೆ ಯುದ್ಧಗಳನ್ನು ತಡೆಗಟ್ಟುವ ಅಧಿಕಾರವಿರದಿದ್ದರೂ, ಅದು ಎಲ್ಲರೂ ಭ್ರಾತೃತ್ವದಿಂದ ಜೀವಿಸುವ ವಾತಾವರಣವನ್ನು ಸಮಾಜದಲ್ಲಿ ನಿರ್ಮಿಸಲು ಪ್ರಯತ್ನಿಸುತ್ತಿದೆ. ಈ ಆಶಯವು ಸ್ಪಷ್ಟವಾದರೆ ರೆಡ್ ಕ್ರಾಸ್ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಬೆಂಬಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಯುದ್ಧದ ಮತ್ತು ಶಾಂತಿಯ ಕಾಲದಲ್ಲಿ ಈ ಕೆಳಗಿನ ರೆಡ್ ಕ್ರಾಸ್ ಸಂಸ್ಥೆಯು ಮೂಲತತ್ವಗಳ ಅನ್ವಯು ಕಾರ್ಯನಿರ್ವಹಿಸುವಂತಾಗಬೇಕು.

### 1. ಮಾನವೀಯತೆ :–

ಯುದ್ಧರಂಗದಲ್ಲಿನ ಗಾಯಾಳುಗಳಿಗೆ ತಾರತಮ್ಯವಿಲ್ಲದೇ ಸೇವೆ ಸಲ್ಲಿಸುವ ಧ್ಯೇಯದಿಂದ ರೆಡ್ ಕ್ರಾಸ್ ಸಂಸ್ಥೆ ಜನ್ಮ ತಾಳಿತು. ಮಾನವೀಯ ಸಂಕಟಗಳನ್ನು ಅಂತರರಾಷ್ಟ್ರೀಯ ವ್ಯಾಪ್ತಿಯಲ್ಲಿ ಸಮರ್ಥವಾಗಿ ತಡೆಗಟ್ಟುವುದು ಅಥವಾ ಉಪಶಮನ ಮಾಡುವುದೇ ಅದರ ಗುರಿ. ಜೀವನ

ಸಂರಕ್ಷಣೆ, ಆರೋಗ್ಯ ಪಾಲನೆ ಹಾಗೂ ಮಾನವನ ಘನತೆ ಕಾಪಾಡುವುದು – ಇವುಗಳು ರೆಡ್ ಕ್ರಾಸ್ ಸಂಸ್ಥೆಯ ಧ್ಯೇಯೋದ್ದೇಶಗಳು "ಅದು ಪರಸ್ಪರ ತಿಳುವಳಿಕೆ, ಸ್ನೇಹ, ಸಹಕಾರ ಹಾಗೂ ಶಾಶ್ವತ ಶಾಂತಿ ಇವುಗಳನ್ನು ಜನರಲ್ಲಿ ಅಭಿವೃದ್ಧಿಪಡಿಸುತ್ತದೆ."

## 2. ನಿಷ್ಪಕ್ಷಪಾತ :–

ರೆಡ್ ಕ್ರಾಸ್ ಸಂಸ್ಥೆಯು ವ್ಯಕ್ತಿಯ ರಾಷ್ಟ್ರೀಯತೆ, ಜನಾಂಗ, ಧಾರ್ಮಿಕ ಶ್ರದ್ಧೆ, ವರ್ಗ ಅಥವಾ ರಾಜಕೀಯ ಅಭಿಪ್ರಾಯ – ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ಪಕ್ಷಪಾತವನ್ನು ಮಾಡುವುದಿಲ್ಲ.

## 3. ತಟಸ್ಥತೆ :–

ಎಲ್ಲರ ವಿಶ್ವಾಸವನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ರೆಡ್ ಕ್ರಾಸ್ ಸಂಸ್ಥೆ ಯಾವುದೇ ದ್ವೇಷಗಳಲ್ಲಿ ಭಾಗಿಯಾಗುವುದಿಲ್ಲ ಅಥವಾ ಯಾವುದೇ ಸಂದರ್ಭಗಳಲ್ಲಿ ರಾಜಕೀಯ, ಜನಾಂಗೀಯ, ಧಾರ್ಮಿಕ ಅಥವಾ ಆದರ್ಶವಾದಗಳ ವಿವಾದ ಪ್ರಸಂಗಗಳಲ್ಲಿ ಪಾಲ್ಗೊಳ್ಳುವುದಿಲ್ಲ.

## 4. ಸ್ವಾತಂತ್ರ್ಯ :–

ರೆಡ್ ಕ್ರಾಸ್ ಸಂಸ್ಥೆ ಅಂತರರಾಷ್ಟ್ರೀಯ ಹಾಗೂ ಸ್ವತಂತ್ರ ಸಂಘಟನೆಯಾಗಿದೆ. ಯಾವುದೇ ದೇಶದಲ್ಲಿನ "ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ"ಯು ಆ ದೇಶದ ಮಾನವ ಸೇವೆಗಳ ಪರಿಹಾರಕಾರಕ ಸಂಘಟನೆಯಾಗಿದ್ದರೂ, ಅದು ತನ್ನದೇ ಆದ ನೀತಿ – ನಿಯಮಗಳಿಗನು ಸಾರವಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆ. ಯಾವುದೇ ಸಂದರ್ಭದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಮೂಲ ತತ್ವಗಳಿಗೆ ಅನುಸಾರವಾಗಿಯೇ ಈ ರಾಷ್ಟ್ರೀಯ ಸಂಘಟನೆಗಳು ಕಾರ್ಯನಿರ್ವಹಿಸಲು ಸಮರ್ಥವಾಗುತ್ತವೆ.

## 5. ಸ್ವಯಂ ಪ್ರೇರಣೆ ಸೇವೆಗಳು :–

ರೆಡ್ ಕ್ರಾಸ್ ಸಂಸ್ಥೆಯು ಸ್ವಯಂ ಪ್ರೇರಿತ ಪರಿಹಾರಕಾರಕ ಸಂಘಟನೆಯಾಗಿದ್ದು, ಈ ಸಂಸ್ಥೆಯನ್ನು ಯಾವುದೇ ರೂಪದಲ್ಲೂ ಲಾಭಗಳಿಕೆಯ ಇಚ್ಛೆಯಿಂದ ನಿರ್ಮಿಸಿರುವುದಿಲ್ಲ.

## 6. ಏಕತೆ :–

ಯಾವುದೇ ದೇಶದಲ್ಲಿ ಕೇವಲ ಒಂದೇ ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿ ಇರುತ್ತದೆ. ಅದು ಎಲ್ಲರಿಗೂ ಮುಕ್ತವಾಗಿರುತ್ತದೆ. ಅದು ರಾಷ್ಟ್ರಾದ್ಯಾದಂತ ತನ್ನ ಮಾನವೀಯ ಸೇವೆಗಳನ್ನು ನೆರವೇರಿಸುತ್ತದೆ.

## 7. ವಿಶ್ವವ್ಯಾಪಕತೆ :–

ರೆಡ್ ಕ್ರಾಸ್ ಸಂಸ್ಥೆಯು ವಿಶ್ವವ್ಯಾಪಿ ಸಂಘಟನೆಯಾಗಿದ್ದು, ಎಲ್ಲ ಸೊಸೈಟಿಗಳೂ ಸಮಾನ ಸ್ಥಾನಮಾನ ಹೊಂದಿದ್ದು, ಇತರರಿಗೆ ಸಹಾಯ ಮಾಡುವಲ್ಲಿನ ಹೊಣೆಗಾರಿಕೆ ಮತ್ತು ಕರ್ತವ್ಯಗಳನ್ನು ಸಮಾನವಾಗಿ ಹಂಚಿಕೊಳ್ಳುತ್ತವೆ.

* * * *

ಅಧ್ಯಾಯ

VI

# ರೆಡ್ ಕ್ರಾಸ್ ಲಾಂಛನ

**1. ರೆಡ್ ಕ್ರಾಸ್ ಸಂಸ್ಥೆಯ ಲಾಂಛನ ಯಾವುದು?**

* ಇದೊಂದು ಸಂಕೇತ ಲಾಂಛನವಾಗಿದೆ. ಇದನ್ನು ರೆಡ್ ಕ್ರಾಸ್ ಚಳುವಳಿ, ಸೇನೆಯ ವೈದ್ಯಕೀಯ ಸೇವೆಗಳಲ್ಲಿ ತೊಡಗಿಸಿಕೊಂಡವರು ಬಳಸುತ್ತಾರೆ. ಅವರು ಮುಖ್ಯವಾಗಿ ಸೇನಾ ಘರ್ಷಣೆ ಹಾಗೂ ನೈಸರ್ಗಿಕ ವಿಕೋಪಗಳ ಸಂದರ್ಭಗಳಲ್ಲಿ ಮಾನವೀಯ ಸೇವೆಗಳಲ್ಲಿ ತೊಡಗಿರುತ್ತಾರೆ. ರೆಡ್ ಕ್ರಾಸ್ ಲಾಂಛನವು ವೈದ್ಯಕೀಯ ವೃತ್ತಿಯ ಲಾಂಛನವಲ್ಲ. ಅದರ ಬಳಕೆಯು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಾನೂನುಗಳಿಂದ ವಿಧಿಬದ್ಧಗೊಳಿಸಲ್ಪಟ್ಟಿದೆ.

**2. ರೆಡ್ ಕ್ರಾಸ್ ಲಾಂಛನವನ್ನು ಜಿನೀವಾದಲ್ಲಿ 1864ರಲ್ಲಿ ಜರುಗಿದ ಪ್ರಥಮ ರಾಯಭಾರ ಮಟ್ಟದ ಸಮ್ಮೇಳನದಲ್ಲಿ ಏಕೆ ಅಂಗೀಕರಿಸಲಾಯಿತು?**

* ಪರಿಹಾರದ ವೈದ್ಯಕೀಯ ಸಮಿತಿಗಳನ್ನು ಸೇನಾ ವೈದ್ಯಕೀಯ ಸೇವೆಗಳನ್ನು ಗುರುತಿಸುವುದಕ್ಕಾಗಿ ಹಾಗೂ ರಕ್ಷಿಸುವುದಕ್ಕಾಗಿ ತಟಸ್ಥ ಗುರುತಿನಂತೆ "ಕೆಂಪುಕ್ರಾಸ್" ಚಿಹ್ನೆಯನ್ನು 1864ರಲ್ಲಿ ಜರುಗಿದ ರಾಯಭಾರ ಮಟ್ಟದ ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಗಾಯಾಳು ಸೈನಿಕರಿಗೆ ಮತ್ತು ಯುದ್ಧಕ್ಕೆ ಬಲಿಯಾದವರಿಗೆ ಅಗತ್ಯವಾದ ಸೇವೆಗಳು ತಲುಪಬೇಕೆಂಬ ಉದ್ದೇಶದಿಂದ ಈ ಲಾಂಛನವನ್ನು ಅಂಗೀಕರಿಸಲಾಯಿತು. ಬಿಳಿ ಹಿನ್ನೆಲೆಯಲ್ಲಿ ಕೆಂಪು ಕ್ರಾಸ್ ಹೊಂದಿದ ಈ ಲಾಂಛನ ರೆಡ್ ಕ್ರಾಸ್ ಸಂಸ್ಥೆಯ ಸಂಕೇತ ಚಿಹ್ನೆಯಾಗಿದೆ. ರೆಡ್ ಕ್ರಾಸ್ ಸಂಸ್ಥೆ ಜನ್ಮ ತಾಳಲು ಸ್ವಿಡ್ಜರ್ಲೆಂಡ್ ಮಹತ್ತರ ಪಾತ್ರ ವಹಿಸಿದ್ದರಿಂದ, ಆ ದೇಶದ ಧ್ವಜದಲ್ಲಿ ಬಣ್ಣಗಳನ್ನು ತಿರುವು-ಮುರುವು ಆಗಿ ಬದಲಾಯಿಸಿ ರೆಡ್ ಕ್ರಾಸ್ ಸಂಸ್ಥೆ ಲಾಂಛನವನ್ನು ಬಳಸಲಾಗಿದೆ. 1949ರ ಜಿನೀವಾ ಒಪ್ಪಂದಗಳು ಈ ಲಾಂಛನವನ್ನು ಉಳಿಸಿಕೊಂಡಿರುವುದರ ಜೊತೆಗೆ ರೆಡ್ ಕ್ರೆಸೆಂಟ್ ಹಾಗೂ ರೆಡ್ ಲಯನ್ಸ್ ಅಂಡ್ ಸನ್ ಎರಡೂ ಲಾಂಛನಗಳನ್ನು ಬಿಳಿ ಹಿನ್ನೆಲೆಯಲ್ಲಿಯೆ ರೂಪಿಸಿ, ಮಾನ್ಯತೆ ನೀಡಿದೆ. ಅಂತರರಾಷ್ಟ್ರೀಯ ಮಾನವ ಕಾಯಿದೆಯ ರಚನೆಗೆ ಈ ಒಪ್ಪಂದವೇ ಆಧಾರವಾಯಿತು.

### 3. ರೆಡ್ ಕ್ರಾಸ್ (ಕೆಂಪು ಕ್ರಾಸ್) ಲಾಂಛನದ ಮಹತ್ವವೇನು?

* ಜಿನೀವಾ ಒಪ್ಪಂದಗಳಲ್ಲಿ ಅಂಗೀಕರಿಸಲಾದ ಈ ರೆಡ್ ಕ್ರಾಸ್ ಲಾಂಛನವು ವಿಶ್ವ ಪರಿಚಿತವಾಗಿದೆ. ಇದನ್ನು ಯುದ್ಧ ತಟಸ್ಥ ಸಂಕೇತವೆಂದು ಸಾರ್ವತ್ರಿಕವಾಗಿ ಗುರುತಿಸಲಾಗುತ್ತದೆ. ಸೇನಾ ಕಾರ್ಯದಲ್ಲಿ ಅಗತ್ಯವಿರುವ ಸೇವೆ, ಉಪಚಾರ ಹಾಗೂ ವೈದ್ಯಕೀಯ ಚಿಕಿತ್ಸೆ- ಇತ್ಯಾದಿ ಒದಗಿಸುವಾಗ, ಆ ಸೇವಾ ಕಾರ್ಯಗಳಲ್ಲಿ ತೊಡಗಿರುವವರು ಯುದ್ಧದಿಂದ ಹೊರತಾದವರು ಎಂದು ಈ ಸಂಕೇತ ಸೂಚಿಸುತ್ತದೆ. ಉದಾ: ಸೇನಾ ಪಡೆಗಳು, ವೈದ್ಯಕೀಯ ಘಟಕಗಳು, ಪಾದ್ರಿಗಳು ಹಾಗೂ ಇತರ ಪರಿಹಾರ ಸಮಿತಿಗಳು ತಟಸ್ಥರೆಂದು ಪರಿಗಣಿಸಲ್ಪಡುತ್ತದೆ. ಅಂತರ ರಾಷ್ಟ್ರೀಯ ಮಾನವ ಹಕ್ಕು ಕಾಯಿದೆ (IHC)ಯ ಅನ್ವಯ ಇಂತಹ ಸೇವಾ ಕಾರ್ಯದಲ್ಲಿ

ನಿರತರಾದವರು ಸರ್ವ ರೀತಿಯಿಂದಲೂ ಯುದ್ಧ ಕಾಲದಲ್ಲಿ ರಕ್ಷಿಸಲ್ಪಡುತ್ತಾರೆ. ಈ ರೆಡ್ ಕ್ರಾಸ್ ಲಾಂಛನವು ಯುದ್ಧ ನಿರತ ಯೋಧರಲ್ಲಿ ಆತ್ಮ ಸಂಯುಮವನ್ನು ಉಂಟುಮಾಡುತ್ತದೆ. ಈ ರೆಡ್ ಕ್ರಾಸ್ ಲಾಂಛನದ ಉಪಯೋಗ ಹಾಗೂ ದುರುಪಯೋಗದ ನಿರ್ಬಂಧವನ್ನು ಅಂತರ ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಕಾನೂನುಗಳು ವಿಧಿಬದ್ಧಗೊಳಿಸುತ್ತವೆ. ರೆಡ್ ಕ್ರಾಸ್ ಚಳುವಳಿಯ ಅಂಗಸಂಸ್ಥೆಗಳು ಈ ಲಾಂಛನವನ್ನು ಬಳಸಿದಾಗ, ಅದು 7 ಮೂಲ ತತ್ವಗಳನ್ನು ಸೂಚಿಸುತ್ತದೆ. ಈ ತತ್ವಗಳು ಮಾನವೀಯ ಹಾಗೂ ಪರಿಹಾರಕಾರಕ ಚಟುವಟಿಕೆಗಳನ್ನು ಅವರು ಯುದ್ಧ ಕಾಲದಲ್ಲಿ ಮಾಡಬೇಕಾದುದನ್ನು ಸೂಚಿಸುತ್ತದೆ.

4. **ಈ ಲಾಂಛನವನ್ನು ಅಧಿಕೃತವಾಗಿ ಯಾರು ಬಳಸಬಹುದು?**

* ಸೇನಾ ವೈದ್ಯಕೀಯ ಘಟಕಗಳು, ಅವರ ಅಧಿಕಾರಿ ವರ್ಗ ಪ್ರತಿಷ್ಠಾನಗಳು ಹಾಗೂ ಸಾರಿಗೆ ಮಾಧ್ಯಮಗಳು.
* ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿ
* ರೆಡ್ ಕ್ರಾಸ್ ಹಾಗೂ ರೆಡ್ ಕ್ರೆಸೆಂಟ್ ಸೊಸೈಟಿಗಳ ಒಕ್ಕೂಟ
* ರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗಳು
* ರಾಷ್ಟ್ರೀಯ ಸೊಸೈಟಿಯಿಂದ ಮಾನ್ಯತೆ ಪಡೆದ ಹಾಗೂ ಸಂಪೂರ್ಣ ಉಚಿತ ವೈದ್ಯಕೀಯ ಸಹಾಯ ಒದಗಿಸುವ ಪ್ರಥಮೋಪಚಾರ ಕೇಂದ್ರ.

– ಇವರು 'ರೆಡ್ ಕ್ರಾಸ್' ಲಾಂಛನವನ್ನು ಬಳಸಬಹುದು.

5. **ಯಾವ ಕಾರ್ಯಗಳನ್ನು ರೆಡ್ ಕ್ರಾಸ್ ಲಾಂಛನದ ದುರುಪಯೋಗವೆಂದು ಪರಿಗಣಿಸಲಾಗುತ್ತದೆ?**

* ಈ ಕೆಳಗಿನವುಗಳನ್ನು ರೆಡ್ ಕ್ರಾಸ್ ಲಾಂಛನದ ದುರುಪಯೋಗಗಳೆಂದು ಪರಿಗಣಿಸಲಾಗುತ್ತದೆ.
* ಕಾನೂನುಗಳಿಂದ ಅಧಿಕೃತರಾಗದವರು ರೆಡ್ ಕ್ರಾಸ್ ಲಾಂಛನ ಬಳಸುವುದು (1949ರ ಜಿನೀವಾ ಒಪ್ಪಂದದಲ್ಲಿ, 1977ರ ಹೆಚ್ಚುವರಿ ಕರಡು ಶಾಸನಗಳು ಮತ್ತು ಭಾರತದ 1960ರ ಜಿನೀವಾ ಒಪ್ಪಂದ ಅಧಿನಿಯಮ) ಹಾಗೂ ಬಳಸಲು ಅಧಿಕೃತರಾದವರು ಲಾಂಛನವನ್ನು ಅಸಮರ್ಪಕವಾಗಿ ಉಪಯೋಗಿಸುವುದು.
* ರೆಡ್ ಕ್ರಾಸ್ ಲಾಂಛನದಂತಹ ಬೇರೆ ನಕಲಿ ಲಾಂಛನಗಳನ್ನು ಬಳಸುವುದು.
* ಸೇನಾ ಕಾರ್ಯಾಚರಣೆಯಲ್ಲಿ ಪ್ರತಿಕೂಲ ಪರಿಣಾಮಕ್ಕಾಗಿ ದ್ರೋಹ ಬಗೆಯಲು ಲಾಂಛನವನ್ನು ದುರುಪಯೋಗಪಡಿಸುವುದು.

6. **ಈ ಲಾಂಛನವನ್ನು ವಿಧಿಬದ್ಧಗೊಳಿಸಲು ಭಾರತೀಯ ರಾಷ್ಟ್ರೀಯ ಕಾನೂನಿನಲ್ಲಿ ಯಾವ ಅಂಶಗಳಿವೆ?**

ರೆಡ್ ಕ್ರಾಸ್ ಲಾಂಛನದ ಬಳಕೆಯನ್ನು ವಿಧಿಬದ್ಧಗೊಳಿಸುವ ಭಾರತೀಯ ಕಾನೂನನ್ನು ಜಿನೀವಾ ಒಪ್ಪಂದ ಶಾಸನ ಎನ್ನುತ್ತಾರೆ. ಭಾರತದ ಸಂಸತ್ತು 1960ರಲ್ಲಿ ಈ ಕಾಯ್ದೆಯನ್ನು ಮಾಡಿತು. ಈ ಕಾಯ್ದೆಯ 4ನೇ ಅಧ್ಯಾಯವು ರೆಡ್ ಕ್ರಾಸ್ ಲಾಂಛನದ ದುರುಪಯೋಗದ ಬಗ್ಗೆ ವಿವರಿಸುತ್ತದೆ. ಈ ಅಧ್ಯಾಯದ 12 ಮತ್ತು 13ನೇ ಕಾಲಂ ರೆಡ್ ಕ್ರಾಸ್

ಲಾಂಛನದ ದುರುಪಯೋಗ ಹಾಗೂ ಅದರ ನಕಲಿ ಉಪಯೋಗವನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುತ್ತದೆ.

**7. ಈ ಲಾಂಛನದ ದುರುಪಯೋಗಕ್ಕೆ ಭಾರತದಲ್ಲಿ ಯಾವ ಶಿಕ್ಷೆ ಇದೆ?**

* ರೂ. 500 ದಂಡದ ಜೊತೆಗೆ ಲಾಂಛನವನ್ನು ಅನಧಿಕೃತವಾಗಿ ಬಳಸಲಾದ ವಾಹನವನ್ನು ಮತ್ತು ಇತರ ಸರಕುಗಳನ್ನು ಮುಟ್ಟುಗೋಲು ಹಾಕಬಹುದು.

* * * *



ಅಧ್ಯಾಯ
VII

# ವಿಪತ್ತು ನಿರ್ವಹಣೆ

ಜೀವಹಾನಿ, ಆಸ್ತಿಹಾನಿ ಹಾಗೂ ಮಾನವ ಜನಾಂಗಕ್ಕೆ ತೀವ್ರ ಸಂಕಷ್ಟಗಳನ್ನು ತಂದೊಡ್ಡುವ ದಿಢೀರ್ ಘಟನೆಗಳನ್ನು ವಿಪತ್ತು ಅಥವಾ ವಿಕೋಪಗಳೆಂದು ಪರಿಗಣಿಸಲಾಗುತ್ತದೆ.

ಈ ವಿಪತ್ತುಗಳು ಪರಿಸರ ನಾಶದಿಂದಾಗಿ ಸಂಭವಿಸುತ್ತವೆ. ಇದರಿಂದಾಗಿ ಅಸಾಮಾನ್ಯ ನೈಸರ್ಗಿಕ ವಾತಾವರಣ ಉಂಟಾಗಿ ಮನುಕುಲಕ್ಕೆ ಮಾರಕವಾದ ಪರಿಣಾಮಗಳುಂಟಾಗುತ್ತವೆ.

## ವಿಪತ್ತುಗಳಿಗೆ ಕಾರಣಗಳುರು

1. ಹವಾಮಾನ
2. ಭೂ ವೈಜ್ಞಾನಿಕ
3. ಪರಿಸರ
4. ತಾಂತ್ರಿಕ

## ವಿಪತ್ತುಗಳ ವಿಂಗಡಣೆ

1. ನೈಸರ್ಗಿಕ ವಿಪತ್ತುಗಳು
2. ಮಾನವ ನಿರ್ಮಿತ ವಿಪತ್ತುಗಳು

## 1. ನೈಸರ್ಗಿಕ ವಿಕೋಪಗಳು

1. ಭೂಕಂಪ
2. ಚಂಡಮಾರುತ
3. ಪ್ರವಾಹ
7. ಜಲ ಪ್ರವಾಹ
8. ಭೂ.ಕುಸಿತಗಳು
9. ಕೀಟ ದಾಳಿಗಳು

4. ಸಾಂಕ್ರಾಮಿಕ ರೋಗ
5. ಸುನಾಮಿ
6. ಅನಾವೃಷ್ಟಿ
10. ಗುಡುಗು ಮತ್ತು ಸಿಡಿಲು.

## 2. ಮನುಷ್ಯ ನಿರ್ಮಿತ ವಿಕೋಪಗಳು

1. ಜನಾಂಗೀಯ ಗಲಭೆ
2. ಅಗ್ನಿದುರಂತಗಳು
3. ರಸ್ತೆ ಅಪಘಾತಗಳು
4. ಕೈಗಾರಿಕಾ ಅಪಘಾತಗಳು
5. ರಾಸಾಯನಿಕ ವಿಪತ್ತುಗಳು
6. ತಾಂತ್ರಿಕ ವಿಪತ್ತುಗಳು
7. ಸರಣಿ ಬಾಂಬ್ ಸ್ಫೋಟ
8. ಭಯೋತ್ಪಾದಕರ ದಾಳಿ
9. ರೈಲು ಅಪಘಾತಗಳು
10. ಅನಿಲ ದುರಂತ
11. ವಿಮಾನ ದುರಂತ
12. ಯುದ್ಧಗಳು



## ವಿಕೋಪ ನಿರ್ವಹಣೆ

ವಿಕೋಪಗಳ ದುಷ್ಪರಿಣಾಮಗಳನ್ನು ತಡೆಗಟ್ಟಲು, ತಗ್ಗಿಸಲು ಅಥವಾ ನಿವಾರಿಸಲು ಸಾಮೂಹಿಕ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗುತ್ತದೆ. ವಿಕೋಪ ನಿವಾರಣಾ ಕಾರ್ಯವನ್ನು ನಾಲ್ಕು ಪ್ರಮುಖ ಭಾಗಗಳಾಗಿ ವಿಂಗಡಿಸಲಾಗುತ್ತದೆ:



1. ವಿಕೋಪ ಸ್ಪಂದನ
2. ಪುನರ್ ವಸತಿ
3. ಹೊಣೆ ತಗ್ಗಿಸುವುದು
4. ವಿಕೋಪ ಪೂರ್ವ ಸಿದ್ಧತೆ

## 1. ವಿಕೋಪ ಸ್ಪಂದನ

ವಿಕೋಪ ಘಟನೆ ಸಂಭವಿಸಿದಾಗ ಜೀವಹಾನಿಯನ್ನು ಮಾಡುವ ವಿಕೋಪವನ್ನು ತಗ್ಗಿಸುವ ಹಾಗೂ ಸಾಧ್ಯವಾದಷ್ಟು ತೀವ್ರವಾಗಿ ಪರಿಹಾರಗಳನ್ನು ವಿಕೋಪ ಪೀಡಿತ ಜನರಿಗೆ ತಲುಪಿಸುವುದು. 'ವಿಕೋಪ ಸ್ಪಂದನ' ವೆನಿಸುತ್ತದೆ. ಈ ಕಾರ್ಯಾಚರಣೆಗಳಲ್ಲಿ ಕೆಳಗಿನವುಗಳು ಒಳಗೊಳ್ಳುತ್ತವೆ:

1. ಶೋಧನೆ ಮತ್ತು ಪಾರುಮಾಡುವುದು.
2. ಪ್ರಥಮ ಚಿಕಿತ್ಸೆ ಸೇವೆ ಒದಗಿಸುವುದು.
3. ನೀರು, ಆಹಾರ ಹಾಗೂ ಔಷಧಿಗಳ ತುರ್ತು ಪೂರೈಕೆ.
4. ಸಾಂಕ್ರಾಮಿಕ ರೋಗ ತಡೆಗಟ್ಟುವ ಕ್ರಮಗಳು.
5. ತಾತ್ಕಾಲಿಕ ಶಿಬಿರಗಳನ್ನು ಒದಗಿಸುವುದು.
6. ಕುಟುಂಬದಿಂದ ದೂರಾದವರನ್ನು ಒಂದುಗೂಡಿಸುವುದು

## 2. ಪುನರುಜ್ಜೀವನ

ವಿಕೋಪ ಸಂಭವಿಸಿದ ನಂತರ ಅಸ್ತವ್ಯಸ್ತವಾದ ಜನಜೀವನವನ್ನು ಮೊದಲಿನ ಸಹಜ ಸ್ಥಿತಿಗೆ ತರುವ ಕಾರ್ಯಚಟುವಟಿಕೆಗಳನ್ನು ಪುನರ್ ವಸತಿ ಕಾರ್ಯಗಳೆನ್ನುತ್ತಾರೆ. ಅವುಗಳೆಂದರೆ:

### ಅ. ಸಾಮಾಜಿಕ ಪುನರುಜ್ಜೀವನ

1. ಕಲ್ಯಾಣಾಭಿವೃದ್ಧಿ ಕೇಂದ್ರ
2. ಆರೋಗ್ಯ ನಿರ್ವಹಣಾ ಸೌಲಭ್ಯಗಳ ಪುನರ್ ನಿರ್ಮಾಣ

### ಆ. ಆರ್ಥಿಕ ಪುನರುಜ್ಜೀವನ

1. ಉತ್ತೇಜನ (ಆಹಾರ ಮತ್ತು ಕೆಲಸ)
2. ಜೀವನೋಪಯೋಗಿ ಸಾಮಾಗ್ರಿಗಳ ವಿತರಣೆ
3. ಆರ್ಥಿಕ ಸಹಾಯ
4. ತಾತ್ಕಾಲಿಕ ವಸತಿ ಸೌಲಭ್ಯ

## ಇ. ಮಾನಸಿಕ ಪುನರುಜ್ಜೀವನ

1. ಸಮಾಲೋಚನೆ
2. ಮೂಲ ಅಗತ್ಯತೆಗಳನ್ನು ಪೂರೈಸುವುದು.

## 3. ಹೊಣೆಗಾರಿಕೆ ತಗ್ಗಿಸುವುದು ಅಥವಾ ನೋವು ಶಮನ

ವಿಕೋಪಕಾರಕ ಪ್ರದೇಶದಲ್ಲಿನ ಜನರ ಮೇಲೆ ಅಕಾಲಿಕ ವಿಕೋಪಗಳಿಂದಾಗುವ ಹಾನಿಗಳನ್ನು, ದುಷ್ಪರಿಣಾಮಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ವಿಕೋಪ ಸಂಭವಿಸುವ ಮೊದಲು ಕೈಗೊಳ್ಳಲಾಗುವ ದೀರ್ಘಾವಧಿ ಮುಂಜಾಗರೂಕತಾ ಕ್ರಮಗಳು ಹೀಗಿವೆ. ಅವುಗಳೆಂದರೆ:

1. ಈಗಾಗಲೇ ಇರುವ ಕಟ್ಟಡಗಳನ್ನು ಹಾಗೂ ಮೂಲ ಸೌಕರ್ಯಗಳನ್ನು ಬಲಪಡಿಸುವುದು.
2. ಪ್ರವಾಹ ಸಂಭವ ಪ್ರದೇಶಗಳಲ್ಲಿ ದಿಬ್ಬವನ್ನು ಎತ್ತರಿಸುವುದು.
3. ಚಂಡಮಾರುತ ರಕ್ಷಾ ಶಿಬಿರಗಳನ್ನು ನಿರ್ಮಿಸುವುದು.
4. ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಸಂಘಟಿಸುವುದು.

## 4. ವಿಕೋಪ ಸಿದ್ಧತೆ

ವಿಕೋಪ ಸಂಭವಿಸಿದಾಗ ಅದರೊಂದಿಗೆ ಸೆಣಸಾಡಲು, ಪಾರಾಗಲು ಹಾಗೂ ತೀವ್ರವಾಗಿ ಸ್ಪಂದಿಸಲು ಅನುಕೂಲವಾಗುವಂತೆ ರೂಪಿಸಲಾದ ಮುಂಜಾಗ್ರತಾ ಪರಿಹಾರ ಕ್ರಮಗಳು ವಿಕೋಪ ಸಿದ್ಧತೆಗಳಾಗಿವೆ. ಅವುಗಳೆಂದರೆ:

1. ಜನಾಂಗದಲ್ಲಿನ ವಿಕೋಪ ಪೀಡಿತ ಪ್ರದೇಶವನ್ನು ಗುರುತಿಸುವುದು.
2. ತುರ್ತು ಸಂಪರ್ಕ ವ್ಯವಸ್ಥೆಯಿಂದ ಪೂರ್ವ ಎಚ್ಚರಿಕೆ

ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು.

3. ರಕ್ಷಣಾ ತಂಡಗಳನ್ನು ರಚಿಸುವುದು.
4. ಸಾಮೂಹಿಕ ಪ್ರಥಮ ಚಿಕಿತ್ಸೆ ತರಬೇತಿ ನೀಡುವುದು.
5. ಹಾಳಾಗಲಾರದ ಪರಿಹಾರ ಸಾಮಾಗ್ರಿಗಳ ಸಂಗ್ರಹವಿರುವ ದಾಸ್ತಾನು ಮಳಿಗೆ ಹೊಂದುವುದು.
6. ಮಾಹಿತಿಯ ತ್ವರಿತ ಹಂಚಿಕೆ
7. ವಿಕೋಪ ಪೂರ್ವ ಸಿದ್ಧತಾ ಯೋಜನೆಗಳು ರೂಪಿಸುವುದು.

## 5. ಮಾಹಿತಿ ನೀಡಿಕೆ ಜಾಲವನ್ನು ಅಭಿವೃದ್ಧಿಪಡಿಸುವುದು

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ವಿಕೋಪಗಳ ನಿರ್ವಹಣೆಯಲ್ಲಿ ಪೂರಕ ಪಾತ್ರವನ್ನು ವಹಿಸುತ್ತದೆ. ಅದು ನಿರ್ವಹಿಸುವ ಉತ್ಕೃಷ್ಟ ಕಾರ್ಯಗಳೆಂದರೆ:

1. ಸೇವಾ ಅಗತ್ಯವಿರು ಪ್ರದೇಶದಲ್ಲಿ ಸ್ವಯಂಸೇವಕರನ್ನು ನಿಯೋಜಿಸುವುದು.
2. ತೀವ್ರ ಆರೋಗ್ಯ ನಿಗಾವಹಿಸಲು ಹಾಗೂ ಸಾಂಕ್ರಾಮಿಕ ರೋಗ ತಡೆಗಟ್ಟಲು ವೈದ್ಯರ ತಂಡ ಹಾಗೂ ವೈದ್ಯಕೀಯ ಸೇವಾ ಸಿಬ್ಬಂದಿಯನ್ನು ನಿಯೋಜಿಸುವುದು.
3. ಪರಿಹಾರ ಸಾಮಾಗ್ರಿ ಹಾಗೂ ದೇಣಿಗೆಗಳನ್ನು ಸಂಗ್ರಹಿಸಿ, ಅಧಿಕೃತ ಹಾಗೂ ಗೊತ್ತುಪಡಿಸಿದ ಅಧಿಕಾರಿಯ ಮೂಲಕ ವಿಕೋಪ ಪೀಡಿತರಿಗೆ ಒದಗಿಸುವುದು.

*   *   *   *

ಅಧ್ಯಾಯ

VIII

# ಭಾರತೀಯ ರೆಡ್ ಕ್ರಾಸ್ ಸಂಸ್ಥೆ




ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಅತ್ಯಂತ ವಿಶಾಲವಾದ ಹಾಗೂ ಅಂತರ ರಾಷ್ಟ್ರೀಯ ಮಾನವೀಯ ಸೇವಾ ಸಂಘಟನೆಯಾಗಿದೆ. ಈ ಸಂಸ್ಥೆಯು ವಿಕೋಪಗಳಲ್ಲಿ ಪಾಲ್ಗೊಳ್ಳುವಿಕೆ, ಆರೋಗ್ಯ ಆರೈಕೆ ಸೇವೆಗಳು, ರಕ್ತ ಸಂಗ್ರಹಣಾ ಸೇವೆಗಳು ಮತ್ತು ಕಿರಿಯ ಹಾಗೂ ಯುವ ರೆಡ್ ಕ್ರಾಸ್ ಚಟುವಟಿಕೆಗಳು ಇತ್ಯಾದಿ ಸೇವಾ ಕಾರ್ಯಗಳಿಗಾಗಿ ಪ್ರಸಿದ್ಧವಾಗಿದೆ.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಸಂಸತ್ತಿನ ಅಧಿನಿಯಮ– 15ರ ಅನ್ವಯ ದೆಹಲಿಯಲ್ಲಿ 1920ರಲ್ಲಿ ಸ್ಥಾಪಿತವಾಯಿತು. ಭಾರತವು 28 ರಾಜ್ಯಗಳನ್ನು 8 ಕೇಂದ್ರಾಡಳಿತ ಪ್ರದೇಶಗಳನ್ನು ಹಾಗೂ 1 ರಾಷ್ಟ್ರೀಯ ರಾಜಧಾನಿ ಪ್ರದೇಶ – ಇವುಗಳನ್ನು ಹೊಂದಿದೆ. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು 1100ಕ್ಕೂ ಹೆಚ್ಚು ಜಿಲ್ಲಾ ಮತ್ತು ಉಪ ಜಿಲ್ಲಾ ಶಾಖೆಗಳನ್ನು ಹೊಂದಿದೆ.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ತನ್ನ ಎಲ್ಲಾ ಶಾಖೆಗಳ ರಾಷ್ಟ್ರೀಯ ಒಕ್ಕೂಟವಾಗಿದೆ. ಭಾರತದಲ್ಲಿನ ಕೇಂದ್ರ ಕಛೇರಿ ಮತ್ತು ಅದರ ಶಾಖೆಗಳು ತಾವೇ "ರೆಡ್ ಕ್ರಾಸ್ ಸೊಸೈಟಿ"ಗಳೆಂದು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಿಲ್ಲ. ಎಲ್ಲಾ ಶಾಖೆಗಳು ಒಟ್ಟಾಗಿ ಸೇರಿ ಭಾರತೀಯ ರೆಡ್ ಕ್ರಾಸ್ ಸೊಸೈಟಿ ಎಂದೇ ಪರಿಗಣಿಸಲ್ಪಡುತ್ತದೆ.

ಭಾರತದ ರಾಷ್ಟ್ರಪತಿಗಳು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ರಾಷ್ಟ್ರೀಯ ವ್ಯವಸ್ಥಾಪಕ (ಆಡಳಿತಾತ್ಮಕ) ಮಂಡಳಿಯು ಪ್ರಮುಖ ಕಾರ್ಯಕಾರಿ ಮಂಡಳಿಯಾಗಿದೆ. ಇದರಲ್ಲಿ 18 ಸದಸ್ಯರಿದ್ದು, ಅವರಲ್ಲಿ 12 ಸದಸ್ಯರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿನ ಶಾಖೆಗಳಿಂದ ಆಯ್ಕೆಯಾಗುತ್ತಾರೆ. ಇದಕ್ಕೊಂದು ಚುನಾವಣಾ ಕಾಲೇಜನ್ನು ರಚಿಸಲಾಗಿದ್ದು ಅದು ಶಾಖಾ ಸಮಿತಿಗಳ ಪ್ರತಿನಿಧಿಗಳಿಂದ ಕೂಡಿದೆ. ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಅಧ್ಯಕ್ಷರು, ಚೇರಮನ್ ಸೇರಿದಂತೆ ಆರು ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಆಡಳಿತ ಮಂಡಳಿಯಿಂದ ನೇಮಕವಾದ ಪ್ರಧಾನ ಕಾರ್ಯದರ್ಶಿ ಮುಖ್ಯ ಆಡಳಿತಾಧಿಕಾರಿಯಾಗುತ್ತಾರೆ.

ಪ್ರಾಂತೀಯ ರೆಡ್ ಕ್ರಾಸ್ ಶಾಖೆಗಳಿಗೂ ರಾಷ್ಟ್ರೀಯ ಕೇಂದ್ರ ಕಛೇರಿಗಳ ಆಡಳಿತಾತ್ಮಕ ಮಾದರಿಯನ್ನೇ ಅನುಸರಿಸಲಾಗುತ್ತದೆ. ಆದರೂ ಆಡಳಿತಾತ್ಮಕ ವ್ಯವಸ್ಥೆಯು ಶಾಖೆಯಿಂದ ಶಾಖೆಗೆ ಅಲ್ಪ ಪ್ರಮಾಣದಲ್ಲಿ ಬದಲಾಗುತ್ತದೆ.

ಭಾರತೀಯ ರೆಡ್ ಕ್ರಾಸ್ ಸೊಸೈಟಿಯು ದಾಸ್ತಾನು ಮಳಿಗೆಗಳು, ಚಂಡಮಾರುತ ಆಶ್ರಯ ತಾಣಗಳು, ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ

ಕೇಂದ್ರಗಳು, ತರಬೇತಿ ಕೇಂದ್ರಗಳು, ರಕ್ತ ಸಂಗ್ರಹಣಾ ನಿಧಿಗಳು, ಇವುಗಳನ್ನು ಹೊಂದಿದ್ದು, ತನ್ನ ಕಾರ್ಯಾಚರಣೆಗಳ ಸಮರ್ಪಕ ಕಾರ್ಯಾಚರಣೆಗಾಗಿ ಇವುಗಳನ್ನು ವಿನಿಯೋಗಿಸುತ್ತದೆ.

ಈ ಸೊಸೈಟಿಯು ದೇಶದಲ್ಲಿನ ಇತರ ಸಂಘಟನೆಗಳೊಂದಿಗೆ ಪ್ರಾಯೋಜಕತ್ವವನ್ನು ಪಡೆಯುತ್ತದೆ. ರೆಡ್ ಕ್ರಾಸ್‌ನ ಅಂಗ ಸಂಸ್ಥೆಗಳಾದ ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗಳ, ರೆಡ್ ಕ್ರೆಸೆಂಟ್ ಸೊಸೈಟಿಗಳ ಒಕ್ಕೂಟ, ಪಾಲುದಾರ ರಾಷ್ಟ್ರೀಯ ಸೊಸೈಟಿಗಳಾದ– ಜರ್ಮನ್ ರೆಡ್ ಕ್ರಾಸ್, ಅಮೇರಿಕನ್ ರೆಡ್ ಕ್ರಾಸ್, ಬ್ರಿಟೀಷ್ ರೆಡ್ ಕ್ರಾಸ್ ಕೆನೆಡಿಯನ್ ರೆಡ್ ಕ್ರಾಸ್, ಇತ್ಯಾದಿ – ಸಂಸ್ಥೆಗಳು ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತದೆ. ಅದು ವಿವಿಧ ಸರಕಾರಿ ಇಲಾಖೆಗಳಾದ ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವುಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತದೆ.

## ಚಟುವಟಿಕೆಗಳು:

### 1. ಯುದ್ಧ ಕಾಲದ ಚಟುವಟಿಕೆಗಳು :–

ಎರಡನೇ ಜಾಗತಿಕ ಮಹಾಯುದ್ಧದಲ್ಲಿ ಭಾರತೀಯ ರೆಡ್ ಕ್ರಾಸ್ ಸೊಸೈಟಿ ಮಹತ್ತರ ಪಾತ್ರವನ್ನು ವಹಿಸಿತು. ಆಗ ಯುದ್ಧದಲ್ಲಿನ ರೋಗಿಗಳಿಗೆ, ಗಾಯಾಳು ಸೈನಿಕರಿಗೆ ಹಾಗೂ ಯುದ್ಧ ಖೈದಿಗಳಿಗಾಗಿ ವಿವಿಧ ಪರಿಹಾರಾತ್ಮಕ ಚಟುವಟಿಕೆಗಳನ್ನು ಈ ಸೊಸೈಟಿಯು ಕೈಗೊಂಡಿತು.

### 2. ಶಾಂತಿ ಕಾಲದ ಚಟುವಟಿಕೆಗಳು :–

* ಮಾನವೀಯ ತತ್ವಗಳನ್ನು ಹಾಗೂ ಮೌಲ್ಯಗಳನ್ನು ಬೆಳೆಸುವುದು
* ವಿಕೋಪದಲ್ಲಿ ಕಾರ್ಯ ನಿರ್ವಹಣೆ
* ಆರೋಗ್ಯ ಸುಧಾರಣೆ

* ತಾಯಿ ಹಾಗೂ ಮಗುವಿನ ಕಲ್ಯಾಣ ಚಟುವಟಿಕೆಗಳು
* ಕುಟುಂಬ ಕಲ್ಯಾಣ ಸೇವೆಗಳು
* ಆಸ್ಪತ್ರೆ ಸೇವೆಗಳು
* ರೋಗಗ್ರಸ್ಥ ಹಾಗೂ ಗಾಯಗೊಂಡ ರಕ್ಷಣ ಸಿಬ್ಬಂಧಿಗಳನ್ನು ನೋಡಿಕೊಳ್ಳುವುದು.
* ರಕ್ತ ಸಂಗ್ರಹಣಾ ಹಾಗೂ ವರ್ಗಾವಣೆ ಸೇವೆಗಳು
* ಹೆಚ್.ಐ.ವಿ./ ಏಡ್ಸ್ ಹಾಗೂ ಇತರೆ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳು

## ಅ. ಮಾನವೀಯ ತತ್ವಗಳನ್ನು ಹಾಗೂ ಮೌಲ್ಯಗಳನ್ನು ಬೆಳೆಸುವುದು :–

ರೆಡ್ ಕ್ರಾಸ್ / ರೆಡ್ ಕ್ರೆಸೆಂಟ್ ಅಭಿಯಾನದ ಮೂಲತತ್ವಗಳನ್ನಾಧರಿಸಿದ ಮಾನವೀಯತೆ ರೂಪಿಸುವ ಮೌಲ್ಯಗಳನ್ನು ಬೆಳೆಸಲಾಗುತ್ತದೆ. ಈ ಮೌಲ್ಯಗಳೆಂದರೆ– ಜೀವ ರಕ್ಷಣೆ, ಆರೋಗ್ಯ ಹಾಗೂ ಗೌರವರಕ್ಷಣೆ, ಇತರರನ್ನು ಗೌರವಿಸುವುದು, ರಾಷ್ಟ್ರೀಯತೆ, ಜನಾಂಗ, ಲಿಂಗ, ಧರ್ಮ, ಶ್ರದ್ಧೆ, ವರ್ಗ ಅಥವಾ ರಾಜಕೀಯ ಸಿದ್ಧಾಂತಗಳ ತಾರತಮ್ಯವಿಲ್ಲದೆ ಇತರರಿಗೆ ಸಹಾಯ ಮಾಡುವ ಜವಾಬ್ದಾರಿಯನ್ನು ಸ್ವೀಕರಿಸುವುದು.

## ಆ. ವಿಕೋಪದಲ್ಲಿ ಕಾರ್ಯನಿರ್ವಹಣೆ :–

ಭಾರತೀಯ ರೆಡ್ ಕ್ರಾಸ್ ಸೊಸೈಟಿಯು ವಿಕೋಪ ಪರಿಹಾರ ಕಾರ್ಯಕ್ರಮ ನಿರ್ವಹಣೆ, ವಿಕೋಪ ಸ್ಪಂದನ ಹಾಗೂ ವಿಕೋಪ ಕಾರ್ಯಗಳ ಸಿದ್ಧತೆ ಈ ಕಾರ್ಯಕ್ರಮಗಳನ್ನು ನಿರ್ವಹಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ವಿಕೋಪಗಳು ಹೆಚ್ಚಾಗುತ್ತಲಿರುವುದರಿಂದ ಭಾರತೀಯ ರೆಡ್ ಕ್ರಾಸ್ ಸೊಸೈಟಿಯು ವಿಕೋಪ ಪೂರ್ವ ಸಿದ್ಧತೆಗಳಿಗಾಗಿ ತನ್ನನ್ನು ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದೆ. ಇಂತಹ ಚಟುವಟಿಕೆಗಳಿಂದಾಗಿ ಮುಂಬರುವ ಹೊಣೆಗಾರಿಕೆಗಳ ಬಗ್ಗೆ ಜಾಗೃತರಾಗಿರುವಂತೆ ಸಮುದಾಯದಲ್ಲಿ ಅರಿವು ಮೂಡಿಸುವುದು ಮುಖ್ಯ ಗುರಿಯಾಗಿದೆ. ವಿಕೋಪ ಸಂಭವಿಸಿದಾಗ ದೈಹಿಕ, ಆರ್ಥಿಕ ಹಾಗೂ ಇನ್ನಿತರೆ ಹಾನಿಯಾಗದಂತೆ ಸಾಮರ್ಥ್ಯವನ್ನು ಸಮುದಾಯದಲ್ಲಿ ಹೆಚ್ಚಿಸಿಕೊಳ್ಳಲು ವ್ಯವಸ್ಥೆ ಮಾಡಲಾಗುವುದು. 1996ರಿಂದ ಭಾರತೀಯ ರೆಡ್ ಕ್ರಾಸ್ ಸೊಸೈಟಿಯು ಜರ್ಮನ್ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ಸಮುದಾಯ ಆಧಾರಿತ ವಿಕೋಪ ಸಹಯೋಗದಲ್ಲಿ ತನ್ನ ಅಧಿಕಾರಿಗಳು, ಸ್ವಯಂ ಸೇವಕರು ಹಾಗೂ ಸರಕಾರಿ ಅಧಿಕಾರಿಗಳಿಗಾಗಿ ಪ್ರಕೃತಿ ವಿಕೋಪ ಎದುರಿಸುವ ಸಿದ್ಧತಾ ಕಾರ್ಯಗಳನ್ನು ನಡೆಸುತ್ತದೆ.

## ಇ. ಆರೋಗ್ಯ ಸುಧಾರಣೆ :–

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ನಗರ ಕುಟುಂಬ ಕಲ್ಯಾಣ ಯೋಜನೆಯಡಿಯಲ್ಲಿ ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ.) ಹೆರಿಗೆ ಆಸ್ಪತ್ರೆ, ಚಾಮರಾಜಪೇಟೆ, ಸಿರಸಿ ಸರ್ಕಲ್, ಬೆಂಗಳೂರು ನಗರ ಜಿಲ್ಲೆಯಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯ ನಿರ್ವಹಣೆಯ ಸೇವೆ ಸಲ್ಲಿಸುತ್ತಿದೆ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಕ್ತ ಸಂಗ್ರಹಣಾ ನಿಧಿಗಳಿದ್ದು, ಅವುಗಳ ಮುಖಾಂತರ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ಏರ್ಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇದರಿಂದಾಗಿ ಅಗತ್ಯಕ್ಕೆ ತಕ್ಕಂತೆ ರಕ್ತ ಪೂರೈಕೆ ಸಂಗ್ರಹಿಸಲಾಗುತ್ತಿದೆ. ಭಾರತೀಯ ರೆಡ್ ಕ್ರಾಸ್ ಸೊಸೈಟಿಯು

ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸೊಸೈಟಿಗಳ ಒಕ್ಕೂಟದ ಸಹಯೋಗದಲ್ಲಿ ಏಡ್ಸ್ ಬಗ್ಗೆ ಯುವಕರಲ್ಲಿ ಅರಿವು ಮೂಡಿಸುವ ಶೈಕ್ಷಣಿಕ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.

## 3. ರೆಡ್ ಕ್ರಾಸ್ ಹೋಮ್ :-

"ರೆಡ್ ಕ್ರಾಸ್ ಹೋಮ್" ಅಂಗವಿಕಲ ಸೇನಾಯೋಧರ ನಿವೃತ್ತರ ಯೋಗಕ್ಷೇಮಕ್ಕಾಗಿ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿತು. 75 ಯೋಧರಿಗಾಗಿ ಅಗತ್ಯವಿರುವ ವಸತಿ ವ್ಯವಸ್ಥೆ ಅಲ್ಲಿ ಮಾಡಲಾಗಿದೆ. ರೆಡ್ ಕ್ರಾಸ್ ಹೋಂ ಸೇನಾ ನಿವೃತ್ತರಿಗೆ ಶುಶ್ರೂಷೆ ಮತ್ತು ವೈದ್ಯಕೀಯ ಚಿಕಿತ್ಸೆಗಳನ್ನು ಒದಗಿಸುತ್ತದೆ. ವೈದ್ಯಕೀಯ ಅಧೀಕ್ಷಕರು ತಮ್ಮ ವೈದ್ಯಕೀಯೇತರ ಸಿಬ್ಬಂದಿ ಈ ಯೋಧರ ಯೋಗಕ್ಷೇಮ ನೋಡಿಕೊಳ್ಳುತ್ತಾರೆ. ಅಗತ್ಯವೆನಿಸಿದರೆ, ಸ್ಥಳೀಯ ಸೇನಾ ಪಡೆಗಳ ಆಸ್ಪತ್ರೆಯಿಂದ ತಜ್ಞರ ಸಲಹೆಯನ್ನು ಪಡೆಯಲಾಗುತ್ತದೆ.

## 4. ಕಿರಿಯ ಹಾಗೂ ಯುವ ರೆಡ್ ಕ್ರಾಸ್ :-

ಶಾಲೆಗಳಲ್ಲಿ ಕಿರಿಯ ರೆಡ್ ಕ್ರಾಸ್ ಹಾಗೂ ಕಾಲೇಜುಗಳಲ್ಲಿ ಯುವ ರೆಡ್ ಕ್ರಾಸ್ ಘಟಕಗಳನ್ನು ಸ್ಥಾಪಿಸಲಾಗಿದ್ದು, ದೇಶಾದ್ಯಂತ 7 ದಶಲಕ್ಷಕ್ಕೂ ಅಧಿಕ ಸದಸ್ಯರು ಹೊಂದಿದೆ. ಅವರ ಚಟುವಟಿಕೆಗಳು ಆರೋಗ್ಯ, ಸೇವೆ ಮತ್ತು ಸ್ನೇಹ - ಈ ಮೂರು ವಿವಿಧ ಸೇವೆಗಳನ್ನು ಆಧರಿಸಿದೆ. ಈ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಮಾನವೀಯ ಸೇವಾ ಕಾರ್ಯಗಳಲ್ಲಿ ತೊಡಗಿಸುವುದರಿಂದ ಅವರಲ್ಲಿ ಮೂಲಭೂತ ತತ್ವಗಳ ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತದೆ.

* * * *

ಅಧ್ಯಾಯ

IX

# ಭಾರತೀಯ ರೆಡ್‌ಕ್ರಾಸ್ ಸಂಸ್ಥೆ

## (ಕರ್ನಾಟಕ ರಾಜ್ಯ ಶಾಖೆ)

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯು 1921ರಲ್ಲಿ ಸ್ಥಾಪಿಸಲ್ಪಟ್ಟಿದ್ದು ಬೆಂಗಳೂರು ಇದರ ಕೇಂದ್ರ ಕಛೇರಿ ಆಗಿರುತ್ತದೆ.

ಘನತೆವೆತ್ತ ಕರ್ನಾಟಕ ರಾಜ್ಯಪಾಲರು, ಇದರ ಅಧ್ಯಕ್ಷರು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಜಿಲ್ಲಾ ರೆಡ್ ಕ್ರಾಸ್ ಶಾಖೆಯು ಅಧ್ಯಕ್ಷರಾಗಿರುತ್ತಾರೆ ಮತ್ತು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು ರೆಡ್ ಕ್ರಾಸ್ ಶಾಖೆಯ ಅಧ್ಯಕ್ಷರಾಗಿರುತ್ತಾರೆ.

### ಚಟುವಟಿಕೆಗಳು:

1. **ರಕ್ತ ನಿಧಿ ಸೇವೆಗಳು:** ಕರ್ನಾಟಕ ರೆಡ್ ಕ್ರಾಸ್ ರಕ್ತ ನಿಧಿ 1991ರಲ್ಲಿ ಸ್ಥಾಪಿತಗೊಂಡಿದೆ. ರಕ್ತವನ್ನು ವಿವಿಧ ವಿದ್ಯಾಸಂಸ್ಥೆಗಳು, ಕೈಗಾರಿಕೆಗಳು ಮತ್ತು ಸಂಯುಕ್ತ ಕಛೇರಿಗಳು ಆಯೋಜಿಸುವ ಸ್ವಯಂ ಪ್ರೇರಿತ ಶಿಬಿರಗಳಿಂದ ಶೇಖರಿಸಲಾಗುತ್ತದೆ. ಇದಲ್ಲದೆ, ವ್ಯಕ್ತಿಗಳು ವೈಯಕ್ತಿಕವಾಗಿ ರಕ್ತನಿಧಿಗೆ ಬಂದು ರಕ್ತದಾನ ಮಾಡುತ್ತಾರೆ.

ಹೀಗೆ ದಾನಿಗಳಿಂದ ಸಂಗ್ರಹಿಸಿದ ರಕ್ತವನ್ನು ಸುರಕ್ಷಿತ ರಕ್ತವೆಂದು ಪರಿಗಣಿಸಲು ಕಡ್ಡಾಯವಾಗಿ ಪರೀಕ್ಷೆಗೊಳಪಡಿಸಲಾಗುತ್ತದೆ. ನಂತರ ರಕ್ತದ ಅವಶ್ಯಕತೆಯಿರುವ ರೋಗಿಗಳ ರಕ್ತದ ಮಾದರಿಯೊಂದಿಗೆ ಹೋಲಿಕೆ ಮಾಡಿ ವಿತರಿಸಲಾಗುತಿದೆ. ಹೀಗೆ ಸಂಗ್ರಹಿಸಿದ ರಕ್ತವನ್ನು 35 ದಿನದೊಳಗೆ ಬಳಸಿಕೊಳ್ಳಲಾಗುತ್ತದೆ.

ರಕ್ತವನ್ನು ಉಚಿತವಾಗಿ ನೀಡಲಾಗುತ್ತದೆ, ಅದರ ನಿರ್ವಹಣಾ ವೆಚ್ಚ/ಶುಲ್ಕವನ್ನು ಮಾತ್ರ ಔಷಧ ನಿಯಂತ್ರಕರ ಮಾರ್ಗಸೂಚಿಯಾನುಸಾರವಾಗಿ ಪಡೆದುಕೊಳ್ಳಲಾಗುತ್ತದೆ.






18 ವರ್ಷ ಮೇಲ್ಪಟ್ಟ ಕನಿಷ್ಠ ದೇಹ ತೂಕ 45 ಕೆ.ಜಿ. ಇರುವ ಆರೋಗ್ಯವಂತ ಪುರುಷ ಮತ್ತು ಮಹಿಳೆಯರು ರಕ್ತದಾನ ಮಾಡಬಹುದು. ವಾಸ್ತವವಾಗಿ ರಕ್ತದಾನಕ್ಕೆ ತಗಲುವ ಅವಧಿ ಕೇವಲ 4ರಿಂದ 6 ನಿಮಿಷಗಳು. ರಕ್ತದಾನದ ನಂತರ 10 ನಿಮಿಷಗಳ ಖಡ್ಡಾಯ ವಿಶ್ರಾಂತಿಯ ಅವಶ್ಯಕತೆ ಇರುತ್ತದೆ. ಪ್ರತಿಯೊಬ್ಬ ದಾನಿಗೂ ಬಳಸಿ ಬಿಸಾಡಬಹುದಾದ ತಟಸ್ಥಗೊಳಿಸಿದ/ ಸ್ಟೆರೈಲ್ ಸೂಜಿಗಳನ್ನು ಬಳಸಲಾಗುತ್ತದೆ. ರಕ್ತ ದಾನಮಾಡಿದ ನಂತರ ವ್ಯಕ್ತಿಯ ದೇಹದಲ್ಲಿ ರಕ್ತವು 72 ಗಂಟೆಗಳೊಳಗೆ ಸಂಪೂರ್ಣವಾಗಿ ಪುನಶ್ಚೇತನಗೊಳ್ಳುತ್ತದೆ. ನಿಯಮಿತವಾಗಿ ಪುರುಷರು 3 ತಿಂಗಳಿಗೊಮ್ಮೆ ಮಹಿಳೆಯರು 4 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು.

ಒಂದು ಯೂನಿಟ್ ರಕ್ತವನ್ನು ಮೂರು ಘಟಕಗಳಾಗಿ (ಪ್ಲೇಟ್‌ಲೆಟ್, ಪಿ.ಆರ್.ಬಿ.ಸಿ ಮತ್ತು ಎಫ್.ಎಫ್.ಪಿ) ಬೇರ್ಪಡಿಸಿ, ಈ ರಕ್ತದಿಂದ ಮೂರು ಜೀವಗಳನ್ನು ಉಳಿಸಬಹುದಾಗಿದೆ.

ಕರ್ನಾಟಕ ರೆಡ್ ಕ್ರಾಸ್ ಸಂಸ್ಥೆಯ ರಕ್ತ ನಿಧಿ ಘಟಕವು ದಿನದ 24 ಘಂಟೆಯೂ ಸೇವೆ ನೀಡುತ್ತದೆ.



2. **ತಾಯಿ ಮತ್ತು ಶಿಶು ಆರೋಗ್ಯ ಸೇವೆಗಳು:** ಭಾರತೀಯ ರೆಡ್ ಕ್ರಾಸ್ ಕರ್ನಾಟಕ ರಾಜ್ಯ ಶಾಖೆಯ ನಗರ ಕುಟುಂಬ ಕಲ್ಯಾಣ ಕೇಂದ್ರವನ್ನು 1969 ರಲ್ಲಿ ಸ್ಥಾಪಿಸಲಾಗಿದೆ, ಈ ಕೇಂದ್ರವು ಸಿರ್ಸಿ ರಸ್ತೆ ಬಿ.ಬಿ.ಎಂ.ಪಿ ಹೆರಿಗೆ ಆಸ್ಪತ್ರೆ, ಚಾಮರಾಜಪೇಟೆ, ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದು ತಾಯಿ ಮತ್ತು ಮಕ್ಕಳ ಆರೋಗ್ಯದ ಕಾಳಜಿ ವಹಿಸುವುದರೊಂದಿಗೆ ಸಮುದಾಯಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯನಿರ್ವಹಿಸುತ್ತದೆ.

3. **ಕರ್ನಾಟಕ ರೆಡ್ ಕ್ರಾಸ್ ಕನ್ನಡಕ ಘಟಕ:** ಕರ್ನಾಟಕ ರೆಡ್‌ಕ್ರಾಸ್ ಕನ್ನಡಕ ಘಟಕವು 1987 ರಲ್ಲಿ ಬೆಂಗಳೂರಿನ ಮಿಂಟೋ ಕಣ್ಣಿನ ಆಸ್ಪತ್ರೆಯ ಆವರಣದಲ್ಲಿ ಸ್ಥಾಪಿಸಲಾಯಿತು. ಇಲ್ಲಿ ರಿಯಾಯಿತಿ ದರದಲ್ಲಿ ಕನ್ನಡಕಗಳನ್ನು ಒದಗಿಸಲಾಗುತ್ತಿದೆ.

4. **ವಿಕೋಪ ನಿರ್ವಹಣೆ:** ಭಾರತ ದೇಶದ ಯಾವುದೇ ಮೂಲೆಯಲ್ಲಿ ವಿಕೋಪ ಉಂಟಾದರೂ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯಶಾಖೆಯು ವಿಕೋಪ ಪೀಡಿತರಿಗೆ ಕಾಲಕಾಲಕ್ಕೆ ಅಗತ್ಯವಿರುವ ಪರಿಹಾರ ಸಾಮಾಗ್ರಿಗಳನ್ನು ಮತ್ತು ದೇಣಿಗೆಗಳನ್ನು ಸಂಗ್ರಹಿಸಿ ಸಂಬಂದಪಟ್ಟ ರೆಡ್‌ಕ್ರಾಸ್ ಶಾಖೆಯ ಮುಖಾಂತರ ವಿತರಿಸುತ್ತದೆ. ವೈದ್ಯರ ಮತ್ತು ಸ್ವಯಂ ಸೇವಕರ ಸೇವೆಗಳನ್ನು ನೇಮಿಸುವ ಮೂಲಕ ವಿಕೋಪ ಪೀಡಿತರಿಗೆ ಸಹಾಯ ಮಾಡುತ್ತದೆ.

2001 ರಲ್ಲಿ ಗುಜರಾತ್ ರಾಜ್ಯದ ಭುಜ್ ಪ್ರದೇಶದಲ್ಲಿ ಭೂಕಂಪ ಸಂಭವಿಸಿದ್ದ ಸಂದರ್ಭದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯು ಪರಿಹಾರ ಸಾಮಗ್ರಿಗಳನ್ನು ಹಾಗೂ ದೇಣಿಗೆಯ ರೂಪದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಕಳುಹಿಸಿಕೊಟ್ಟಿತ್ತು. ಇದರ ಸಾರ್ಥಕ ಸೇವೆಗಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ನವದೆಹಲಿಯ ಕೇಂದ್ರ ಕಛೇರಿಯು ಸ್ವರ್ಣ ಪದಕ ಪ್ರದಾನ ಮಾಡಿ ಗೌರವಿಸಿದೆ.

2004ರ ಸುನಾಮಿಯ ಅವಧಿಯಲ್ಲಿ ಕರ್ನಾಟಕ ರಾಜ್ಯ ಶಾಖೆಯು 60 ಲಕ್ಷ ರೂ. ಮೊತ್ತದ ಪರಿಹಾರ ಸಾಮಾಗ್ರಿಗಳನ್ನು ನೆರೆಯ ತಮಿಳುನಾಡು, ಆಂಧ್ರಪ್ರದೇಶ ಮತ್ತು ಅಂಡಮಾನ್ ನಿಕೋಬಾರ್‌ಗಳಲ್ಲಿನ ಸುನಾಮಿ ಪೀಡಿತರಿಗೆ ರವಾನಿಸಿತ್ತು. ಇದೇ ಸಂದರ್ಭದಲ್ಲಿ 3.7 ಕೋಟಿ ರೂಪಾಯಿಗಳ ದೇಣಿಗೆಯನ್ನು ಸಂಗ್ರಹಿಸಲಾಗಿತ್ತು. ಕರ್ನಾಟಕ ರಾಜ್ಯ ರೆಡ್ ಕ್ರಾಸ್ ಶಾಖೆಯು ಶ್ರೀಲಂಕಾದ ಸುನಾಮಿ ಪೀಡಿತರಿಗೆ 15 ಲಕ್ಷ ರೂ.ಗಳು  ನೀಡಲಾಗಿರುತ್ತದೆ.






2005ರಲ್ಲಿ ಜಮ್ಮು ಕಾಶ್ಮೀರದಲ್ಲಿ ಭೂಕಂಪ ಸಂಭವಿಸಿದಾಗ ಕರ್ನಾಟಕ ಶಾಖೆಯಿಂದ 1 ಲಕ್ಷ ರೂ.ಗಳನ್ನು ಸಂಗ್ರಹಿಸಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಮ್ಮು ಕಾಶ್ಮೀರಕ್ಕೆ ಕಳುಹಿಸಲಾಗಿದೆ. ಇದಲ್ಲದೆ ಭೂಕಂಪ ಪೀಡಿತರಿಗೆ 190 ಬಿಡಾರಗಳನ್ನು ರವಾನಿಸಲಾಗಿದೆ.

2018 ರಲ್ಲಿ ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯಲ್ಲಿ ಭಾರೀ ಪ್ರಮಾಣದಲ್ಲಿ ಭೂ ಕುಸಿತ ಸಂಭವಿಸಿತ್ತು. ಆ ಸಂದರ್ಭದಲ್ಲಿ ಭೂ ಕುಸಿತ ಪೀಡಿತ ಪ್ರದೇಶದ ಜನರಿಗೆ ಪರಿಹಾರ ಸಾಮಾಗ್ರಿಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯಿಂದ ಕಳುಹಿಸಲಾಗಿತ್ತು.

2019ರಲ್ಲಿ ಬಾಗಲಕೋಟೆ, ಬೆಳಗಾವಿ, ರಾಯಚೂರು ವಿಜಯಪುರ, ಮಂಗಳೂರು, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಹಾವೇರಿ, ಉತ್ತರ ಕನ್ನಡ, ಯಾದಗಿರಿ, ಕೊಡಗು ಮುಂತಾದ ಪ್ರದೇಶಗಳಲ್ಲಿ ಪ್ರವಾಹಗಳು ಸಂಭವಿಸಿ ಸಾಕಷ್ಟು ಹಾನಿ ಸಂಭವಿಸಿದೆ. ಇಂತಹ ಸನ್ನಿವೇಶದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯು ಜಿಲ್ಲಾ ರೆಡ್ ಕ್ರಾಸ್ ಶಾಖೆಗಳ ಮೂಲಕ ಸುಮಾರು 4.5 ಕೋಟಿ ಬೆಲೆಯಷ್ಟು ಪರಿಹಾರ ಸಾಮಾಗ್ರಿಗಳನ್ನು ಸಂಗ್ರಹಿಸಿ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ವಿತರಿಸಿದೆ. ಈ ಮಾನವೀಯ ಸೇವೆಗೆ ಪ್ರವಾಹ ಪೀಡಿತ ಜಿಲ್ಲೆಯ ರೆಡ್ ಕ್ರಾಸ್ ಶಾಖೆಯ ಎಲ್ಲಾ ಪದಾಧಿಕಾರಿಗಳು, ಸ್ವಯಂಸೇವಕರು ನಿರಂತರವಾಗಿ 24/7 ಕರ್ತವ್ಯ ನಿರ್ವಹಿಸಿದ್ದಾರೆ.

2020 ರಲ್ಲಿ ಕೊರೋನಾ ಎಂಬ ಸಾಂಕ್ರಾಮಿಕ ರೋಗ ದೇಶ ವ್ಯಾಪಿ ಹರಡಿ, ಕೂಲಿ ಕಾರ್ಮಿಕರು, ಕೊಳಗೇರಿ ನಿವಾಸಿಗಳು, ಸಾಕಷ್ಟು ತೊಂದರೆ ಅನುಭವಿಸಿದಾಗ ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯು ಪರಿಣಾಮಕಾರಿ ಕರ್ತವ್ಯವನ್ನು ನಿರ್ವಹಿಸಿದೆ. ಕರ್ನಾಟಕ ರಾಜ್ಯದಾದ್ಯಂತ ಸ್ಯಾನಿಟೈಜರ್‌ಗಳು,

ಮುಖಗವಸುಗಳು, ದಿನಸಿ ಕಿಟ್‌ಗಳು, ಔಷಧಿಗಳು ಇನ್ನೂ ಮುಂತಾದ ಅಗತ್ಯವಿರುವ ವಸ್ತುಗಳನ್ನು ಸಾರ್ವಜನಿಕರಿಗೆ ನೀಡಿರುತ್ತದೆ.

5. **ಅಂಗವಿಕಲರಿಗೆ ಉಪಕರಣಗಳನ್ನು ಒದಗಿಸುವುದು:** ಬಡವರು, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬಂದ ಅಂಗವಿಕಲರುಗಳಿಗೆ ತ್ರಿಚಕ್ರವಾಹನ, ಗಾಲಿ ಕುರ್ಚಿ, ಶ್ರವಣ ಸಾಧನ, ಬೆತ್ತದ ಸಾಧನಗಳನ್ನು ಒದಗಿಸಲಾಗುತ್ತಿದೆ.

6. **ಆರೋಗ್ಯ ತಪಾಸಣಾ ಮತ್ತು ಕಣ್ಣು ಪರೀಕ್ಷೆ ಶಿಬಿರಗಳು:** ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯು ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಹಲವು ಆರೋಗ್ಯ ತಪಾಸಣಾ ಮತ್ತು ಕಣ್ಣು ಪರೀಕ್ಷಾ ಶಿಬಿರಗಳನ್ನು ಆಯೋಜಿಸುತ್ತಿದೆ.

* * * *

ಅಧ್ಯಾಯ

X

# ಕಿರಿಯ ರೆಡ್ ಕ್ರಾಸ್ ಮತ್ತು ಯುವ ರೆಡ್ ಕ್ರಾಸ್

## ಕಿರಿಯರ ರೆಡ್ ಕ್ರಾಸ್ (ಜೂನಿಯರ್ ರೆಡ್ ಕ್ರಾಸ್)

ರೆಡ್‌ಕ್ರಾಸ್ ಶಾಲಾ ವಿದ್ಯಾರ್ಥಿಗಳ ವಿಭಾಗವೇ ಕಿರಿಯ ರೆಡ್ ಕ್ರಾಸ್. ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ರೂಪಿಸಲ್ಪಡುವ ಆಂದೋಲನ. ಕಿರಿಯ ರೆಡ್ ಕ್ರಾಸ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳನ್ನು ಕಿರಿಯರು ಎಂದೂ ಅವರಿಗೆ ಕಿರಿಯ ರೆಡ್ ಕ್ರಾಸ್ ಚಟುವಟಿಕೆಗಳಲ್ಲಿ ಮಾರ್ಗದರ್ಶನ ಕೊಡುವ ಶಿಕ್ಷಕರನ್ನು ಕೌನ್ಸೆಲರ್ ಎಂದೂ ಕರೆಯಲಾಗುತ್ತದೆ.

## ಭಾರತದಲ್ಲಿ ಬೆಳವಣಿಗೆ

ಕಿರಿಯ ರೆಡ್ ಕ್ರಾಸ್‌ನ ಮೊದಲ ಶಾಖೆ 1926ರಲ್ಲಿ ಪಂಜಾಬಿನಲ್ಲಿ ಪ್ರಾರಂಭವಾಗಿ ಅನಂತರ ಇತರ ರಾಜ್ಯಗಳಿಗೆ ವಿಸ್ತರಿಸಿತು. ಜೆ ಆರ್ ಸಿ ಈಗ ಜನಪ್ರಿಯವಾಗುತ್ತಿದ್ದು ಶೈಕ್ಷಣಿಕ ಅಧಿಕಾರಿಗಳಿಂದಲೂ ಉತ್ತೇಜಿಸಲ್ಪಡುತ್ತಿದೆ. ಯುವ ರೆಡ್ ಕ್ರಾಸ್ ಹೆಸರಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೂ ಈ ಆಂದೋಲನ ವ್ಯಾಪಿಸಿದೆ.

## ಕಿರಿಯ ರೆಡ್ ಕ್ರಾಸ್ ಧ್ಯೇಯ, ತತ್ವಗಳು ಮತ್ತು ಪ್ರತಿಜ್ಞೆ

**ಧ್ಯೇಯ : ನಾನು ಸೇವೆ ಸಲ್ಲಿಸುವೆ.**

**ತತ್ವಗಳು : ಆರೋಗ್ಯ, ಸೇವೆ ಮತ್ತು ಗೆಳೆತನ**

## ಕಿರಿಯ ರೆಡ್‌ಕ್ರಾಸ್ ಮೂರು ಬಗೆಯ ಕಾರ್ಯಕ್ರಮಗಳನ್ನೊಳಗೊಂಡಿದೆ.

ಅ) ಆರೋಗ್ಯ ಮತ್ತು ಜೀವದ ರಕ್ಷಣೆ (ಆರೋಗ್ಯ)

ಆ) ಇತರರಿಗೆ ಸೇವೆ (ಸೇವೆ)

ಇ) ರಾಷ್ಟ್ರೀಯ ಐಕ್ಯತೆ ಹಾಗೂ ಅಂತರರಾಷ್ಟ್ರೀಯ ಸೌಹಾರ್ದತೆ (ಗೆಳೆತನ)

ಈ ಚಟುವಟಿಕೆಗಳು ಯುವಜನರ ಮಾನಸಿಕ ವಿಕಾಸ, ನೈತಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಿ, ಅವರು ಉತ್ತಮ ಪ್ರಜೆಗಳಾಗಲು ನೆರವಾಗುತ್ತವೆ.

## ಕಿರಿಯ ರೆಡ್ ಕ್ರಾಸ್ ಪ್ರತಿಜ್ಞೆ

ಇದು ಕಿರಿಯ ರೆಡ್‌ಕ್ರಾಸ್‌ನ ಒಂದು ಪ್ರಮುಖ ಭಾಗವಾಗಿದ್ದು, ಕಿರಿಯರು ಮತ್ತು ಕೌನ್ಸೆಲರ್‌ಗಳು ಅದನ್ನು ಜೆಆರ್‌ಸಿ ತರಗತಿಗಳಲ್ಲಿ, ಸಭೆಗಳಲ್ಲಿ ಮತ್ತು ಶಿಬಿರಗಳಲ್ಲಿ ಪುನರುಚ್ಚರಿಸಬೇಕು.

## ಕಿರಿಯರ ಪ್ರತಿಜ್ಞೆ

"ನಾನು ನನ್ನ ಮತ್ತು ಇತರರ ಆರೋಗ್ಯದ ಕಾಳಜಿ ವಹಿಸುತ್ತೇನೆ. ರೋಗಿಗಳಿಗೆ ಮತ್ತು ಯಾತನೆ ಅನುಭವಿಸುತ್ತಿರುವವರಿಗೆ ಅದರಲ್ಲಿಯೂ ವಿಶೇಷವಾಗಿ ಮಕ್ಕಳಿಗೆ ನೆರವಾಗುತ್ತೇನೆ ಹಾಗೂ ಜಗತ್ತಿನ ಎಲ್ಲ ಮಕ್ಕಳನ್ನು ನನ್ನ ಮಿತ್ರರಂತೆಯೇ ಪರಿಗಣಿಸುತ್ತೇನೆಂದು ಪ್ರತಿಜ್ಞೆ ಮಾಡುತ್ತೇನೆ".

## ಕೌನ್ಸೆಲರ್ ಪ್ರತಿಜ್ಞೆ

"ಕಿರಿಯ ರೆಡ್ ಕ್ರಾಸ್ ಗುರಿಯಾದ ಆರೋಗ್ಯ ಸುಧಾರಣೆ, ನಿಸ್ವಾರ್ಥ ಸೇವೆ ಹಾಗೂ ರಾಷ್ಟ್ರೀಯ ಐಕ್ಯತೆ ಮತ್ತು ಅಂತರರಾಷ್ಟ್ರೀಯ ಸ್ನೇಹಗಳಿಗೆ ನನ್ನ ನಡವಳಿಕೆಯನ್ನೇ ಮಾದರಿಯಾಗಿ ಜೂನಿಯರ್‌ಗೆ ಮಾರ್ಗದರ್ಶನವನ್ನು ಕೊಡುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ".

## ಸದಸ್ಯತ್ವ ಶುಲ್ಕ

ರಾಜ್ಯದ ಎಲ್ಲಾ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು ಜೂನಿಯರ್ ರೆಡ್‌ಕ್ರಾಸ್ ಸದಸ್ಯರಾಗಿರುತ್ತಾರೆ. ಸರಕಾರದ ಆದೇಶದಂತೆ ಸದರಿ ಸದಸ್ಯತ್ವ ಪಡೆಯಲು ಆಯಾ ಶಾಲೆಯವರು ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, 26 ರೆಡ್‌ಕ್ರಾಸ್ ಭವನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು 560 001 ಇವರ ಹೆಸರಿಗೆ ಪ್ರತಿ ವರ್ಷ ಪ್ರತಿಯೊಂದು ಪ್ರೌಡಶಾಲೆಯು 100 ರೂ. ಶುಲ್ಕ ಪಾವತಿ ಮಾಡುವ ಮೂಲಕ ನೊಂದಾಯಿಸಿಕೊಳ್ಳಬೇಕು ಹಾಗೂ ಪ್ರೌಡಶಾಲೆಯ (8, 9 ಮತ್ತು 10 ನೇ ತರಗತಿ ವ್ಯಾಸಂಗ ಮಾಡುತ್ತಿರುವ) ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರತಿವರ್ಷ ರೂ. 10– (ಹತ್ತು ರೂಪಾಯಿಗಳು ಮಾತ್ರ) ರೆಡ್ ಕ್ರಾಸ್ ಶುಲ್ಕವಾಗಿ ಸಂಗ್ರಹಿಸಿ ಸದರಿ ರೂ. 10/–ರಲ್ಲಿ ರೂ. 4/– ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಬೆಂಗಳೂರು ಇಲ್ಲಿಗೆ ಕಳುಹಿಸತಕ್ಕದ್ದು, ಉಳಿದ ರೂ. 6/– ಶಾಲೆಯ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವುದು.

ಪ್ರತಿ ವರ್ಷ ಪ್ರತಿಯೊಂದು ಪದವಿ ಪೂರ್ವ ಕಾಲೇಜು ರೂ. 100/– ಶುಲ್ಕ ಪಾವತಿ ಮಾಡುವ ಮೂಲಕ ನೊಂದಾಯಿಸಿಕೊಳ್ಳಬೇಕು ಹಾಗೂ ಪದವಿ ಪೂರ್ವ ಕಾಲೇಜಿನ (ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವ್ಯಾಸಂಗ ಮಾಡುತ್ತಿರುವ) ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪ್ರತಿವರ್ಷ ರೂ. 25/– (ಇಪ್ಪತ್ತೈದು ರೂಪಾಯಿಗಳು ಮಾತ್ರ) ರೆಡ್ ಕ್ರಾಸ್ ಶುಲ್ಕವಾಗಿ ಸಂಗ್ರಹಿಸಿ ಸದರಿ ರೂ. 25/–ರಲ್ಲಿ ರೂ. 10/– ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಬೆಂಗಳೂರು ಇಲ್ಲಿಗೆ ಕಳುಹಿಸತಕ್ಕದ್ದು, ಉಳಿದ ರೂ. 15/– ಪದವಿ ಪೂರ್ವ ಕಾಲೇಜಿನ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವುದು.

ಪ್ರೌಢಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳ ಸದಸ್ಯತ್ವ ಶುಲ್ಕವನ್ನು ಹಾಗೂ ವಿದ್ಯಾರ್ಥಿ ಸದಸ್ಯತ್ವ ಶುಲ್ಕವನ್ನು ಜೂನಿಯರ್ ರೆಡ್ ಕ್ರಾಸ್ ಸಾಫ್ಟ್‌ವೇರ್ / ವೆಬ್ ಅಪ್ಲಿಕೇಷನ್ (https://redcrosskarnataka.org) ಮೂಲಕ ಪಾವತಿ ಮಾಡಬಹುದು.

## ಕಿರಿಯ ರೆಡ್ ಕ್ರಾಸ್‌ನ ಸ್ವರೂಪ

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ

↓

ರಾಜ್ಯ ಜೆ.ಆರ್.ಸಿ ಉಪಸಮಿತಿ

↓

ಜಿಲ್ಲಾ ಜೆ.ಆರ್.ಸಿ ಉಪಸಮಿತಿ

↓

ತಾಲ್ಲೂಕು ಜೆ.ಆರ್.ಸಿ ಸಮಿತಿ

### ಕೌನ್ಸೆಲರ್‌ಗಳಿಗೆ ತರಬೇತಿ ಕಾರ್ಯಕ್ರಮ :-

ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಕಿರಿಯ ರೆಡ್ ಕ್ರಾಸ್ ಶಾಖೆಯ ಹೊಣೆ ಹೊತ್ತವರನ್ನು ಜೆಆರ್‌ಸಿ ಕೌನ್ಸೆಲರ್ ಎಂದು ಕರೆಯಲಾಗುತ್ತದೆ.

ಕೌನ್ಸೆಲರ್‌ಗಳಿಗೆ ಪರಿಣಾಮಕಾರಿ ತರಬೇತಿಯನ್ನು ಜಿಲ್ಲಾ ಕಿರಿಯ ರೆಡ್ ಕ್ರಾಸ್ ಸಮಿತಿಗಳ ಸಮನ್ವಯದೊಂದಿಗೆ ನಡೆಸುವ ಜವಬ್ದಾರಿ ರಾಜ್ಯ ಕಿರಿಯ ರೆಡ್ ಕ್ರಾಸ್ ಸಮಿತಿಯದಗಿರುತ್ತದೆ. ತರಬೇತಿಯ ಪಠ್ಯದಲ್ಲಿ ರೆಡ್ ಕ್ರಾಸ್ ಮತ್ತು ಕಿರಿಯ ರೆಡ್ ಕ್ರಾಸ್‌ನ ಇತಿಹಾಸ, ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ, ಸೇವೆ ಮತ್ತು ಗೆಳೆತನ, ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ರೂಪಿತವಾದ ಜೆ.ಆರ್.ಸಿ ಸಮಿತಿಗಳ ಕಾರ್ಯನಿರ್ವಹಣೆ, ಕಲೆ, ಡ್ರಾಯಿಂಗ್ ಮುಂತಾದವುಗಳಲ್ಲಿ ಪ್ರಾಯೋಗಿಕ ತರಗತಿಗಳು ಇರುತ್ತವೆ. ತರಬೇತಿಯ ನಂತರ ಒಂದು ಪರೀಕ್ಷೆ ನಡೆಸಿ, ಉತ್ತೀರ್ಣರಾದ ಕೌನ್ಸೆಲರ್‌ಗಳಿಗೆ ಪ್ರಮಾಣಪತ್ರಗಳನ್ನು (ಸರ್ಟಿಫಿಕೆಟ್) ಕೊಡಲಾಗುವುದು.

### ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಜೆ.ಆರ್.ಸಿ (ಕಿರಿಯ ರೆಡ್ ಕ್ರಾಸ್) ಸ್ಥಾಪಿಸುವ ಮತ್ತು ನಡೆಸಿಕೊಂಡು ಹೋಗುವ ವಿಧಾನ :-

ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಸಭೆ ಸೇರಿಸಿ ಅವರಿಗೆ ರೆಡ್ ಕ್ರಾಸ್ ಮಹತ್ವ ಮತ್ತು ಕಿರಿಯ ರೆಡ್ ಕ್ರಾಸ್

ಸದಸ್ಯತ್ವ ಪಡೆಯುವುದರಿಂದ ದೊರಕುವ ಪ್ರಯೋಜನಗಳನ್ನು ಕುರಿತು ಮಾಹಿತಿ ನೀಡಲಾಗುವುದು. ಸದಸ್ಯರಾಗಿ ನೋಂದಾಯಿಸಿಕೊಳ್ಳಲು ಮುಂದಾಗುವ ವಿದ್ಯಾರ್ಥಿಗಳನ್ನು ಜೆ.ಆರ್.ಸಿ ಸದಸ್ಯರು ಎಂದು ದಾಖಲು ಮಾಡಿಕೊಳ್ಳಲಾಗುತ್ತದೆ. ಸದಸ್ಯತ್ವದ ಗಾತ್ರವನ್ನು ಪರಿಗಣಿಸಿ ಒಂದಕ್ಕಿಂತ ಹೆಚ್ಚಿನ ತಂಡಗಳನ್ನು ರಚಿಸಿಕೊಳ್ಳಬಹುದು.

ಶಾಲೆಯ ಮುಖ್ಯೋಪದ್ಯಾಯರು/ ಪ್ರಿನ್ಸಿಪಾಲ್ ಜೆ.ಆರ್.ಸಿ ಚಟುವಟಿಕೆಗಳ ಉಸ್ತುವಾರಿ ವಹಿಸಲು ಸಮ್ಮತಿಸುವ ಶಿಕ್ಷಕರನ್ನು ಕೌನ್ಸೆಲರ್ ಎಂದು ನೇಮಕ ಮಾಡುವರು.

### ಪದಾಧಿಕಾರಿಗಳ ಚುನಾವಣೆ: ವಿದ್ಯಾರ್ಥಿ ಸಮಿತಿ

ಜೆ.ಆರ್.ಸಿ ಸದಸ್ಯರಿಂದ ಈ ಕೆಳಕಂಡ ಪದಾಧಿಕಾರಿಗಳನ್ನು ಚುನಾಯಿಸಲಾಗುವುದು.

ಅ) ಅಧ್ಯಕ್ಷರು

ಆ) ಉಪಾಧ್ಯಕ್ಷರು

ಇ) ಕಾರ್ಯದರ್ಶಿ

ಈ) ಖಜಾಂಚಿ ಮತ್ತು 6 ಮಂದಿ ಸದಸ್ಯರು.

### ಉಪಸಮಿತಿಗಳು

ಜೆ.ಆರ್.ಸಿಯ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದ ಆರೋಗ್ಯ, ಸೇವೆ, ಸ್ನೇಹ, ರಸ್ತೆ ಸುರಕ್ಷೆ ಹಾಗೂ ಪ್ರಥಮ ಚಿಕಿತ್ಸೆ ಕುರಿತಂತೆ ವಿವಿಧ ಸಮಿತಿಗಳನ್ನು ರಚಿಸಿಕೊಳ್ಳಬಹುದು.

### ಉದ್ಘಾಟನಾ ಸಮಾರಂಭ

ಜೆ.ಆರ್.ಸಿ ರಚನೆಯಾದ ನೆನಪಿಗಾಗಿ ಒಂದು ಉದ್ಘಾಟನಾ ಸಮಾರಂಭವನ್ನು ನಡೆಸಬೇಕಾಗಿರುತ್ತದೆ.

## ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಜೆ.ಆರ್.ಸಿ ಕಾರ್ಯಚಟುವಟಿಕೆ

ಕಿರಿಯ ರೆಡ್ ಕ್ರಾಸ್ ತತ್ವಗಳಾದ ಆರೋಗ್ಯ, ಸೇವೆ ಮತ್ತು ಸ್ನೇಹಗಳನ್ನು ಆಧರಿಸಿ ಅದರ ಚಟುವಟಿಕೆಗಳನ್ನು ರೂಪಿಸಲಾಗಿದೆ. ಸಂದರ್ಭಗಳು, ಸ್ಥಳೀಯ ಮತ್ತು ಸಾಮಾಜಿಕ ಅಗತ್ಯಗಳಿಗೆ ತಕ್ಕಂತೆ ನಡೆಸಬಹುದಾದ ಕಾರ್ಯಕ್ರಮಗಳಾಗಿವೆ. ಅಂತಹ ಕೆಲವು ಚಟುವಟಿಕೆಗಳನ್ನು ಇಲ್ಲಿ ಸೂಚಿಸಲಾಗಿದೆ.




## ಆರೋಗ್ಯ ಸಂವರ್ಧನೆ

ಅ. ಅರೋಗ್ಯಕರ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು.

ಆ. ಶಾಲಾ ಆವರಣವನ್ನು ಶುಚಿಯಾಗಿಟ್ಟುಕೊಳ್ಳುವುದು.

ಇ. ಸ್ಥಳೀಯ ಪ್ರದೇಶಗಳಲ್ಲಿ ಆರೋಗ್ಯ ಕುರಿತು ಜಾಗೃತಿ ಮೂಡಿಸುವುದು.

ಈ. ಪ್ರಾಥಮಿಕ ಚಿಕಿತ್ಸೆಯ ತರಬೇತಿ ನೀಡುವುದು.

ಉ. ಜೆ.ಆರ್.ಸಿ ಸದಸ್ಯರಿಗೆ ರಕ್ತದ ಗುಂಪು ಪರೀಕ್ಷೆ ಶಿಬಿರಗಳನ್ನು ಆಯೋಜಿಸುವುದು.

ಊ ಕೈ ತೊಳೆಯುವ ವಿಧಾನಗಳು.

## ಇತರರಿಗೆ ಸೇವೆಗಳು

ಅ. ಪುಸ್ತಕಗಳು, ಔಷಧಿ ಆಹಾರ, ಉಡುಪುಗಳು ಮುಂತಾದವನ್ನು ಬಡ ಮಕ್ಕಳಿಗೆ ಕೊಡುವುದು.

ಆ. ನೈಸರ್ಗಿಕ ವಿಕೋಪಗಳು ಉಂಟಾದಾಗ ಪರಿಹಾರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವುದು.

ಇ. ಗಾಯಗೊಂಡವರಿಗೆ/ ರೋಗಿಗಳಿಗೆ ಪ್ರಥಮ ಚಿಕಿತ್ಸೆ ಕೊಡುವುದು.

ಈ. ಆಸ್ಪತ್ರೆಗಳಿಗೆ, ವೃದ್ಧಾಶ್ರಮಗಳಿಗೆ, ಅನಾಥಾಲಯಗಳಿಗೆ ಭೇಟಿ ನೀಡುವುದು.

ಉ. ಹತ್ತಿರದ ಕೊಳಚೆ ಪ್ರದೇಶಗಳಲ್ಲಿ ಸಾಕ್ಷರತಾ ಶಿಬಿರಗಳು ಆಯೋಜಿಸುವುದು.

ಊ. ರಸ್ತೆ ನಿಯಮಗಳು ಮತ್ತು ರಸ್ತೆ ಸುರಕ್ಷತೆ ಕುರಿತು ತಿಳುವಳಿಕೆ ಮೂಡಿಸುವುದು.

## ಸ್ನೇಹ

ಅ. ರಾಜ್ಯಮಟ್ಟದ/ ರಾಷ್ಟ್ರೀಯ ಮಟ್ಟದ ಕಿರಿಯ ರೆಡ್ ಕ್ರಾಸ್, ಶಿಬಿರಗಳು ಸ್ಪರ್ಧಾವಳಿಗಳು, ಪ್ರದರ್ಶನ ಮುಂತಾದವುಗಳಲ್ಲಿ ಭಾಗವಹಿಸುವುದು.

ಆ. ಶುಭಾಶಯಗಳು ಕಳುಹಿಸುವುದು.

ಇ. ಚಿತ್ರಸಂಗ್ರಹ (ಆಲ್ಬಮ್)ಗಳ ವಿನಿಮಯ.

ಈ. ಅಂತರ ಧರ್ಮೀಯ ರ್‍ಯಾಲಿ ಆಯೋಜಿಸುವುದು.



## ಜೆ.ಆರ್.ಸಿ. ಸಮವಸ್ತ್ರ

ಜೀನ್ ಹೆನ್ರಿ ಡ್ಯುನಾಂಟ್‌ರವರು ಸಲ್ಫರಿನೋ ಯುದ್ಧದಲ್ಲಿ ಗಾಯಾಳುಗಳಿಗೆ ನೆರವು ನೀಡುತ್ತಿದ್ದರು. ಅವರು ಬಿಳಿ ವಸ್ತ್ರ ಧರಿಸುತ್ತಿದ್ದ ಕಾರಣ,ಗಾಯಾಳುಗಳು ಅವರಿಗೆ 'ಬಿಳಿ ಉಡುಪಿನ ಮನುಷ್ಯ' ಎಂದು ಕರೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಕಿರಿಯ ರೆಡ್‌ಕ್ರಾಸ್ ಬಾಲಕ / ಬಾಲಕಿಯರು ಮತ್ತು ಕೌನ್ಸೆಲರ್ ಬಿಳಿ ವಸ್ತ್ರ ಧರಿಸಬೇಕು ಎಂಬ ಸಲಹೆಯನ್ನು ಕೊಡಲಾಗಿದೆ.

ಯುವ ರೆಡ್‌ಕ್ರಾಸ್ ಸದಸ್ಯರಿಗೂ, ಕೌನ್ಸೆಲರುಗಳಿಗೂ ಇದೇ ಬಿಳಿ ಬಣ್ಣದ ವಸ್ತ್ರವನ್ನೇ ನಿಗದಿ ಪಡಿಸಲಾಗಿದೆ.

| ಬಾಲಕ/ ಪುರುಷ ಕೌನ್ಸೆಲರ್ | ಬಾಲಕಿ/ ಮಹಿಳಾ ಕೌನ್ಸೆಲರ್ |
|---|---|
| ಬಿಳಿಯ ಅರ್ಧ ತೋಳಿನ ಷರ್ಟ್ | ಬಿಳಿಯ ಬ್ಲೌಸ್ |
| ಬಿಳಿಯ ಆಫ್ ಶಾರ್ಟ್ಸ್/ ಪ್ಯಾಂಟ್ | ಬಿಳಿಯ ಸ್ಕರ್ಟ್/<br>ಸೀರೆ, ಬಿಳಿಯ ರಿಬ್ಬನ್ |
| ಸ್ಕಾರ್ಫ್ ಮತ್ತು ವಾಗಲ್<br>ಮತ್ತು ಬ್ಯಾಡ್ಜ್ | ಸ್ಕಾರ್ಫ್ ವಾಗಲ್ ಮತ್ತು<br>ಬ್ಯಾಡ್ಜ್ |
| ಬಿಳಿಯ ಸಾಕ್ಸ್ ಮತ್ತು ಷೂ | ಬಿಳಿಯ ಸಾಕ್ಸ್ ಮತ್ತು ಷೂ |

## ಕಿರಿಯ ರೆಡ್‌ಕ್ರಾಸ್ ಪರೀಕ್ಷೆ:

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಪ್ರತಿ ವರ್ಷ ಕಿರಿಯರಿಗೆ (8, 9, 10ನೇ ಮತ್ತು ಪಥಮ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು) ರೆಡ್‌ಕ್ರಾಸ್ ಪರೀಕ್ಷೆಯನ್ನು ಆಯೋಜಿಸುತ್ತದೆ. ಇದು ರೆಡ್ ಕ್ರಾಸ್ ಚಟುವಟಿಕೆಗಳಲ್ಲಿ ಕಿರಿಯರನ್ನು ಭಾಗವಹಿಸುವಂತೆ ಉತ್ತೇಜಿಸುವ ಒಂದು ಕಾರ್ಯಕ್ರಮವಾಗಿದೆ.



## ರೆಡ್‌ಕ್ರಾಸ್ ಗೀತೆಗಳು – ಪ್ರಾರ್ಥನೆ

ಧರ್ತೀಕರೋ ನಿರ್ಮಲ್‌ಕರೋ ಪೀಡಾ ಪ್ರಭು ಹೇ
ಜೀವನ್‌ಕರೋ \ ಉಜ್ವಲ್ ನವಜ್ಯೋತಿಕರೋ ಹೇ
ದುಃಖೀಜನೋಂಕೀ ಸೇವಾ ಹಮ್‌ಕರೆ
ಪತಿತೋಂಕೋ ಗಲೆ ಲಗೇ
ಶಾಂತಿ ಪಥ ಶಾಂತಿಕಾರ್ಯ ಶಾಂತಿ ವೃದ್ಧಿ
ಜೀವನ್‌ಕರೋ ಉಜ್ವಲ್ ನವಜ್ಯೋತಿಕರೋ ಹೇ
ನವಜ್ಯೋತಿಕರೋ ಹೇನವಜ್ಯೋತಿಕರೋ ಹೇ

## ಬಾವುಟ ಇಳಿಸುವಾಗಿನ ಗೀತೆ

ಮತ್ತೆ ಬೇಟಿಯಾಗುವತನಕ ದೇವರು ನಮ್ಮೊಂದಿಗಿರಲಿ
ಮತ್ತೆ ಭೇಟಿಯಾಗುವತನಕ ಮತ್ತೆ ಭೇಟಿಯಾಗುವತನಕ,
ಮತ್ತೆ ಬೇಟಿಯಾಗುವತನಕ ರೆಡ್‌ಕ್ರಾಸ್ ಪದತಲದಲಿ

## ಇಟ್ಟುಕೊಳ್ಳಬೇಕಾದ ದಾಖಲೆಗಳು

- ಅರ್ಜಿ ನಮೂನೆ ಮತ್ತು ದಾಖಲಾತಿ ರಿಜಿಸ್ಟರ್
- ಹಾಜರಿ ರಿಜಿಸ್ಟರ್
- ಸುತ್ತೋಲೆಯ ಕಡತ

- ಸಭೆಗಳ ನಡಾವಳಿ ಪುಸ್ತಕ
- ರಸೀತಿ ಮತ್ತು ಲೆಕ್ಕ ಪುಸ್ತಕ
- ಮಾಡಿದ ಕೆಲಸಗಳ ರಿಜಿಸ್ಟರ್
- ಸ್ಟಾಕ್ ರಿಜಿಸ್ಟರ್
- ಫೋಟೋ ಅಲ್ಬಮ್
- ಪತ್ರ ವ್ಯವಹಾರದ ಕಡತಗಳು
- ಪ್ರಾಥಮಿಕ ಚಿಕಿತ್ಸಾ ಪೆಟ್ಟಿಗೆ
- ಜೂನಿಯರ್‌ಗಳ ಆರೋಗ್ಯ ಕಾರ್ಡ್
- ಸೂಚನಾ ಫಲಕ
- ಧ್ವಜ, ಹಾರಿಸಲು ಕಂಬ, ಹಗ್ಗ ಮತ್ತು ಪೆಸ್ಟೂನ್ ಇತ್ಯಾದಿ
- ಸಮವಸ್ತ್ರ ಸಾಮಗ್ರಿಗಳು
- ಭೇಟಿ ನೀಡಿದ ಅಧಿಕಾರಿಯ ವಿವರದ ಪುಸ್ತಕ
- ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಮುಂಭಾಗದಲ್ಲಿ ಜೆ.ಆರ್.ಸಿ ಘಟಕದ ನಾಮಪಲಕ ಹಾಕುವುದು.

## ಯುವ ರೆಡ್ ಕ್ರಾಸ್ –
## ನೀತಿ ಮತ್ತು ಕಾರ್ಯಕ್ರಮ ಮಾರ್ಗದರ್ಶಿ ಸೂತ್ರಗಳು

**ನೀತಿ:** ಯುವ ರೆಡ್ ಕ್ರಾಸ್, ಮಾತೃ ಸಂಸ್ಥೆಯಾದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಒಂದು ಪ್ರಾಮುಖ್ಯ ಘಟಕವಾಗಿದೆ. ರೆಡ್‌ಕ್ರಾಸ್‌ನ ಏಳು



ಮೂಲಭೂತ ತತ್ವಗಳಾದ ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥತೆ, ಸ್ವಾತಂತ್ರ್ಯ, ಸ್ವಯಂಸೇವೆ, ಏಕತೆ ಮತ್ತು ವಿಶ್ವವ್ಯಾಪಕತೆಯನ್ನು ಮೈಗೂಡಿಸುವ ಗುರಿ ಹೊಂದಿದೆ. ವಿದ್ಯಾರ್ಥಿ ಯುವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಮತ್ತು ಈ ತತ್ವಗಳನ್ನು ಕಾರ್ಯ ರೂಪಕ್ಕಿಳಿಸುವ ಉದ್ದೇಶದಿಂದ ಯುವ ರೆಡ್ ಕ್ರಾಸ್ ಸಂಘಟಿಸಲಾಗುತ್ತಿದೆ. ಇದಲ್ಲದೆ ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಯುವಜನರಲ್ಲಿ ಆದರ್ಶ ಮತ್ತು ಅದರ ಅನುಷ್ಠಾನವನ್ನು ಅಂತರ್ಗತಗೊಳಿಸುವ ಉದ್ದೇಶವನ್ನು ಹೊಂದಿದೆ.

1. ತನ್ನ ಸ್ವಂತ ಮತ್ತು ಇತರರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು.
2. ನಾಗರೀಕ ಹೊಣೆಗಾರಿಕೆಯನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಒಪ್ಪಿಕೊಳ್ಳುವುದು.
3. ಚಳುವಳಿಯ ಅಂತರರಾಷ್ಟ್ರೀಯ ಸಂಬಂಧಗಳು ಬಳಸಿಕೊಂಡ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ತಿಳುವಳಿಕೆ ಹಾಗೂ ಸದ್ಭಾವನೆಯನ್ನು ಪ್ರೋತ್ಸಾಹಿಸುವುದು.
4. ಸ್ವಯಂಸೇವಾ ಮನೋಭಾವನೆಯನ್ನು ಬೆಂಬಲಿಸುವುದು.

## ಯುವ ರೆಡ್ ಕ್ರಾಸ್ ಸದಸ್ಯತ್ವ :

ಕರ್ನಾಟಕ ಸರ್ಕಾರ ಆದೇಶದಂತೆ (Ed/64/Vividha/2011, dated: 22/12/2011 & ED 38 Vividha 2016, dated: 17/06/



2016), ಸರ್ಕಾರಿ/ ಅನುದಾನಿತ/ ಅನುದಾನ ರಹಿತ ಅಥವಾ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳು, ಸ್ನಾತಕೋತರ ಕಾಲೇಜುಗಳು, ಇಂಜಿನಿಯರಿಂಗ್, ಆರೋಗ್ಯ, ಕೃಷಿ, ಶಿಕ್ಷಕರ ಶಿಕ್ಷಣ, ಹೈನುಗಾರಿಕೆ, ಅರಣ್ಯ, ತೋಟಗಾರಿಕೆ, ವಿಜ್ಞಾನ, ಮೀನುಗಾರಿಕೆ, ಕಾನೂನು, ಪಾಲಿಟೆಕ್ನಿಕ್ ಮತ್ತು ಮಾನ್ಯತೆ ಪಡೆದ ಯಾವುದೇ ಕಾಲೇಜುಗಳು ವಿಶ್ವವಿದ್ಯಾಲಯ/ ಆಡಳಿತ/ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ  ಬರುವ ಎಲ್ಲಾ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ ರೂ. 1,500/– (ಸಾವಿರದ ಐನೂರು ರೂಪಾಯಿಗಳು ಮಾತ್ರ) ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಖಾಖೆ ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವುದು ಹಾಗೂ ಪ್ರವೇಶದ ಸಮಯದಲ್ಲಿ ಪ್ರತಿ ವಿದ್ಯಾರ್ಥಿಯಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ವಾರ್ಷಿಕವಾಗಿ ರೂ. 50/–ಗಳನ್ನು ಸಂಗ್ರಹಿಸಿ ಮತ್ತು ಯೂತ್ ರೆಡ್ ಕ್ರಾಸ್ ಘಟಕದಡಿಯಲ್ಲಿ ಸಂಗ್ರಹಿಸಿದ ಶುಲ್ಕದ 70% ಅನ್ನು ಕಾಲೇಜುಗಳಲ್ಲಿ ಅವರ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಮತ್ತು ಉಳಿದ 30% ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಕಳುಹಿಸುವುದು.

ಶುಲ್ಕವನ್ನು ಪಾವತಿಸಿರುವ ಎಲ್ಲಾ ವಿದ್ಯಾರ್ಥಿಗಳು/ ವಿದ್ಯಾರ್ಥಿನಿಯರು ಆಯಾ ಕಾಲೇಜುಗಳಲ್ಲಿ ಯುವ ರೆಡ್ ಕ್ರಾಸ್‌ನ ಸದಸ್ಯರಾಗಿರುತ್ತಾರೆ.

ಪದವಿ, ಸ್ನಾತಕೋತ್ತರ, ಡಿಪ್ಲೋಮಾ ತರಗತಿಗಳಲ್ಲಿ ಪ್ರವೇಶ ಪಡೆದಿರುವ, ವಿಶ್ವವಿದ್ಯಾಲಯದ ಹಾಜರಾತಿ ನಿಯಮಗಳಿಗೆ ಬದ್ಧರಾಗಿದ್ದು, ನಿಗದಿತ ಯುವ ರೆಡ್ ಕ್ರಾಸ್ ಶುಲ್ಕವನ್ನು ಪಾವತಿಸಿರುವ ಎಲ್ಲಾ ವಿದ್ಯಾರ್ಥಿ / ವಿದ್ಯಾರ್ಥಿನಿಯರೂ ಆಯಾ ಕಾಲೇಜುಗಳ ಯುವ ರೆಡ್ ಕ್ರಾಸ್‌ನ ಸದಸ್ಯರಾಗುತ್ತಾರೆ.

### ಆಂತರಿಕ ತಂಡದ ಸ್ವಯಂ ಸೇವಕರು (ಕೋರ್‌ಗ್ರೂಪ್ ವಾಲಂಟಿಯರ್ಸ್):

ಯುವ ರೆಡ್ ಕ್ರಾಸ್ ಉದ್ದೇಶಗಳಿಗಾಗಿ ತನ್ನ ಸಮಯ ಮತ್ತು ಕೌಶಲ್ಯಗಳನ್ನು ಸ್ವಯಂಪ್ರೇರಣೆಯಿಂದ ನೀಡಲು ಸಿದ್ಧರಿರುವ ಯುವ

ರೆಡ್ ಕ್ರಾಸ್‌ನ ಸದಸ್ಯರು ಕಾರ್ಯಕ್ರಮ ಅಧಿಕಾರಿಗೆ ಅರ್ಜಿ ಸಲ್ಲಿಸಿ, ಆಯ್ಕೆಗೊಂಡರೆ ಅವರು ಯುವ ರೆಡ್ ಕ್ರಾಸ್ ಆಂತರಿಕ ತಂಡದ ಸ್ವಯಂ ಸೇವಕರಾಗುತ್ತಾರೆ.

### ಪ್ರಮಾಣ ಪತ್ರ :

ಎರಡು ವರ್ಷಗಳ ಸೇವಾ ಅವಧಿ ಮತ್ತು ಗೊತ್ತುಪಡಿಸಿದ ಕಾರ್ಯಸೂಚಿ ಮತ್ತು ಗುರಿಗಳನ್ನು ಪೂರೈಸಿದ ಘಟಕದ ಸ್ವಯಂ ಸೇವಕರಿಗೆ ವಿಶ್ವವಿದ್ಯಾಲಯವು ಪ್ರಮಾಣ ಪತ್ರವನ್ನು ನೀಡುತ್ತದೆ.

### ಕಾರ್ಯಕ್ರಮದ ಮಾರ್ಗದರ್ಶಿ ಸೂತ್ರಗಳು

1. **ಸ್ವಯಂಸೇವಕರ ತರಬೇತಿ :** ಆಂತರಿಕ ತಂಡದ ಸ್ವಯಂಸೇವಕರು (ಕೋರ್ ಗ್ರೂಪ್ ವಾಲಂಟಿಯರ್ಸ್) ಆಯ್ಕೆಯಾಗಿ ಯುವ ರೆಡ್ ಕ್ರಾಸ್ ಘಟಕ ಸ್ಥಾಪನೆಯಾದ ಕೂಡಲೇ ಸ್ವಯಂಸೇವಕರಿಗೆ ಅವರ ಪಾತ್ರ ಮತ್ತು ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಡಲು ಪ್ರಶಿಕ್ಷಣ ನೀಡಬೇಕು. ತಂಡದ ಸದಸ್ಯರಾಗಿ ಕಾರ್ಯನಿರ್ವಹಿಸಲು ಅವಶ್ಯಕವಿರುವ ಅರಿವು, ಮನೋಭಾವ, ಕೌಶಲ್ಯ ಇನ್ನಿತರ ಸಾಮರ್ಥ್ಯಗಳನ್ನು ಬೆಳೆಸುವ ಮೂಲಕ ಅವರ ಸಬಲೀಕರಣಕ್ಕೆ ನೆರವಾಗಬೇಕು. ಇದಕ್ಕೆ ಎರಡು ದಿನಗಳ ಅವಶ್ಯಕತೆಯಿದ್ದು ಇದು ವಾರಾಂತ್ಯದಲ್ಲಿ ನಡೆಸಬಹುದು.

2. **ಪ್ರಥಮ ಚಿಕಿತ್ಸೆ ತರಬೇತಿ :** ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಸರಕಾರದಿಂದ ಅಧಿಕೃತ ಹಾಗೂ ಪ್ರಮಾಣಿಕೃತ ಪ್ರಥಮ ಚಿಕಿತ್ಸೆ ನೀಡುವ ಸಂಸ್ಥೆಯಾಗಿದ್ದು, ಪ್ರಥಮ ಚಿಕಿತ್ಸಾ ತರಬೇತಿಗಳು ಆಯೋಜಿಸಲು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ದೂರವಾಣಿ ಸಂಖ್ಯೆ 080–22264205. ಇ–ಮೇಲ್ ircskarnataka@yahoo.in / ircskar@gmail.comಗೆ ಸಂಪರ್ಕಿಸಬಹುದಾಗಿರುತ್ತದೆ.

**3. ವಿಪತ್ತು ನಿರ್ವಹಣಾ ಹಾಗೂ ಪೂರ್ವ ಸಿದ್ಧತಾ ತರಬೇತಿ :** ವಿಪತ್ತು ನಿರ್ವಹಣೆಯ ಅವಶ್ಯ ಅಂಶಗಳಾದ ವಿಪತ್ತಿನ ಮುನ್ಸೂಚನೆ, ವಿಪತ್ತಿಗೆ ಈಡಾಗುವಿಕೆ, ಮರುಮಾರ್ಪಾಟು, ವ್ಯವಸ್ಥಾಪನಾ ಉಪಾಯು, ಪಾರುಮಾಡುವಿಕೆ, ಪರಿಹಾರ, ಪುನರ್ವಸತಿ, ತುರ್ತು ಚಿಕಿತ್ಸೆ, ಆರೋಗ್ಯ ರಕ್ಷಣೆ ಮುಂತಾದವುಗಳ ತರಬೇತಿಯನ್ನು ಸ್ವಯಂಸೇವಕರಿಗೆ ನೀಡುವುದು.

**4. ಕನಿಷ್ಠ ಪರಿಣತಿಗಳ ತರಬೇತಿ :** ಉದ್ಯೋಗದಲ್ಲಿ, ನಾಗರೀಕ ಹೊಣೆಗಾರಿಕೆಯಲ್ಲಿ, ದೈನಂದಿನ ಬದುಕಿನ ವ್ಯವಹಾರಗಳಲ್ಲಿ ಅತೀ ಅಗತ್ಯವೆನಿಸುವ ಕೆಲವು ಕನಿಷ್ಠ ಸಾಮರ್ಥ್ಯ, ಕೌಶಲ್ಯ ಅಥವಾ ಪರಿಣತಿಯನ್ನು ಜಾಗತಿಕವಾಗಿ ಗುರುತಿಸಲಾಗಿದ್ದು, ಅವುಗಳನ್ನು ಎಲ್ಲ ವಿದ್ಯಾರ್ಥಿಗಳೂ ಮೈಗೂಡಿಸಿಕೊಳ್ಳಬೇಕಿದೆ.

ಸಂಶೋಧಕರು ಪ್ರಾಮುಖ್ಯವಾದ ಐದು ಮಾಹಿತಿ ಕ್ಷೇತ್ರಗಳನ್ನು ಗುರುತಿಸಿದ್ದಾರೆ.

1. ಬಳಕೆದಾರರ ಅರ್ಥಶಾಸ್ತ್ರ
2. ಉದ್ಯೋಗ ಮಾಹಿತಿ
3. ಸಮುದಾಯದಲ್ಲಿನ ಸಂಪನ್ಮೂಲಗಳು
4. ಆರೋಗ್ಯದ ಬಗ್ಗೆ ಅರಿವು
5. ಕಾನೂನು ಮತ್ತು ಆಡಳಿತದ ತಿಳುವಳಿಕೆ



ಇದೇ ರೀತಿ ಐದು ಕೌಶಲ್ಯಗಳನ್ನು ಗುರುತಿಸಲಾಗಿದೆ.

1. ಸಂವಹನ ಕೌಶಲ್ಯ
2. ಸಾಮಾನ್ಯ ಗಣಿತ ಕೌಶಲ್ಯ
3. ಸಮಸ್ಯೆ ಪರಿಹಾರ ಕೌಶಲ್ಯ
4. ಪರಸ್ಪರ ಸಂಬಂಧಗಳ ಕೌಶಲ್ಯ
5. ಜೀವ ರಕ್ಷಣೆ ಕೌಶಲ್ಯ

ಉತ್ತಮ ಕಾರ್ಯಕ್ಷಮತೆ, ಆರ್ಥಿಕ ಉತ್ಪಾದಕತೆ ಮತ್ತು ಸಾಮಾಜಿಕವಾಗಿ ಪ್ರಯೋಜನಕಾರಿ ಸದಸ್ಯನಾಗಿ ಕರ್ತವ್ಯಗಳನ್ನು ನಿರ್ವಹಿಸಲು ಮೇಲೆ ಗುರುತಿಸಿದ ಅಂಶಗಳಲ್ಲದೆ, ಬೇರೆ ಇನ್ನು ಕೆಲವು ಅರಿವು ಮತ್ತು ಕುಶಲತೆಗಳ ಅಗತ್ಯವಿರುತ್ತದೆ.

**5. ರಕ್ತದಾನಿಗಳ ಪ್ರೇರೇಪಣೆ :** ಯುವ ರೆಡ್ ಕ್ರಾಸ್, ಎನ್.ಸಿ.ಸಿ., ರೋವರ್ಸ್, ರೇಂಜರ್ಸ್, ಕ್ರೀಡಾಪಟುಗಳು, ರೆಡ್ ರಿಬ್ಬನ್ ಕ್ಲಬ್‌ಗಳಲ್ಲಿರುವ ಸದಸ್ಯರನ್ನು ಪ್ರೇರೇಪಿಸಿ ಕನಿಷ್ಠ ವರ್ಷಕ್ಕೆ ಎರಡು ಸಲ ರಕ್ತದಾನ ಶಿಬಿರ ಏರ್ಪಡಿಸುವುದು ಅಗತ್ಯವಾಗಿದೆ. ಯುವ ರೆಡ್ ಕ್ರಾಸ್‌ನ ಕನಿಷ್ಠ 33% ಸ್ವಯಂಸೇವಕರು ತಮ್ಮ ಎರಡು ವರ್ಷದ ಸ್ವಯಂ ಸೇವಾ ಅವಧಿಯಲ್ಲಿ ಒಮ್ಮೆಯಾದರೂ ರಕ್ತದಾನ ಮಾಡಬೇಕಾಗಿರುತ್ತದೆ. (ಸಾಧ್ಯವಾದಷ್ಟು ರಕ್ತದಾನ ಶಿಬಿರವನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಕ್ತನಿಧಿ / ಸರ್ಕಾರಿ ಆಸ್ಪತ್ರೆಯ ರಕ್ತನಿಧಿಯೊಂದಿಗೆ ಏರ್ಪಡಿಸುವುದು).

**6. ಪ್ರಾಮುಖ್ಯ ದಿನಗಳ ಆಚರಣೆ :**

ಸಭೆ ಹಾಗೂ ಪ್ರದರ್ಶನಗಳನ್ನು ಸಂಘಟಿಸುವ ಮೂಲಕ ಈ ಕೆಳಕಂಡ ಪ್ರಮುಖ ದಿನಗಳ ಆಚರಣೆ ಯುವ ರೆಡ್ ಕ್ರಾಸ್ ಘಟಕದ ಕನಿಷ್ಠ ಕಡ್ಡಾಯ ಕಾರ್ಯಕ್ರಮವಾಗಿದೆ.

| | |
|---|---|
| ಜನವರಿ 12 | ರಾಷ್ಟ್ರೀಯ ಯುವ ದಿನ |
| ಏಪ್ರಿಲ್ 07 | ಜಾಗತಿಕ ಆರೋಗ್ಯ ದಿನ |
| ಜೂನ್ 05 | ವಿಶ್ವ ಪರಿಸರ ದಿನ |
| ಆಗಸ್ಟ್ 12 | ಜಿನೀವಾ ಒಪ್ಪಂದ ದಿನ |
| ಅಕ್ಟೋಬರ್ 01 | ಸ್ವಯಂಪ್ರೇರಿತ ರಕ್ತದಾನ ದಿನ |
| ಅಕ್ಟೋಬರ್ 30 | ಜೀನ್ ಹೆನ್ರಿ ಡ್ಯೂನಾಂಟ್‌ರ ಸ್ಮರಣ ದಿನ |
| ಡಿಸೆಂಬರ್ 01 | ಜಾಗತಿಕ ಏಡ್ಸ್ ದಿನ |
| ಡಿಸೆಂಬರ್ 05 | ಅಂತರರಾಷ್ಟ್ರೀಯ ಸ್ವಯಂಸೇವಕರ ದಿನ |

* * * *

ಅಧ್ಯಾಯ
XI

# ಪ್ರಥಮ ಚಿಕಿತ್ಸೆ

## ವ್ಯಾಖ್ಯೆ :

ಪ್ರಥಮ ಚಿಕಿತ್ಸೆ ಎನ್ನುವುದು ಅಪಘಾತಕ್ಕೊಳಗಾದ, ಅನಾರೋಗ್ಯ ಅಥವಾ ಗಾಯಗೊಂಡ ವ್ಯಕ್ತಿಗೆ ವೃತ್ತಿಪರ ವೈದ್ಯಕೀಯ ಸಹಾಯ ಲಭ್ಯವಾಗುವವರೆಗೆ ಜೀವವನ್ನು ರಕ್ಷಿಸಿಕೊಳ್ಳಲು ನಂಬಿಕೆಯಿಂದ ನೀಡಲಾಗುವ ಒಂದು ಮೂಲಭೂತ ವೈದ್ಯಕೀಯ ಆರೈಕೆ.

ಜರ್ಮನಿಯ ಸೇನಾ ಶಸ್ತ್ರ ಚಿಕಿತ್ಸಕರಾದ ಡಾ. ಎಸ್ಮಾರ್ಕ್ (Dr. Esmarch) ಎಂಬುವರು ಪ್ರಥಮ ಚಿಕಿತ್ಸೆಯ (First Aid) ಮೂಲ ಸಂಸ್ಥಾಪಕರಾಗಿದ್ದಾರೆ.



## ಯಾರನ್ನು ಪ್ರಥಮ ಚಿಕಿತ್ಸಕ ಎಂದು ಕರೆಯಬಹುದು?

ಅಧಿಕೃತ ತರಬೇತಿ ಸಂಸ್ಥೆಯಿಂದ – ತಾನು ಪ್ರಥಮೋಪಚಾರ ಸೇವೆಗೈಯಲು ಅರ್ಹನಾಗಿದ್ದಾನೆ ಎಂದು ಪ್ರಮಾಣ ಪತ್ರ ಪಡೆದ ಯಾವುದೇ ವ್ಯಕ್ತಿ ಜನರಿಗೆ ತರಬೇತಿ ನೀಡಲು ಮತ್ತು ಅನಾರೋಗ್ಯ ಮತ್ತು ಗಾಯ ಗೊಂಡ ವ್ಯಕ್ತಿಗೆ ಪ್ರಥಮ ಚಿಕಿತ್ಸೆ ನೀಡಲು ಅರ್ಹನಾಗಿರುತ್ತಾನೆ.

**ಪ್ರಥಮೋಪಚಾರದ ಮುಖ್ಯ ಉದ್ದೇಶಗಳು**

1. ಜೀವ ರಕ್ಷಣೆ ಮಾಡುವುದು.
2. ಹೆಚ್ಚಿನ ಹಾನಿ ತಡೆಯುವುದು.
3. ಚೇತರಿಕೆ ಉತ್ತೇಜಿಸುವುದು
4. ಅನಾರೋಗ್ಯ ಪೀಡಿತ ಗಾಯಾಳುಗಳಿಗೆ ಸುರಕ್ಷಿತ ಸಾರಿಗೆ ವ್ಯವಸ್ಥೆ ಕಲ್ಪಿಸುವುದು.

ಪ್ರಾಚೀನ ಕಾಲದಿಂದಲೂ ಅಂದರೆ 1099ನೇ ವರ್ಷದಿಂದಲೂ ಪ್ರಥಮ ಚಿಕಿತ್ಸೆಗೆ ತನ್ನದೇ ಆದ ಇತಿಹಾಸವಿದೆ ಯುದ್ಧಭೂಮಿಯಲ್ಲಿ ಅನಾರೋಗ್ಯ ಮತ್ತು ಗಾಯಗೊಂಡ ಸೈನಿಕರಿಗೆ ಸಹಾಯ ಮಾಡುವ ಸಲುವಾಗಿ 1860ರ ಮೊದಲ ಜಿನೀವಾ ಕನ್ವೆಷನ್ ಮತ್ತು ಅಂತರ ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ, ಅಸ್ತಿತ್ವಕ್ಕೆ ಬಂದಿತು. 1877ರಲ್ಲಿ ಸೇಂಟ್ ಜಾನ್ ಆಂಬ್ಯುಲೆನ್ಸ್ ಪರಿಚಯಿಸಲಾಯಿತು. ಈ ಮಧ್ಯೆ 1882ರಲ್ಲಿ ಸ್ಕಾಟ್ಲೆಂಡ್‌ನಲ್ಲಿ ಸೇಂಟ್ ಆಂಡ್ರ್ಯೂಸ್ ಆಂಬ್ಯುಲೆನ್ಸ್ ಸಂಘವನ್ನು ಪ್ರಾರಂಭಿಸಲಾಯಿತು.

ಕರ್ನಾಟಕದಲ್ಲಿ, ಪ್ರಥಮ ಚಿಕಿತ್ಸಾ ತರಬೇತಿಯನ್ನು 2011ರಲ್ಲಿ ಪ್ರಾರಂಭಿಸಲಾಯಿತು ಮತ್ತು ನಾವು ಈವರೆಗೆ 40,000ಕ್ಕೂ ಹೆಚ್ಚು

ಅಭ್ಯರ್ಥಿಗಳಿಗೆ ತರಬೇತಿ ನೀಡಿದ್ದೇವೆ. ಕರ್ನಾಟಕ ರಾಜ್ಯ ಶಾಖೆಯು ಪ್ರೌಢ ಶಾಲಾ ವಿದ್ಯಾರ್ಥಿಗಳು, ಕಾಲೇಜು ವಿದ್ಯಾರ್ಥಿಗಳು, ಚಾಲಕರು, ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು ಸಾರ್ವಜನಿಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡುತ್ತಿದ್ದು, ಮೌಲ್ಯ ಮಾಪನ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಅರ್ಹ ಅಭ್ಯರ್ಥಿಗಳಿಗೆ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ.



## ವಿಭಿನ್ನ ಸನ್ನಿವೇಶಗಳಲ್ಲಿ ಪ್ರಥಮ ಚಿಕಿತ್ಸೆ :

**ರಕ್ತಸ್ರಾವ:**– ರಕ್ತಸ್ರಾವವಾಗುತ್ತಿರುವ ಗಾಯದ ಮೇಲೆ ಸಾಮಾನ್ಯವಾಗಿ ರಕ್ತದ ಸೋರುವಿಕೆಯನ್ನು ನಿಲ್ಲಿಸಲು ರಕ್ತಸ್ರಾವದ ಪ್ರದೇಶವನ್ನು ಕನಿಷ್ಠ 10 ನಿಮಿಷಗಳ ಕಾಲ ಒತ್ತಿಡುವುದರಿಂದ ನಿಲ್ಲಿಸಬಹುದು.

**ಮುಳುಗುವಿಕೆ:** – ಮುಳುಗುತ್ತಿರುವವರನ್ನು ರಕ್ಷಿಸುವ ವ್ಯಕ್ತಿಯು ಮೊದಲು ತಾನು ತೇವರಹಿತ ಸ್ಥಳದಲ್ಲಿ ನಿಂತು ಮುಳುಗುತ್ತಿರುವವರನ್ನು ಪಾರು ಮಾಡಲು ಕೋಲು ಅಥವಾ ಕೊಂಬೆ ಅಥವಾ ಹಗ್ಗವನ್ನು ಹಿಡಿದುಕೊಂಡು ಅವನನ್ನು / ಅವಳನ್ನು ನೀರಿನಿಂದ ಹೊರಗೆ ಎಳೆಯಬೇಕು,

ಅಪಘಾತಕ್ಕೊಳಗಾದವರು ನೀರಿನಿಂದ ಹೊರಬಂದ ನಂತರ ಅವನನ್ನು/ ಅವಳನ್ನು ಗಾಳಿಯಿಂದ ರಕ್ಷಿಸಿ ಬೆಚ್ಚಗಿನ ಬಟ್ಟೆ ಮತ್ತು ಕಂಬಳಿಯಂತಹ ಹೊದಿಕೆಯಿಂದ ಅವರ ಶರೀರಕ್ಕೆ ಹೊದಿಸಬೇಕು.

**ಕಡಿತ :–** ಮೊದಲು ಮಕ್ಕಳು ಅಥವಾ ಕಡಿತಕ್ಕೊಳಗಾದ ವ್ಯಕ್ತಿಗೆ ಧೈರ್ಯ ತುಂಬಬೇಕು, ಗಾಯವನ್ನು ಔಷದಯುಕ್ತ ಡ್ರೆಸ್ಸಿಂಗ್‌ನಿಂದ ಮುಚ್ಚಬೇಕು ತದನಂತರ ಅವನನ್ನು / ಅವಳನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯಬೇಕು.

**ಸುಟ್ಟಗಾಯಗಳು :–** ಆಕಸ್ಮಿಕವಾಗಿ ಆಗುವ ಸುಟ್ಟಗಾಯಗಳ ಮೇಲೆ ಆದಷ್ಟು ಶೀಘ್ರದಲ್ಲಿ ಕನಿಷ್ಠ 10 ನಿಮಿಷಗಳ ಕಾಲ ತಣ್ಣನೆಯ ನೀರು ಹಾಕುವುದು ಮತ್ತು ಗಾಯಗೊಂಡ ಪ್ರದೇಶವನ್ನು ಸ್ವಚ್ಛ ಒಣ ಬಟ್ಟೆಯಿಂದ ಡ್ರೆಸ್ಸಿಂಗ್ ಮಾಡಿರಬೇಕು.

ಗಂಭೀರವಾದ ಗಾಯಗಳಿಗೆ ವೈದ್ಯರಿಂದ ಚಿಕಿತ್ಸೆ ಮಾಡಿಸಬೇಕು ಮತ್ತು ಸಣ್ಣ ಸುಟ್ಟ ಗಾಯಗಳಿಗೆ ಜೇನುತುಪ್ಪ ಅಥವಾ ಅಲೋವೆರಾವನ್ನು ಹಚ್ಚಬೇಕು.



## ಪ್ರಥಮ ಚಿಕಿತ್ಸಾ ನಿಯಮಗಳು:

1. ಸುತ್ತುವರಿದ ಜನಜಂಗುಳಿಯನ್ನು ದೂರ ಸರಿಸಿರಿ. ಗಾಯಾಳುಗಳನ್ನು ಸುತ್ತುವರಿಯಲು ಜನರಿಗೆ ಅವಕಾಶ ಕೊಡಬೇಡಿ. ಗಾಯಾಳುಗಳಿಗೆ ಶುದ್ಧಗಾಳಿ ಬೇಕಾಗುತ್ತದೆ. ವೈದ್ಯರು ಅಲ್ಲಿ ಹಾಜರಿದ್ದರೆ ನಿಮಗೆ ಮಾರ್ಗದರ್ಶನ ಮಾಡುತ್ತಾರೆ. ಪ್ರಥಮೋಪಚಾರಕರು ಇದ್ದಲ್ಲಿ ಅವರ ಸಹಾಯ ಪಡೆಯಿರಿ. ಇಲ್ಲವಾದಲ್ಲಿ ಸುತ್ತಲಿನ ಜನರ ಸಹಾಯ ಪಡೆಯ ಬೇಕಿದ್ದರೆ ಅವರಿಗೆ ಸರಿಯಾದ ಮಾಹಿತಿ ಕೊಡಬೇಕು.

2. ಯಾವುದೇ ವ್ಯಕ್ತಿಗೆ ಅಪಘಾತ ಸಂಭವಿಸಿದ್ದಲ್ಲಿ, ಆ ಪ್ರದೇಶವನ್ನು ತಪಾಸಣೆ ಮಾಡಿರಿ. ಒಂದು ವೇಳೆ ಜೋತುಬಿದ್ದ ವಿದ್ಯುತ್ ತಂತಿಗಳು, ಬಿದ್ದ ಗೋಡೆಗಳು, ಬೆಂಕಿ, ಒಡೆದ ಗ್ಯಾಸ್ ಚೇಂಬರ್‌ಗಳು, ಚಲಿಸುತ್ತಿರುವ ಯಂತ್ರಗಳು ಇವುಗಳಿದ್ದಲ್ಲಿ, ಅವುಗಳನ್ನು ತೆರೆವುಗೊಳಿಸಬೇಕು.

3. ಹವಮಾನವನ್ನು ಗಮನಿಸಿ. ಮಳೆ, ಬಿಸಿಲು ಅಥವಾ ಗಾಳಿ ಗಾಯಾಳುಗಳನ್ನು ಸುರಕ್ಷಿತ ಪ್ರದೇಶಕ್ಕೆ ಸಾಗಿಸುವುದು. ಒಂದು ಉತ್ತಮ



ವಾತಾವರಣದ ಬಯಲಿನಲ್ಲಿಯೇ ಉಪಚರಿಸಿರಿ. ಇಲ್ಲದಿದ್ದರೆ ಗಾಯಾಳುಗಳನ್ನು ಸುರಕ್ಷಿತ ಕೋಣೆಗೆ ಸಾಗಿಸಿರಿ. ಹತ್ತಿರದಲ್ಲಿಯೇ ಸೂಕ್ತ ಮನೆ ಅಥವಾ ಆಸ್ಪತ್ರೆ ದೊರಕಿದರೆ ಗಾಯಾಳುಗಳನ್ನು ಅಲ್ಲಿಗೆ ಸುರಕ್ಷಿತವಾಗಿ ಸಾಗಿಸುವುದು ಉತ್ತಮ.

4. ಗಾಯಾಳುಗಳಿಗೆ ಭರವಸೆ ನೀಡಿರಿ. ಮೃದು ಮಾತು ಹಾಗೂ ಉತ್ತೇಜಕ ಮಾತುಗಳಿಂದ ಗಾಯಾಳುವನ್ನು ಉಪಚರಿಸಿದರೆ ಚೇತರಿಕೆಯ ಚೈತನ್ಯ ಪಡೆಯುತ್ತಾರೆ.

5. ರೋಗಿಗೆ ಸಕಾರಾತ್ಮಕ ಭರವಸೆ ನೀಡಿ.

6. ಆಂಬ್ಯುಲೆನ್ಸ್‌ಗೆ ಕರೆಮಾಡಿ.

## ಶಾಲೆಗಳಲ್ಲಿ ಪ್ರಥಮ ಚಿಕಿತ್ಸಾ ಪಟ್ಟಿಗೆ:

ಎಲ್ಲಾ ಶಾಲೆಯು ಈ ಕೆಳಕಂಡ ಸಾಮಾಗ್ರಿಗಳ ಒಳಗೊಂಡ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಕಡ್ಡಾಯವಾಗಿ ಹೊಂದಿರಬೇಕು

| | | | | | |
|---|---|---|---|---|---|
| 1 | ಟ್ರೈಯಾಂಗುಲರ್ ಬ್ಯಾಂಡೇಜ್ | 6 | ಫ್ರಾಮಿಸೆಟೆನ್‌ಸಲ್ಫೇಟ್ (ಸೋಫ್ರೆಮೈಸಿನ್) | 11 | ಹತ್ತಿ |
| 2 | ಗಾಜ್ ಪ್ಯಾಡ್ | 7 | ಸ್ಪಿಲಿಂಟ್ಸ್ | 12 | ಐಪ್ಯಾಡ್ |
| 3 | ಲೋಷನ್ ಕ್ಲೋಕ್ಸಿಡಿನ್ (ಸಾವ್ಲಾನ್) | 8 | ಟೂರ್ನಿಕಿಟ್ | 13 | ಟೇಪ್ ಅಂಟಿಕೊಳ್ಳುವ |
| 4 | ಲೋಷನ್ ಪೊವೈಡನ್ ಅಯೋಡಿನ್(ಬೆಟಾಡಿನ್) | 9 | ಕಿಡ್ನಿಟ್ರೇ | 14 | ಬ್ಯಾಂಡ್‌ಏಡ್ |
| 5 | ಕತ್ತರಿ | 10 | ಐಸ್‌ಬ್ಯಾಗ್ | 15 | ಬಿಸಿನೀರಿನಬಾಟಲ್/ ಓ.ಆರ್.ಎಸ್. ಪೌಡರ್ |

## ಕಾರ್ಡಿಯೋ ಪಲ್ಮನರಿ ರಿಸಸ್ಸಿಟೇಷನ್ (ಸಿ.ಪಿ.ಆರ್):

ಹೃದಯವು ಕೆಲಮೊಮ್ಮೆ ಇದ್ದಕ್ಕಿದ್ದಂತೆ ನಿಷ್ಕ್ರಿಯವಾಗಬಹುದು ಇದನ್ನು ಹೃದಯಾಘಾತ ಅಥವಾ ಕಾರ್ಡಿಯಾಕ್ ಅರೆಸ್ಟ್ ಎಂದು ಕರೆಯುತ್ತೇವೆ. ಹೃದಯಕ್ಕೆ ರಕ್ತವನ್ನು ಸರಬರಾಜು ಮಾಡುವ ರಕ್ತನಾಳಗಳಲ್ಲಿ ಗಡ್ಡೆ ಕಟ್ಟಿದ ರಕ್ತವೂ, ರಕ್ತದ ಹರಿಯುವಿಕೆಗೆ ಅಡಚಣೆ ಉಂಟುಮಾಡುತ್ತದೆ. ಹೃದಯಾಘಾತಕ್ಕೆ ರಕ್ತದ ಹೆಪ್ಪುಗಟ್ಟುವಿಕೆ ಮುಖ್ಯವಾದ ಕಾರಣ. ಇಂತಹ ಸಮಯದಲ್ಲಿ ತಕ್ಷವೇ ಸಿ.ಪಿ.ಆರ್ ಪ್ರಾರಂಭಿಸಬೇಕು. ಸಿ.ಪಿ.ಆರ್ ಕ್ರಮ ಈ ಕೆಳಕಂಡಂತೆ ಇದೆ.

**C- Chest Compressions =** ಎದೆಒತ್ತುಗಳು

**A- Air Way =** ವಾಯು ಮಾರ್ಗ

**B- Breathing =** ಉಸಿರಾಡುವಿಕೆ



ಈ ಮೇಲ್ಕಂಡ ಕ್ರಮಗಳನ್ನು ಅನುಸರಿಸುವ ಮೂಲಕ ಹೃದಯಾಘಾತದಿಂದ ವ್ಯಕ್ತಿಯನ್ನು ರಕ್ಷಿಸಬಹುದು.

## ಪ್ರಥಮ ಚಿಕಿತ್ಸೆ ಬಗ್ಗೆ ಮೊಬೈಲ್ ಅಪ್ಲಿಕೇಶನ್:

ಭಾರತ ಸರ್ಕಾರ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕೇಂದ್ರ ಕಛೇರಿ, ನವದೆಹಲಿಯ ಇವರ ಸಹಯೋಗದಲ್ಲಿ **First Aid** ಎಂಬ ಹೊಸ **Mobile Application** ಅಭಿವೃದ್ಧಿ ಪಡಿಸಲಾಗಿದೆ. ಇದು ಶಾಲಾ ಶಿಕ್ಷಕರು ಮತ್ತು ಮಕ್ಕಳಿಗೆ ಪ್ರಥಮ ಚಿಕಿತ್ಸೆ ಬಗ್ಗೆ ಹಚ್ಚಿನ ಮಾಹಿತಿಯನ್ನು ನೀಡುತ್ತದೆ. ಆಸಕ್ತಿಯುಳ್ಳವರು ಈ ಗೂಗಲ್ ಪ್ಲೇಸ್ಟೋರ್ ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.



* * * *

ಅಧ್ಯಾಯ

XII



# ವೈಯಕ್ತಿಕ ಸ್ವಚ್ಛತೆ

## ಮಾನವನ ದೇಹ

### ಆರೋಗ್ಯವಂತ ಆಹಾರ :

ಸಸಾರಜನಕ : ಮಾಂಸ, ಮೀನು, ಗಿಣ್ಣು, ಕಾಳು, ಹಾಲು, ಮೊಸರು, ಮೊಟ್ಟೆಗಳು ಮತ್ತು ಒಣ ಹಣ್ಣುಗಳು

ಮೇದಸ್ಸು : ಗಿಣ್ಣು, ಪೂರ್ಣ ಮೊಟ್ಟೆಗಳು, ಮೀನು, ಒಣ ಹಣ್ಣುಗಳು ಮತ್ತು ವನಸ್ಪತಿ

ಶರ್ಕರ ಪಿಷ್ಠ : ಧಾನ್ಯಗಳು, ಆಲೂಗಡ್ಡೆ ಮತ್ತು ಸಕ್ಕರೆ

ಅನ್ನಾಂಗಗಳು : ಹಾಲು, ಮೊಟ್ಟೆ, ಧಾನ್ಯಗಳು, ತರಕಾರಿ ಮತ್ತು ಹಣ್ಣುಗಳು

ಖನಿಜಾಂಶಗಳು : ತರಕಾರಿಗಳು, ಹಣ್ಣುಗಳು ಮತ್ತು ಧಾನ್ಯಗಳು,



# ಮಾದರಿ ನಿತ್ಯ ದಿನಚರಿ:


ಏಳುವುದು
ಬೆಳಿಗ್ಗೆ 6.00 ಗಂಟೆಗೆ


ಶೌಚಾಲಯ & ಹಲ್ಲುಗಳ
ಸ್ವಚ್ಛತೆ ಬೆಳಿಗ್ಗೆ 6.10–6.30


ನಡಿಗೆ ಮತ್ತು ವ್ಯಾಯಾಮ
ಬೆಳಿಗ್ಗೆ 6.30–7.00


ಸ್ನಾನ
ಬೆಳಿಗ್ಗೆ 7.00–7.30


ಉಪಾಹಾರ
ಬೆಳಿಗ್ಗೆ 7.30–8.00


ಶಾಲೆ ಬೆಳಿಗ್ಗೆ 8.00 –
ಮಧ್ಯಾಹ್ನ 1.30


ಮಧ್ಯಾಹ್ನದ ಊಟ
ಮಧ್ಯಾಹ್ನ 1.30–2.00


ದೂರದರ್ಶನ ಮತ್ತು ವಿಶ್ರಾಂತಿ
ಮಧ್ಯಾಹ್ನ 2.00–3.00


ಶಾಲೆಯ ಮನೆಕೆಲಸ
ಮಧ್ಯಾಹ್ನ 3.00–4.30


ಸಾಯಂಕಾಲದ ಲಘುಉಪಹಾರ
ಸಂಜೆ 4.30–5.00


ಹೊರಗಡೆ ಆಟ
ಸಂಜೆ 5.00–7.00


ಹವ್ಯಾಸದ ಸಮಯ
ಸಂಜೆ 7.00–8.30


ರಾತ್ರಿ ಊಟ
ರಾತ್ರಿ 8.30–9.30


ಹಲ್ಲಿನ ಸ್ವಚ್ಛತೆ
ಮತ್ತು ಸ್ನಾನ


ಮಲಗುವುದು
ರಾತ್ರಿ 10.00 ಗಂಟೆಗೆ

## ವೈಯಕ್ತಿಕ ಸ್ವಚ್ಛತೆ:

### ಮಾಡಬೇಕಾದವುಗಳು

- ಕೈಗಳನ್ನು ತೊಳೆಯಿರಿ
  - ಊಟಕ್ಕಿಂತ ಮುಂಚೆ ಮತ್ತು ನಂತರ
  - ಶೌಚಾಲಯ ಉಪಯೋಗಿಸಿದ ನಂತರ
  - ಕೆಮ್ಮಿದ ನಂತರ, ಸೀನಿದ ನಂತರ, ಮೂಗು ಸ್ವಚ್ಛ ಮಾಡಿದ ನಂತರ
  - ಮುದ್ದಿನ ಪ್ರಾಣಿಯೊಂದಿಗೆ ಆಟವಾಡಿದ ನಂತರ
  - ಹೊರಗಡೆ ಆಟವಾಡಿದ ನಂತರ
- ದಿನಕ್ಕೆರಡು ಬಾರಿ ಹಲ್ಲನ್ನು ಬ್ರಶ್ ಮಾಡಿ
- ದಿನಕ್ಕೆರಡು ಬಾರಿ ಸ್ನಾನ ಮಾಡಿ
- ತೋಳಿನ ಒಳಗೆ (ಕಂಕಳು) ಮತ್ತು ವೈಯಕ್ತಿಕ ಭಾಗವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ
- ನಿಯಮಿತವಾಗಿ ತಲೆ ಬಾಚಿಕೊಳ್ಳಿ
- ಒಳ ಉಡುಪುಗಳನ್ನು ಪ್ರತಿದಿನ ಬದಲಾಯಿಸಿ
- ಉಗುರುಗಳನ್ನು ನಿಯಮಿತವಾಗಿ ಕತ್ತರಿಸಿ
- ಸೀನುವಾಗ ಮತ್ತು ಕೆಮ್ಮುವಾಗ ಮುಖವನ್ನು ಮುಚ್ಚಿಕೊಳ್ಳಿ
- ಯಾವಾಗಲೂ ಸ್ವಚ್ಛವಾದ ಬಟ್ಟೆಯನ್ನು ಧರಿಸಿ.
- ಉಪಯೋಗಿಸಿದ ಬಟ್ಟೆ, ಕಾಗದಗಳನ್ನು ಪ್ರತ್ಯೇಕ ಕಸದ ಬುಟ್ಟಿಯಲ್ಲಿ ಹಾಕಿ


ಅಂಗೈಯಿಂದ ಅಂಗೈಗೆ


ಬೆರಳುಗಳ ಮಧ್ಯೆ


ಕೈಗಳ ಹಿಂಭಾಗ


ಹೆಬ್ಬೆರಳುಗಳ ತಳದಿಂದ


ಬೆರಳುಗಳ ಹಿಂಭಾಗದಿಂದ


ಬೆರಳುಗಳ ಉಗುರುಗಳು


ಮುಂಗೈಗಳು


ತೊಳೆಯಿರಿ ಮತ್ತು ಒಣಗುವ ಹಾಗೆ ಒರೆಸಿ

ಸಾಕಷ್ಟು ವೈಯಕ್ತಿಕ ಸ್ವಚ್ಛತೆ ಇಲ್ಲದಿದ್ದರೆ ಕೆಳಗಿನ ತೊಂದರೆಗಳು ಆಗಬಹುದು.

- ದೇಹದ ಕೆಟ್ಟ ವಾಸನೆ
- ಉಸಿರಿನ ಕೆಟ್ಟ ವಾಸನೆ.
- ಹಲ್ಲಿನ ಕಾಯಿಲೆಗಳು
- ವಾಯುಜನ್ಯ ಸೋಂಕುಗಳು
- ಆಹಾರದಿಂದ ಬರುವ ಕಾಯಿಲೆಗಳು
- ನೀರಿನಿಂದ ಬರುವ ಕಾಯಿಲೆಗಳು
- ಚರ್ಮ ಮತ್ತು ಕೂದಲಿನ ಕಾಯಿಲೆಗಳು
- ಮೂತ್ರ ಜನನೇಂದ್ರಿಯ ಮಾರ್ಗ ಸೋಂಕುಗಳು
- ಕಣ್ಣು ಮತ್ತು ಕಿವಿ ರೋಗಗಳು
- ಸಾಮಾಜಿಕ ತಿರಸ್ಕಾರ
- ಖಿನ್ನತೆ

ಅಧ್ಯಾಯ
XIII

# ಶಾಲಾ ಸುರಕ್ಷತೆ

ಶಾಲೆಗಳು ದೇಶದ ಭವಿಷ್ಯದ ಮಂದಿರಗಳು. ಇಲ್ಲಿ ದೇಶದ ಭವಿಷ್ಯವಾದ ಮಕ್ಕಳು ಓದುತ್ತಿರುತ್ತಾರೆ. ಈ ಸ್ಥಳಗಳು ಹೆಚ್ಚು ಸುರಕ್ಷಿತವಾಗಿರಬೇಕು. ಇದರಿಂದ ಶಾಲೆ ನಡೆಸಲು ಕಟ್ಟಲಾದ ಕಟ್ಟಡಗಳು ಹೆಚ್ಚು ಸುರಕ್ಷಿತವಾಗಿರಬೇಕು. ಇವುಗಳನ್ನು ಕಟ್ಟುವಾಗ, ಭವಿಷ್ಯದಲ್ಲಿ ಸಂಭವಿಸಬಹುದಾದ ವಿಪತ್ತುಗಳನ್ನು ಸಮರ್ಥವಾಗಿ ತಾಳಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು.

ಅದಕ್ಕಾಗಿ ಶಾಲಾ ಕಾರ್ಯಯೋಜನೆಯಲ್ಲಿ ಶಾಲಾ ಕಟ್ಟಡಗಳು ಹೊಂದಿರಬಹುದಾದ ಸೌಲಭ್ಯ ಮತ್ತು ವಿಪತ್ತುಗಳು ಎದುರಾದಾಗ ಅವುಗಳನ್ನು ಎದುರಿಸಲು ಮತ್ತು ವಿಪತ್ತಿನ ತೀವ್ರತೆಯನ್ನು ಕಡಿಮೆಗೊಳಿಸಲು ಶಾಲಾ ಕಾರ್ಯಯೋಜನೆಯಲ್ಲಿ ಸೇರಿಸಿಕೊಳ್ಳಬೇಕು.

### ಅಪಾಯಗಳ ಸಾಧ್ಯತೆ ಪಟ್ಟಿ ಕೆಳಗಿದೆ

1. ವಿದ್ಯುತ್ ಕಡಿತ ಆಗುವುದು.
2. ಮೆಟ್ಟಿಲು ಕುಸಿಯುವುದು, ಸಮವಿಲ್ಲದ ನೆಲ ಮತ್ತು ಹಳೆಯ ಗೋಡೆಗಳ ಮತ್ತು ಚಾವಣಿಯ ಪ್ಲಾಸ್ಟರ್ ಬೀಳುವುದು.
3. ಪ್ಲಾಸ್ಟಿಕ್ ಹಾಗೂ ಕಾಗದಗಳು ಸುಡುವುದರಿಂದ ಸಭಾಂಗಣದಲ್ಲಿ ಹೊಗೆ ತುಂಬಿ ಹೋಗುವುದು.

4. ಬಾಗಿಲು, ಕಿಟಕಿಗಳು ತೆಗೆಯಲು ಆಗದಿರುವುದು
5. ಜೋತಾಡುತ್ತಿರುವ ಮಾಳಿಗೆ ಮೇಲ್ಭಾವಣಿಗಳು ಇತ್ಯಾಧಿ

## ಪಾತ್ರಗಳು ಮತ್ತು ಹೊಣೆಗಾರಿಕೆಗಳು:

### ವಿಪತ್ತು ಬಂದೆರಗುವ ಮುನ್ನ :

1. ಶಾಲೆಯ ಒಳ ಮತ್ತು ಹೊರ–ಹೋಗುವ ಹಾದಿಗಳ ತಪಾಸಣೆ.
2. ವಿಪತ್ತಿನ ಪರಿಸ್ಥಿತಿಯಲ್ಲಿ ಎಲ್ಲರೂ ಸೇರಲು ಸುರಕ್ಷಿತ ಸ್ಥಳವನ್ನು ಗುರುತಿಸುವುದು.
3. ಸುಲಭವಾಗಿ ಸಿಗುವ ಅವಶ್ಯಕ ವಸ್ತುಗಳನ್ನು ಮೊದಲೆ ನಿರ್ಧರಿಸುವುದು
4. ರೋಗಿ ಮತ್ತು ವಿಕಲಾಂಗ ವಿದ್ಯಾರ್ಥಿಗಳ ವಿಶೇಷ ಗಮನ ಹರಿಸುವುದು.
5. ಕಟ್ಟಡ ಹಾಳಾದಾಗ ಅಧಿಕೃತ ಸಮಿತಿಗಳೊಂದಿಗೆ ಸಮಾಲೋಚನೆ ಮಾಡಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವುದು.

### ವಿಪತ್ತು ಬಂದೆರಗಿದಾಗ:–

1. ಭೂಕಂಪದ ಮೊದಲನೆ ಸುಳಿವು ಸಂಬವಿಸಿದ್ದಲ್ಲಿ ಬಗ್ಗು, ತನ್ನನ್ನ ತಾನು ಕವರ್ ಮಾಡು ಮತ್ತು ಯಾವುದೇ ಸ್ಥಿರ ವಸ್ತುವನ್ನು ಹಿಡಿದುಕೋ! ಎಂಬ ವಾದರಿಯುನ್ನು ಅನುಸರಿಸಬೇಕು. ಸಾವಾಗ್ರಿಗಳು ಅಲುಗಾಡದಿದ್ದರೆ ಅದರ ಕಾಲುಗಳನ್ನು ಹಿಡಿದುಕೊಳ್ಳಿ. ಅದರ ಕೆಳಗೆ ತಲೆ ಮರೆಸಿಕೊಳ್ಳಿ. ಕಟ್ಟಡದ ಹೊರಗೆ ಇದ್ದರೆ ಕೂಡಲೆ ದೂರ ಹೋಗಿ.

2. ಪ್ರಾತ್ಯಕ್ಷಿಕೆಯಲ್ಲಿ ಕಲಿಸಿದ ವಿಧಾನಗಳಾದ ಕಟ್ಟಡ ಬಿಟ್ಟು ಮೊದಲೇ ನಿರ್ಧಾರಿತ ಸುರಕ್ಷಿತ ಜಾಗ ಸೇರಿಕೊಳ್ಳಬೇಕು. ಇದರಿಂದ ಕಂಗಾಲಾಗಿ ಅತ್ತಿತ್ತ ಓಡುವ ಜನರಿಂದ ದುರ್ಘಟನೆ ಆಗದಿರಲು ಸಹಾಯ ಆಗುತ್ತದೆ.

### ವಿಪತ್ತು ಬಂದು ಹೋದನಂತರ:–

- ಆಪತ್ಕಾಲದಲ್ಲಿ ರಕ್ಷಣೆ ಪಡೆಯ ಬೇಕೆಂದಿರುವ ನಿರ್ಧಾರಿತ ಜಾಗ ಸುರಕ್ಷಿತವಾಗಿದೆಯೆಂದು ಮೊದಲೇ ಖಾತ್ರಿ ಮಾಡಿಕೊಳ್ಳಬೇಕು.
- ಕಟ್ಟಡ ಖಾಲಿ ಮಾಡಲು ಪೂರೈಸಬೇಕಾದ ಇತರ ಅವಶ್ಯಕತೆಗಳನ್ನು ಪರಿಶೀಲನೆ ಮಾಡಿ
- ವಿಪತ್ತು ಘಟಿಸಿದ ಮೇಲೆ ಮುಖ್ಯೋಪಾಧ್ಯಾಯರಿಗೆ ವರದಿ ಒಪ್ಪಿಸಿ.

### ಅವಶ್ಯಕ ತರಬೇತಿ:–

ಹುಡುಕಾಟ, ಉಳಿಸುವಿಕೆ ಮತ್ತು ರಕ್ಷಣೆಯ ತಂತ್ರಗಳನ್ನೊಳಗೊಂಡ ತರಬೇತಿಯನ್ನು ಸ್ಥಳೀಯ ಪೊಲೀಸ್ ಮತ್ತು ಅಗ್ನಿ ಶಾಮಕ ದಳಗಳ ಪ್ರತಿನಿಧಿಗಳ ಸಹಯೋಗದೊಂದಿಗೆ ಏರ್ಪಡಿಸುವುದು.

### ಶಾಲಾ ವಿಪತ್ತು ನಿರ್ವಹಣಾ ಯೋಜನೆಯ ಹಂತಗಳು:–

- ಶಾಲೆಯ ಆವರಣವದಲ್ಲಿ ಸಮಾವೇಶವನ್ನು ಸಂವೇದನಾಶೀಲವಾಗಿ ಮಾಡಲು ಜಾಗರೂಕತೆ ವಹಿಸುವುದು.
- ಶಾಲೆಯಲ್ಲಿ ವಿಪತ್ತು ನಿರ್ವಹಣಾ ಸಮಿತಿಯ ರಚನೆ
- ಅಪಾಯದ ಗುರುತಿಸುವಿಕೆ ಮತ್ತು ಸುರಕ್ಷತೆಯ ನಿರ್ಧರಣೆ.
- ಶಾಲೆಯ ವಿಪತ್ತು ನಿರ್ವಹಣಾ ಕಾರ್ಯ ಯೋಜನೆಯ (**SDMAP**) ರಚನೆ

- ನಿಯಮಿತ ರೂಪದಲ್ಲಿ ಪ್ರಾತ್ಯಕ್ಷಿಕೆ ಅಭ್ಯಾಸ, ಅಣುಕು ಅಭ್ಯಾಸದ ಸಂಚಾಲನೆ ಮತ್ತು ಶಾಲೆಯ ವಿಪತ್ತು ನಿರ್ವಹಣಾ ಸಮಿತಿಗೆ ಸೂಚನೆ.
- ಪ್ರಭಾವಶಾಲಿ ಪರಿಣಾಮಗಳಿಗೆ ಸಕಾಲದಲ್ಲಿ ಕ್ರಿಯಾ ಯೋಜನೆಯ ಮೌಲ್ಯಾಂಕನ.

ಶಾಲೆಯ ವಿಪತ್ತು ನಿರ್ವಹಣಾ ಯೋಜನೆಯ ರಚನೆಯ ಮೊದಲು ಶಾಲೆಯ ಎಲ್ಲ ಸದಸ್ಯರಿಗೆ  ಸಂವೇದನಾ ಶೀಲ ಮಾಡಲು ಜಾಗರೂಕತಾ ಸಮಾವೇಶವನ್ನು ಆಯೋಜಿಸಬೇಕು. ಇದರಲ್ಲಿ.

1) ಮುಖ್ಯೋಪಾಧ್ಯಾಯರು

2) ಸಹಾಯಕ ಮುಖ್ಯೋಪಾಧ್ಯಾಯರು

3) ನಿರ್ವಹಣಾ ಕಾರ್ಯಕಾರಿ ಸಮೂಹ

4) ಎಲ್ಲಾ ಅಧ್ಯಾಪಕರು ಮತ್ತು ವಿದ್ಯಾರ್ಥಿ ಮುಂದಾಳುಗಳು

ಒಳಗೊಂಡಿರಬೇಕು.

## ಶಾಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಸಮನ್ವಯ ಸಮಿತಿ ಸದಸ್ಯರು:–

- ಅಧ್ಯಕ್ಷರು–ಶಾಲಾ ಮುಖ್ಯೋಪದ್ಯಾಯರು/ಮುಖ್ಯಸ್ಥರು
- ಉಪಾಧ್ಯಕ್ಷರು–ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲಾ ಮುಖ್ಯಸ್ಥರು
- ಶಾಲಾ ಅಭಿವೃದ್ಧಿ ಶಿಕ್ಷಣ ಅಧಿಕಾರಿ
- ಅಧ್ಯಾಪಕ–ಪೋಷಕ ವರ್ಗದ ಸಂಘದ ಅಧ್ಯಕ್ಷ.
- 1–2 ಪೋಷಕರು (ಕಡಿಮೆ ಎಂದರೆ ಒಬ್ಬರು ಮಹಿಳಾ ಸದಸ್ಯರು ಇರಬೇಕು
- ಇನ್ನೂ ಮುಂತಾದ ಸ್ಥಳೀಯ ಸರ್ಕಾರದ ಅಧಿಕಾರಿ ವರ್ಗ

## ಅಪಾಯದ ಗುರುತಿಸುವಿಕೆ ಮತ್ತು ರಕ್ಷಣೆಯ ಏರ್ಪಾಡು:–

ಸ್ಥಳದಲ್ಲಿ ಆಗಬಹುದಾದ ಭೂಕಂಪ, ಭೂಕುಸಿತ ನೆರೆ,ಬೆಂಕಿ ಇತ್ಯಾದಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕಟ್ಟಡಗಳನ್ನು ನಿರ್ಮಿಸುವುದು ಕಟ್ಟಡದ ರಕ್ಷಣೆಯ ನಿರ್ಧಾರಕ್ಕೆ ಅಗತ್ಯ. ಇದಕ್ಕೆ ಶಾಲಾ ಅಧಿಕಾರಿಗಳು ಕಟ್ಟಡ ನಿರ್ಮಾಣದಲ್ಲಿ ಸರಿಯಾಗಿ ಮಾರ್ಗದರ್ಶನ ಮಾಡುವ ಇಂಜಿನಿಯರ್ ಗಳನ್ನು, ವಿಪತ್ತು– ನಿರ್ವಹಣೆ ಪರಿಣತರನ್ನು ಮತ್ತು ಜಿಲ್ಲಾ ಆಡಳಿತಾಧಿಕಾರಿಗಳನ್ನು ಭೇಟಿ ಮಾಡಬೇಕು.

## ಉಪಸಂಹಾರ

ಮುಂದಿನ ದಿನಮಾನಗಳಲ್ಲಿ ಶಾಲೆಗಳ ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಕನಿಷ್ಠ 20 ರಿಂದ 25 ವರ್ಷಗಳಿಗೆ ಅನ್ವಯಿಸುವ ಹಾಗೆ ಸಂಭವಿಸಬಹುದಾದ ವಿಪತ್ತುಗಳನ್ನು ಗಮನದಲ್ಲಿ ಇಟ್ಟುಕೊಂಡು ಶಾಲಾ ಕಟ್ಟಡ ನಿರ್ಮಾಣ ಯೋಜನೆ ರೂಪಿಸುವುದು. ಇದರ ಬಗ್ಗೆ ಹತ್ತಿರದ ಶಾಲೆಗಳು ಅನುಸರಿಸುತ್ತಿರುವ ಮಾರ್ಗೋಪಾಯಗಳು ಏನಾದರೂ ಇದ್ದಲ್ಲಿ ಅವುಗಳನ್ನು ಗಮನಿಸುವ ಮೂಲಕ ಯೋಜನೆಗಳನ್ನು ಕೈಗೊಳ್ಳುವುದು.

* * * *



ಅಧ್ಯಾಯ

XIV

# ಕೋವಿಡ್–19 ಸೋಂಕು

## ಅರ್ಥ, ಲಕ್ಷಣಗಳು ಮತ್ತು ಹರಡುವ ವಿಧಾನಗಳು

### ಕೊರೋನ ಅಥವಾ ಕೊವಿಡ್–19 ಎಂದರೇನು?

- ಇದು ಕೊರೋನಾ ರೋಗಾಣುವಾದ SARS-COV-2ನಿಂದ ಉಂಟಾಗುತ್ತಿದೆ.
- ಈ ರೋಗಾಣು ಇರುವ ವ್ಯಕ್ತಿಗಳಲ್ಲಿ ಹಲವರು ಯಾವುದೇ ತೊಂದರೆಗಳಿಲ್ಲದೇ ಸಾಮಾನ್ಯ ಅಥವಾ ಸ್ವಲ್ಪ ಪ್ರಮಾಣದ ಶ್ವಾಸಕೋಶದ ಸಮಸ್ಯೆಗಳನ್ನು ಅನುಭವಿಸಿ ಗುಣಮುಖರಾಗುತ್ತಾರೆ. ಆದರೆ ಈಗಾಗಲೇ ಆರೋಗ್ಯ ಸಂಬಂಧೀ ಸಮಸ್ಯೆಗಳನ್ನು ಹೊಂದಿರುವವರು (ಹೃದ್ರೋಗ, ಸಕ್ಕರೆ ಖಾಯಿಲೆ, ದೀರ್ಘಕಾಲದ ಶ್ವಾಸಕೋಶ ಸಮಸ್ಯೆ, ಕ್ಯಾನ್ಸರ್ ಇತ್ಯಾದಿ) ಹಾಗೂ ವಯೋವೃದ್ಧರಿಗೆ ತೀವ್ರ ತರಹದ ಸಮಸ್ಯೆಯಾಗಿ ಕಾಡುತ್ತದೆ.
- ಜ್ವರ, ಕೆಮ್ಮು ಮತ್ತು ಉಸಿರಾಟದಲ್ಲಿ ತೊಂದರೆ – ಈ ರೋಗದ ಸಾಮಾನ್ಯ ಲಕ್ಷಣಗಳು
- ಜ್ವರ, ಕೆಮ್ಮು ಮತ್ತು ಉಸಿರಾಟದಲ್ಲಿ ತೊಂದರೆ ಇಲ್ಲದಿದ್ದರೆ ಕೋವಿಡ್–19ರ ಪರೀಕ್ಷೆ ಅಗತ್ಯವಿರುವುದಿಲ್ಲ.

- ನಿಮಗೆ ಜ್ವರ, ಕೆಮ್ಮು ಅಥವಾ ಉಸಿರಾಟದಲ್ಲಿ ತೊಂದರೆ ಇದ್ದರೆ ಅಥವಾ ಪರೀಕ್ಷಾ ಕೇಂದ್ರದಲ್ಲಿ ದೃಢೀಕರಿಸಲ್ಪಟ್ಟ ಸೋಂಕಿತ ವ್ಯಕ್ತಿಯು ಸಂಪರ್ಕದಲ್ಲಿ ಬಂದಿದ್ದರೆ ಕೂಡಲೇ ರಾಜ್ಯ ಸಹಾಯವಾಣಿಗೆ ಅಥವಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಕೇಂದ್ರ ಸರ್ಕಾರದ 24/7 ಸಹಾಯವಾಣಿಯಾದ 011-23978046, 1075ಗೆ ಕರೆ ಮಾಡುವುದು ಅಥವಾ ಆಶಾ/ ಎ.ಎನ್.ಎಮ್‌ರವರನ್ನು ಸಂಪರ್ಕಿಸುವುದು.

## ಕೋವಿಡ್-19ರ ಸಾಮಾನ್ಯ ಲಕ್ಷಣಗಳು?

- ಜ್ವರ, ಗಂಟಲು ನೋವು, ಕೆಮ್ಮು ಮತ್ತು ಉಸಿರಾಡಲು ಕಷ್ಟವಾಗುವುದು.
- ಸಾಮಾನ್ಯ ನೆಗಡಿ, ಫ್ಲೂ ಮುಂತಾದ ವೈರಲ್ ಸೋಂಕಿನ ಖಾಯಿಲೆಗಳಲ್ಲಿ ಕಂಡುಬರುವ ಲಕ್ಷಣಗಳೇ ಇಲ್ಲೂ ಕಂಡುಬರುತ್ತವೆ.

## ಕೊರೋನ ಒಬ್ಬರಿಂದ ಮತ್ತೊಬ್ಬರಿಗೆ ಹೇಗೆ ಹರಡುತ್ತದೆ?

- ಈ ಖಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯು ಸೀನಿದಾಗ ಅಥವಾ ಕೆಮ್ಮಿದಾಗ ಅಸಂಖ್ಯಾತ ಹನಿಗಳ ಕಣಗಳು ಗಾಳಿಯಲ್ಲಿ ಹರಡುತ್ತವೆ ಅಥವಾ ನೆಲದ ಮೇಲೆ ಮತ್ತು ಹತ್ತಿರದ ವಸ್ತುಗಳ ಮೇಲ್ಮೈಗಳ ಮೇಲೆ ಬೀಳುತ್ತವೆ.
- ಹತ್ತಿರದಲ್ಲಿರುವ ಇನ್ನೊಬ್ಬ ವ್ಯಕ್ತಿಯು ಈ ಹನಿಗಳನ್ನು ಶ್ವಾಸದ ಮೂಲಕ ಒಳಗೆಳೆದುಕೊಂಡಾಗ ಅಥವಾ ಆ ಹನಿಗಳ ಕಣಗಳಿರುವ ವಸ್ತುಗಳ ಮೇಲ್ಮೈಗಳನ್ನು ಸ್ಪರ್ಶಿಸಿ ನಂತರ ತನ್ನ ಮುಖ, ಕಣ್ಣುಗಳು ಅಥವಾ ಬಾಯಿಯನ್ನು ಮುಟ್ಟಿಕೊಂಡಲ್ಲಿ ಅವರಿಗೆ ಆ ಸೋಂಕು ತಗಲುತ್ತದೆ
- ಸೋಂಕು ಇರುವ ವ್ಯಕ್ತಿಯಿಂದ ಒಂದು ಮೀಟರ್ ಒಳಗಿನ ಅಂತರದಲ್ಲಿ ಇರುವ ವ್ಯಕ್ತಿಗೆ ಈ ಸೋಂಕು ತಗಲುವ ಸಾಧ್ಯತೆ ಹೆಚ್ಚಾಗಿರುತ್ತದೆ.

## ಮಾಸ್ಕ್‌ನ ಕುರಿತಾದ ಮಾಹಿತಿ

ಕೋವಿಡ್–19 ವೈರಸ್ ಸೋಂಕಿತ ವ್ಯಕ್ತಿಯಿಂದ ಆಗುವ ಸಂಪರ್ಕದಿಂದ ಸುಲಭವಾಗಿ ಹರಡುತ್ತದೆ. ವೈರಸ್‌ಗಳನ್ನು ಹೊತ್ತ ನೀರಿನ ಹನಿಗಳು ಬೇಗನೆ ಒಣಗಿ, ಗಾಳಿಯಲ್ಲಿ ಬೀಜಕಣಗಳಾಗಿ ತೇಲಾಡಿ ನಂತರ ನೆಲ ಅಥವಾ ಇನ್ನಾವುದೇ ಮೇಲ್ಮೈ ಪದರಗಳ ಮೇಲೆ ಚಿಮ್ಮುತ್ತವೆ. ಕೋವಿಡ್–19 ಸಂಭವಿಸಲು ಕಾರಣವಾದ ವೈರಸ್ ಗಾಳಿ ಅಥವಾ ಅನಿಲದಲ್ಲಿ ಘನ ಅಥವಾ ದ್ರವರೂಪದ ಕಣಗಳಾಗಿ ಮೂರು ಗಂಟೆಗಳವರೆಗೆ ಇರುವುದನ್ನು ಹಾಗೂ ಪ್ಲಾಸ್ಟಿಕ್ ಮತ್ತು ತುಕ್ಕುಹಿಡಿಯದ (ಸ್ಟೈನ್‌ಲೆಸ್) ಸ್ಟೀಲ್ ಮೇಲ್ಮೈಗಳ ಮೇಲೆ ಮೂರು ದಿನಗಳವರೆಗೂ ಇರುವುದನ್ನು ಕಂಡುಕೊಳ್ಳಲಾಗಿದೆ. ಸೋಂಕಿತ ವ್ಯಕ್ತಿಯಿಂದ ಗಾಳಿಯಲ್ಲಿ ಚಿಮ್ಮುವ ಹನಿಗಳು ಉಸಿರಾಟದ ಮೂಲಕ ಇನ್ನೊಬ್ಬ ವ್ಯಕ್ತಿಯೊಳಗೆ ಪ್ರವೇಶಿಸುವ ಸಾಧ್ಯತೆಯನ್ನು ಮಾಸ್ಕ್‌ಗಳು ಕಡಿಮೆ ಮಾಡುತ್ತವೆ.

## ಮಾಸ್ಕ್‌ಗಳನ್ನು ಯಾವಾಗ ಧರಿಸಬೇಕು? (ಆರೋಗ್ಯ ಸೇವಾ ಕಾರ್ಯಕರ್ತರನ್ನು ಹೊರತುಪಡಿಸಿ)

- ಕೆಮ್ಮು/ಜ್ವರ ಇದ್ದಾಗ, ಮೂರು ಪದರಗಳುಳ್ಳ ವೈದ್ಯಕೀಯ ಮಾಸ್ಕ್ ನಿಮ್ಮಿಂದ ಇತರರಿಗೆ ಸೋಂಕು ಹರಡುವುದನ್ನು ತಡೆಗಟ್ಟುತ್ತದೆ. ಆದರೆ ಇತರರಿಗೆ ಸೋಂಕು ಹರಡದಂತಿರಲು ನೀವು ನಿಮ್ಮ ಕೈಗಳನ್ನು ತೊಳೆಯುತ್ತಿರಬೇಕು.
- ವೈದ್ಯಕೀಯ ನೆರವು ನೀಡುವ ಕೋವಿಡ್–19 ಕೇಂದ್ರಗಳಿಗೆ ಭೇಟಿ ನೀಡಿದಾಗ.
- ಕೋವಿಡ್–19 ಖಾಯಿಲೆ ಪೀಡಿತರಿಗೆ ನೀವು ಶುಶ್ರೂಷೆ ಮಾಡುತ್ತಿದ್ದಲ್ಲಿ
- ಕೋವಿಡ್–19 ಸೋಂಕು ತಗಲಿರುವ ಶಂಕೆ ಇರುವ/ಸೋಂಕು ತಗಲಿದೆ ಎಂದು ಖಚಿತವಾಗಿರುವವರು ಮನೆಯಲ್ಲಿ ಆರೈಕೆ ಪಡೆಯುತ್ತಿದ್ದಲ್ಲಿ

ಅವರ ಕುಟುಂಬದ ಸದಸ್ಯರು 3 ಪದರಗಳುಳ್ಳ ವೈದ್ಯಕೀಯ ಮಾಸ್ಕ್ ಧರಿಸಬೇಕು.

## ಮಾಸ್ಕ್‌ನ್ನು ಯಾರು ಧರಿಸಬೇಕು?

- ಖಾಯಿಲೆಯ ಲಕ್ಷಣಗಳಿರುವವರು
- ಸಾರ್ವಜನಿಕ, ಜನಜಂಗುಳಿ ಸ್ಥಳಗಳಲ್ಲಿ ಓಡಾಡುವವರು
- ಮುಂಚೂಣಿ ಕೆಲಸಗಾರರು
- ಸೋಂಕು ಇರುವ ವ್ಯಕ್ತಿಗಳಿಗೆ ಆರೈಕೆ ಒದಗಿಸುತ್ತಿರುವವರು
- ಸಂಪರ್ಕ ಪ್ರಕರಣಗಳು
- ಶಂಕಿತ ಪ್ರಕರಣಗಳು

## ಕೈ ತೊಳೆಯುವ ವಿಧಾನ ಹೇಗೆ?

- ಕೈಗಳನ್ನು ತೇವ ಮಾಡಿಕೊಂಡು, ಸೋಪ್ ಅಥವಾ ಸ್ಯಾನಿಟೈಸರ್ ಕೈಗೆಲ್ಲಾ ಹಚ್ಚಿಕೊಳ್ಳಬೇಕು, ಅಂಗೈ, ಬೆರಳು, ಮುಂಗೈ ಎಲ್ಲಕ್ಕೂ ಸೋಪನ್ನು ಸವರಿಕೊಳ್ಳುವುದು, ಬಲಗೈಯನ್ನು ಎಡಗೈ ಮೇಲೆ ಹಾಗೂ ಎಡಗೈಯನ್ನು ಬಲಗೈ ಮೇಲೆ, ಬೆರಳುಗಳಿಂದ ಅಂಗೈ ಮತ್ತು ಮುಂಗೈನ್ನು ಉಜ್ಜಿಕೊಳ್ಳುವುದು, ಎರಡು ಕೈಗಳ ಬೆರಳುಗಳನ್ನು ಒಂದರ ಮಧ್ಯೆ ಒಂದನ್ನು ಸೇರಿಸಿ ಹಿಂದು ಮುಂದೆ ಸರಿಸಿ ಉಜ್ಜಿಕೊಳ್ಳುವುದು, ಎಡಗೈ ಹೆಬ್ಬೆರಳನ್ನು ಬಲಗೈನಿಂದ ಹಾಗೂ ಬಲಗೈ ಹೆಬ್ಬೆರಳನ್ನು ಎಡಗೈನಿಂದ ಗಟ್ಟಿಯಾಗಿ ಉಜ್ಜುವುದು, ನಂತರ ಕೈಗಳನ್ನು ನೀರಿನ ಅಡಿಯಲ್ಲಿ ಹಿಡಿದು ತೊಳೆದುಕೊಳ್ಳುವುದು, ಒಂದು ಬಾರಿ ಬಳಸುವ ಟವೆಲ್ / ಬಟ್ಟೆಯಿಂದ ಒರೆಸಿಕೊಳ್ಳುವುದು ಹಾಗೂ ನಳವನ್ನು ಆ ಬಟ್ಟೆಯಿಂದಲೇ ನಿಲ್ಲಿಸುವುದು. ಈ ಎಲ್ಲಾ ಪ್ರಕ್ರಿಯೆಯು 20 ರಿಂದ 60 ಸೆಕೆಂಡುಗಳು ಹಿಡಿಯಬಹುದು.

## ಹ್ಯಾಂಡ್ ಸ್ಯಾನಿಟೈಸರ್ ಪಾತ್ರವೇನು?

- ಕೊರೊನಾ ಬಾಧಿತರಿಗೆ ಶುಶ್ರೂಷೆ ನೀಡುವವರು ಆಗಾಗ್ಗೆ ಹ್ಯಾಂಡ್ ಸ್ಯಾನಿಟೈಸರ್ ಬಳಸಬೇಕು.
- ಸಾಮಾನ್ಯವಾಗಿ, ಸೋಪು ಮತ್ತು ನೀರನ್ನು ಬಳಸಿ ಕನಿಷ್ಠ ಇಪ್ಪತ್ತು ಸೆಕೆಂಡುಗಳ ಕಾಲ ಕೈತೊಳೆಯುವುದು ಉತ್ತಮ ಆಯ್ಕೆಯಾಗಿದೆ.
- ಕೈಗಳು ಕೊಳೆಯಾಗಿದ್ದಲ್ಲಿ ಅಥವಾ ಮಣ್ಣಾಗಿದ್ದಲ್ಲಿ, ಆಲ್ಕೋಹಾಲ್ ಆಧಾರಿತ ದ್ರಾವಕಗಳನ್ನು ಬಳಸಬಾರದು. ಬದಲಿಗೆ ಸೋಪು ಮತ್ತು ನೀರನ್ನು ಬಳಸಿ ಕೈ ತೊಳೆಯಬೇಕು.

## ಕೊರೊನಾ ವೈರಸ್ ಭಾಧಿತರ ಚಿಕಿತ್ಸೆಯಲ್ಲಿ ಆಹಾರ ಸೇವನೆ:

ಇದಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಶಿಫಾರಸ್ಸುಗಳಿಲ್ಲ. ಆದರೆ ಬಾಧಿತರು ತಮ್ಮ ದೈನಂದಿನ ಆಹಾರ ಕ್ರಮವನ್ನು ಪಾಲಿಸಬಹುದು ಮತ್ತು ಆರೋಗ್ಯ ಪೂರ್ಣರಾಗಿರಲು ಹೆಚ್ಚಿನ ಪೌಷ್ಠಿಕಾಂಶ್ಗಳುಳ್ಳ ಹಣ್ಣುಗಳು ಮತ್ತು ತರಕಾರಿಗಳನ್ನು ತಮ್ಮ ಆಹಾರದಲ್ಲಿ ಸೇರಿಸಿಕೊಳ್ಳಬಹುದು.

## ಕೊರೊನಾ ವೈರಸ್ ಲಸಿಕೆ:

- ಪ್ರಸ್ತುತ ಭಾರತದಲ್ಲಿ ಕೋವಿಡ್–19 ಕಾಯಿಲೆ ತಡೆಗಟ್ಟಲು 'ಕೋವಾಕ್ಸಿನ್ ಮತ್ತು ಕೋವಿಶಿಲ್ಡ್' ಹೆಸರಿನ ಲಸಿಕೆಯನ್ನು ಕಂಡು ಹಿಡಿಯಲಾಗಿದೆ. ಆರೋಗ್ಯ ಮಂತ್ರಾಲಯ, ಭಾರತ ಸರ್ಕಾರ ಇದನ್ನು ಅನುಮೋದಿಸಿದೆ. ಪ್ರಥಮ ಆದ್ಯತೆಯಾಗಿ ಕರೋನಾ ಯೋಧರು, ವೈದ್ಯರು, ಆರೋಗ್ಯ ಕಾರ್ಯಕರ್ತರು ಮತ್ತು ಕಾರ್ಮಿಕರಿಗೆ ಲಸಿಕೆ ನೀಡಲಾಗುತ್ತಿದೆ. ಮಾರ್ಚ್ 2021 ರಿಂದ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

ಅಧ್ಯಾಯ
XV

# ಹದಿಹರೆಯದವರ ಸಮಸ್ಯೆಗಳು ಮತ್ತು ಉಪಕ್ರಮಗಳು

## ಮಾದಕ ವ್ಯಸನಗಳು

ಪ್ರಸ್ತುತ ಯುವ ಪೀಳಿಗೆಯು ಮಾದಕ ವ್ಯಸನಗಳಾದ ಮದ್ಯಪಾನ, ಧೂಮಪಾನ, ತಂಬಾಕು ಇನ್ನೂ ಮುಂತಾದ ದುಷ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಅವುಗಳಿಂದ ಯುವಜನತೆಯನ್ನು ಮುಕ್ತಗೊಳಿಸಲು ಸರ್ಕಾರ, ಸಾರ್ವಜನಿಕ ಸಂಸ್ಥೆಗಳು, ನಮ್ಮ ರೆಡ್ ಕ್ರಾಸ್ ಸಂಸ್ಥೆಯಂತಹ ಸಮಾಜಮುಖಿ ಸಂಸ್ಥೆಗಳಿಗೆ ಸವಾಲಾಗಿದೆ.

ನಮ್ಮ ಮುಂದಿನ ಪೀಳಿಗೆಯ ಜನರನ್ನು ಈ ತರಹದ ಕೆಟ್ಟ ಚಟಗಳ ವ್ಯಸನಗಳಿಂದ ಮುಕ್ತಗೊಳಿಸಲು ಹಲವು ಮಾರ್ಗಗಳಿವೆ. ಅಂತಹ ಮಾರ್ಗಗಳ ಮೂಲಕ ಅವರನ್ನು ವ್ಯಸನ ಮುಕ್ತಗೊಳಿಸಬಹುದು.

ಮೊದಲು ನಾವು ಈ ವ್ಯಸನಯುಕ್ತ ಜನರೊಂದಿಗೆ ಸಂಪರ್ಕ ಹೊಂದಬೇಕು ಹಾಗೂ ಅವರನ್ನು ನಿಕಟವಾಗಿ ಗಮನಿಸಿ ಅವರ ನಡವಳಿಕೆಗಳನ್ನು ಡ್ರಗ್ಸ್, ಆಲ್ಕೋಹಾಲ್ ಮತ್ತು ಇನ್ನೂ ಅನೇಕ ವ್ಯಸನಗಳಿಂದ ಆಗುವ ಸಮಸ್ಯೆಗಳ ಬಗ್ಗೆ ಉಪಯುಕ್ತವಾಗುವ ರೀತಿಯಲ್ಲಿ ತಿಳುವಳಿಕೆ ನೀಡಬೇಕು.

ಸರ್ಕಾರ/ ಸಂಘ ಸಂಸ್ಥೆಗಳು ಸ್ವಯಂಪ್ರೇರಿತರಾಗಿ ಪ್ರಾಯೋಗಿಕವಾಗಿ ವ್ಯಸನಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿಡಿಯೋ ಮಾಡಿ ವ್ಯಸನಿಗಳ

ನೋವಿನ ಮಾತುಗಳು ಅವರ ಕುಟುಂಬದ ಭಾವನಾತ್ಮಕ ಪರಿಸ್ಥಿತಿಗಳು ಮತ್ತು ಸನ್ನಿವೇಶಗಳನ್ನು ತೋರಿಸುವ ಮೂಲಕ ಅವರಿಗೆ ಸಮಾಜಿಕ ಜವಾಬ್ದಾರಿಗಳ ಬಗ್ಗೆ ತಿಳಿಸಿಕೊಡುವುದು.

ವ್ಯಸನಿಗಳಿಗೆ ಆಟಗಳನ್ನು ಆಡಿಸುವ ಮೂಲಕ, ಯಾತ್ರಾಸ್ಥಳಗಳ ಪ್ರವಾಸವನ್ನು ಕೈಗೊಳ್ಳುವ ಮೂಲಕ, ಆಕರ್ಷಕ ಚಟುವಟಿಕೆಗಳ ಮೂಲಕ ವ್ಯಸನಿಗಳ ಮನಸ್ಸನ್ನು ಬೇರೆಡೆಗೆ ಸೆಳೆಯಬಹುದು.

ಕೆಲವು ವ್ಯಸನಿಗಳಿಗೆ ರುಚಿಕರವಾದ ಆಹಾರವನ್ನು ನೀಡದೆ, ಜನರೊಂದಿಗೆ ಬೆರೆಯುಲು ಅನುಮತಿಸದೆ ಅವರ ಮನಸ್ಸನ್ನು ಬದಲಾಯಿಸಲು ವಿಭಿನ್ನ ವಿಧಾನಗಳ ಅಗತ್ಯವಿರುತ್ತದೆ.

ಸರ್ಕಾರವು ಇಂತಹ ವ್ಯಸನಗಳನ್ನು ಮುಕ್ತಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಪುನರ್ವಸತಿ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕು. ಈ ಸಮಸ್ಯೆಗಳ ಬಗ್ಗೆ ಸಮಾಜದಲ್ಲಿ ದೋಷಪೂರಿತ ದುರಭ್ಯಾಸಗಳನ್ನು ಪ್ರೋತ್ಸಾಹಿಸುವ ಜನರ ವಿರುದ್ಧ ಸರ್ಕಾರ ಖಂಡಿತವಾಗಿಯೂ ಕೆಲವು ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಂತಹ ವ್ಯಸನಗಳಿಂದ ಬೀದಿ ಪಾಲಾದಂತಹ ಕುಟುಂಬಗಳಿಗೆ ಸರ್ಕಾರವು ಆರ್ಥಿಕ ನೆರವು ನೀಡಬೇಕು ಮತ್ತು ಇಂತಹ ಕುಟುಂಬಗಳ ಪನರ್ ಏಳಿಗೆಗಾಗಿ ಸಾಮಾಜಿಕ ಮಾಧ್ಯಮ ಹಾಗೂ ದೂರದರ್ಶನದಲ್ಲಿ ಜಾಹೀರಾತು ನೀಡುವುದು ಉತ್ತಮವಾಗಿರುತ್ತದೆ.

ಮುಖ್ಯ ವಿಷಯವೇನೆಂದರೆ ಯುವ ಪೀಳಿಗೆ ಮತ್ತು ಜನರು ಕೆಟ್ಟ ಚಟಗಳಿಗೆ ವ್ಯಸನಿಯಾಗುವ ಮೊದಲು ಯೋಚಿಸಬೇಕು. ಏಕೆಂದರೆ ಅವರ ಹಿಂದೆ ಅವರ ಕುಟುಂಬ, ಸಂಬಂಧಿಕರು, ಸ್ನೇಹಿತರು, ಇತ್ಯಾದಿಯಾಗಿ ಎಲ್ಲವನ್ನೂ ಯೋಚಿಸಿ ದುರಭ್ಯಾಸಗಳಿಂದ ದೂರವಿರಬೇಕು. ಉತ್ತಮ

ಸಮಾಜಕ್ಕಾಗಿ, ಉತ್ತಮ ನಡವಳಿಕೆಯ ವಾತಾವರಣ, ಆರೋಗ್ಯಕರ ಸಮಾಜಕ್ಕಾಗಿ ಒಳ್ಳೆಯ ಸಂಸ್ಕಾರ ಹಾಗೂ ಆಲೋಚನೆಗಳ ಕಡೆಗೆ ಗಮನವಿರಿಸಬೇಕು.

ಮಾದಕ ವಸ್ತುಗಳ ಉಪಯೋಗ ಸಾಮಾನ್ಯವಾಗಿ ಪ್ರಪಂಚಾದ್ಯಂತ ಕಂಡುಬರುವ ಒಂದು ದೊಡ್ಡ ಪಿಡುಗು . ಇದು ಗಂಡು – ಹೆಣ್ಣು, ಬಡವ – ಶ್ರೀಮಂತ ಎನ್ನುವ ಭೇದವಿಲ್ಲದೆ ಎಲ್ಲೆಡೆಯೂ ಕಂಡುಬರುತ್ತದೆ. ಸಾಮಾನ್ಯವಾಗಿ ಉಪಯೋಗಿಸುವ ಮಾದಕ ವಸ್ತುಗಳೆಂದರೆ, ಮದ್ಯ, ತಂಬಾಕು, ಗಾಂಜಾ, ಕೋಕೇನ್, ಓಪಿಯುವ್, ಆಂಫಿಟಮೈನ್, ಹಿರಾಯಿನ್, ಎಲ್.ಎಸ್.ಡಿ., ಪಿ.ಸಿ.ಪಿ., ನಿದ್ದೆ ಮಾತ್ರೆಗಳು, ಅನಿಲಗಳು (ವೈಟನರ್, ಪೆಟ್ರೋಲಿಯಮ್ ಉತ್ಪನ್ನಗಳು), ಇತ್ಯಾದಿ.

## ಮಾದಕ ವಸ್ತು ಸೇವನೆಯ ದುಷ್ಪರಿಣಾಮಗಳು:

ಮಾದಕ ವಸ್ತುಗಳಿಂದ ಸಾಕಷ್ಟು ದುಷ್ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ.

ಮಾದಕ ವಸ್ತುಗಳ ಚಟವು ವ್ಯಕ್ತಿಯ ಮೆದುಳಿನ ಮೇಲೆ ದೀರ್ಘಕಾಲದ ಮತ್ತು ಪ್ರಭಾವಿ ಪರಿಣಾಮ ಬೀರುತ್ತದೆ .

ಮಾದಕ ವಸ್ತುಗಳ ಸೇವನೆಯನ್ನು ತಪ್ಪಿಸುವ ಕ್ರಮಗಳು :

- ವ್ಯಸನ ಬಿಡಲು ಮನಸ್ಸಿನಲ್ಲಿ ಅಚಲ ನಿರ್ಧಾರ ಹೊಂದುವುದು ಅವಶ್ಯಕ.
- ಪುನರ್ವಸತಿ ಕೇಂದ್ರದಲ್ಲಿ ಪ್ರವೇಶ ಪಡೆಯುವುದು ಉತ್ತಮ ಆಯ್ಕೆಯಾಗಿದೆ, ಅಲ್ಲಿಗೆ ಹೆಚ್ಚು ಜನ ಬರುತ್ತಾರೆ, ವೈದ್ಯರ ಮೇಲ್ವಿಚಾರಣೆಯಲ್ಲಿ ಎಲ್ಲರಿಗೂ ಒಟ್ಟಿಗೆ ಚಿಕಿತ್ಸೆ ನೀಡಲಾಗುತ್ತದೆ. ಗುಂಪು ಚಿಕಿತ್ಸೆಯಲ್ಲಿ ರೋಗಿಗೆ ಚಿಕಿತ್ಸೆ ನೀಡಲಾಗುತ್ತದೆ.

- ರೋಗಿಗೆ ಮಾನಸಿಕ ವಿಧಾನದಿಂದ ಚಿಕಿತ್ಸೆ ನೀಡಲಾಗುತ್ತದೆ.
- ಧ್ಯಾನ ಮತ್ತು ಯೋಗದ ಮೂಲಕವೂ ಮಾದಕ ವ್ಯಸನವನ್ನು ಬಿಡಬಹುದು.
- ವ್ಯಸನ ಮುಕ್ತರಾಗಲು ಎಲ್ಲಾ ಸಮಯವನ್ನು ನಿಮ್ಮ ಸ್ನೇಹಿತರು, ಸಂಬಂಧಿಕರು ಮತ್ತು ಹಿತೈಷಿಗಳೊಂದಿಗೆ ಕಳೆಯಿರಿ.
- ಮಾದಕ ವ್ಯಸನದಿಂದ ಮುಕ್ತರಾದ ರೋಗಿಗಳು ಪ್ರತಿದಿನ ದಿನಚರಿ ಬರೆಯಬೇಕು. ಇದನ್ನು ಮಾಡುವುದರಿಂದ ಅನೇಕ ಪ್ರಯೋಜನಗಳಿವೆ. ಜೀವನದಲ್ಲಿ ಎಲ್ಲವನ್ನೂ ಬರೆಯಬೇಕು, ನಶೆಯ ನಂತರದ ಪರಿಣಾಮಗಳನ್ನು ಬರೆಯುವ ಮೂಲಕ, ಒಬ್ಬ ವ್ಯಕ್ತಿಯು ತನ್ನ ಜೀವನವು ಮಾದಕ ವ್ಯಸನದಿಂದ ಹೇಗೆ ಹಾಳಾಗಿದೆ ಎಂಬುದರ ಬಗ್ಗೆ ತಿಳಿದುಕೊಳ್ಳುವುದು.

## ಏಡ್ಸನ ಬಗ್ಗೆ ಅರಿವು ಮತ್ತು ತಡೆಗಟ್ಟುವ ಕ್ರಮಗಳು

ಏಡ್ಸ್ ಒಂದು ಮಾರಾಣಾಂತಿಕ ಕಾಯಿಲೆಯಾಗಿದ್ದು ಇದರ ಆಂಗ್ಲ ಭಾಷೆಯ (ಅಕ್ವೈರ್ಡ್ ಇಮ್ಯುನೊ ಡಿಫಿಷಿಯನ್ಸಿ ಸಿಂಡ್ರೋಮ್) ವಿಸ್ತೃತ ರೂಪವಾಗಿದೆ. ಈ ಕಾಯಿಲೆಯು ಅಸುರಕ್ಷಿತ ಲೈಂಗಿಕ ಕ್ರಿಯೆಯಿಂದ ಹರಡುತ್ತದೆ. ಈ ಕಾಯಿಲೆಗೆ ಇದುವರೆವಿಗೂ ಗುಣಪಡಿಸುವ ಲಸಿಕೆ ಲಭ್ಯವಾಗಿಲ್ಲ. ಈ ಕಾಯಿಲೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅನೇಕ ಸಂಶೋಧನೆಗಳು ನಡಯುತ್ತಲೇ ಇವೆ. ಇನ್ನೂ ಖಚಿತ ಫಲಿತಾಂಶವನ್ನು ಪಡೆಯಲು ಸಾಧ್ಯವಾಗಿಲ್ಲ.

ಮೊಟ್ಟ ಮೊದಲ ಏಡ್ಸ್ ಪ್ರಕರಣ ಜೂನ್ 5, 1981 ರಂದು ವರದಿಯಾಯಿತು. 1982ರ ಜುಲೈ ತಿಂಗಳಲ್ಲಿ ನಡೆದ ಸಮಾರಂಭ–ವೊಂದರಲ್ಲಿ ಏಡ್ಸ್ **(AIDS)** ಪದವನ್ನು ಪರಿಚಯಿಸಲಾಯಿತು.

## 'ಏಡ್ಸ್'ನ ಸಾಮಾಜಿಕ ನೋಟ

ಬಹಿಷ್ಕಾರ, ಸಾಮಾಜಿಕ ತಿರಸ್ಕಾರ, ತಾರತಮ್ಯ ಮತ್ತು **HIV** ಸೋಂಕಿತ ಜನರಿಂದ ದೂರವಿರುವುದು, ಪೂರ್ವ ಅನುಮತಿಯಿಲ್ಲದೆ ಕಡ್ಡಾಯ **HIV** ಪರೀಕ್ಷೆ ಅಥವಾ ಗೌಪ್ಯತೆಯ ರಕ್ಷಣೆ ಸೋಂಕಿತ ವ್ಯಕ್ತಿಗಳ ಮೇಲೆ ಹಿಂಸೆ, ವ್ಯಕ್ತಿಗಳೊಂದಿಗೆ ಸಂಪರ್ಕ ನಿಷೇಧ ರೂಪದಲ್ಲಿ ಜಗತ್ತಿನಲ್ಲಿ ಏಡ್ಸ್ **(AIDS)**ನ ಸಾಮಾಜಿಕ ಕಳಂಕವು ಅಸ್ತಿತ್ವದಲ್ಲಿದೆ.

## ಏಡ್ಸ್ ಹರಡುವ ವಿಧಾನಗಳು

**HIV** ಸೋಂಕಿತ ವ್ಯಕ್ತಿಯ ದೈಹಿಕ ದ್ರವಗಳ ಸಂಪರ್ಕಕ್ಕೆ ಬಂದಾಗ ಹರಡುತ್ತದೆ. ಉದಾ: ರಕ್ತ, ವೀರ್ಯ, ಎದೆಯ ಹಾಲು ಮತ್ತು ಇತರೆ. ಸೋಂಕಿತ ವ್ಯಕ್ತಿಯೊಂದಿಗೆ ಅಸುರಕ್ಷಿತ ಲೈಂಗಿಕ ಸಂಪರ್ಕ.

## ಏಡ್ಸ್ ತಡೆಯಲು ಮುಂಜಾಗ್ರತಾ ಕ್ರಮಗಳು

ಏಡ್ಸ್ ರೋಗವನ್ನು ತಡೆಯಲು ನ್ಯಾಷನಲ್ ಹೆಲ್ತ್ ಪೋರ್ಟಲ್ ಆಫ್ ಇಂಡಿಯಾ **(National Health Portal)** ಕೆಲವೊಂದು ಕ್ರಮಗಳನ್ನು ಸೂಚಿಸಿದೆ. ಅವುಗಳೆಂದರೆ

1. ಸುರಕ್ಷಿತ ಲೈಂಗಿಕ ಕ್ರಿಯೆಗಾಗಿ ಕಾಂಡೋಮ್ ಧರಿಸುವುದು.
2. ಲೈಂಗಿಕತೆಯಿಂದ ಹರಡುವ ರೋಗಗಳ ಪರೀಕ್ಷೆ ಮಾಡಿಸಿಕೊಳ್ಳುವುದು ಮತ್ತು ಚಿಕಿತ್ಸೆ ಪಡೆಯುವುದು.
3. ಒಬ್ಬರಿಗೆ ಉಪಯೋಗಿಸಿದ ಸೂಜಿ, ಸಿರಿಂಜ್‌ಗಳನ್ನು ಬೇರೊಬ್ಬರಿಗೆ ಉಪಯೋಗಿಸುವುದನ್ನು ತಡೆಯುವುದು.
4. ಗರ್ಭಿಣಿ ಸ್ತ್ರೀಯರು, ಸೋಂಕು ಪರೀಕ್ಷೆ ಮಾಡಿಸಿಕೊಂಡು ಸೋಂಕು ಕಂಡುಬಂದರೆ ಕ್ರಮವಹಿಸುವುದು.

5. ರಕ್ತವನ್ನು ದಾನ ಮಾಡುವುದಕ್ಕೆ ಮುಂಚೆ HIV ಪರೀಕ್ಷೆ ಮಾಡಿಸಿ ಸೋಂಕು ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳವುದು.

## ಹದಿಹರೆಯದವರು ಎದುರಿಸುವ ಸವಾಲುಗಳು:–

ಆಧುನಿಕ ಸಮಾಜದ ಸವಾಲುಗಳನ್ನು ನಿಭಾಯಿಸುವಲ್ಲಿ ಹೆಚ್ಚಿನ ಹದಿಹರೆಯದವರು ಮಾನಸಿಕವಾಗಿ ಸಾಕಷ್ಟು ಸಿದ್ಧರಾಗಿಲ್ಲ ಎಂಬುದನ್ನು ಗುರುತಿಸಲಾಗುತ್ತಿದೆ. ಹೆಚ್ಚಿನ ಸಮುದಾಯಗಳಲ್ಲಿ ಜೀವನ ಕೌಶಲಗಳನ್ನು ಮುಂದಿನ ಪೀಳಿಗೆಗೆ ಹೇಳಿಕೊಡುವ ಸಾಂಪ್ರದಾಯಿಕ ವಿಧಾನಗಳು (ಉದಾ: ಕುಟುಂಬ, ಸಮುದಾಯದಲ್ಲಿರುವ ಮಾದರಿ ವ್ಯಕ್ತಿಗಳು ಮತ್ತು ಸಾಂಸ್ಕೃತಿಕ ಸಂಪ್ರದಾಯ ಇತ್ಯಾದಿ) ಈಗ ಉಪಯುಕ್ತವಾಗದೇ ಇರಬಹುದು. ಇದಕ್ಕೆ ನೀಡಲಾಗುವ ಕಾರಣಗಳು ಎಂದರೆ, ನಗರೀಕರಣವು ಸಮಷ್ಟಿ ಕುಟುಂಬವನ್ನು ವಿಘಟಿಸಿಬಿಡುವುದರಿಂದ ಸಾಂಪ್ರದಾಯಿಕ ಬೆಂಬಲದ ವ್ಯವಸ್ಥೆಯು ದುರ್ಬಲಗೊಳ್ಳುವುದು. ಶೀಘ್ರಗತಿಯಲ್ಲಿ ಆಗುವ ಸಾಮಾಜಿಕ ಬದಲಾವಣೆಗಳಿಂದಾಗಿ ಯುವಜನರ ಬದುಕು, ಅವರ ತಂದೆ ತಾಯಿಗಿಂತ ತುಂಬಾ ಭಿನ್ನವಾಗಿದೆ. ಯುವಜನರ ಬೆಳವಣಿಗೆಯಲ್ಲಿ ಮಾಧ್ಯಮಗಳ ಪ್ರಭಾವವೂ ಕೆಲಸ ಮಾಡುತ್ತದೆ. ಇವೆಲ್ಲಾ ಕಾರಣಗಳಿಂದಾಗಿ ಯುವಜನರು ತಮ್ಮ ಆರೋಗ್ಯ ಮತ್ತು ಬೆಳವಣಿಗೆಯ ಮಟ್ಟಿಗೆ, ಎಚ್.ಐ.ವಿ/ ಏಡ್ಸ್, ಮಾದಕ ದ್ರವ್ಯ ಸೇವನೆ, ಮಾನಸಿಕ ಒತ್ತಡ ಇನ್ನೂ ಅನೇಕ ಬಗೆಯ ಅಪಾಯಗಳನ್ನು ಎದುರಿಸಬೇಕಾಗುತ್ತದೆ.

ಶಾಲೆಗಳು ಯುವಜನರಿಗೆ ಸಾಮಾಜಿಕವಾಗಿ ಸಿದ್ಧಗೊಳ್ಳುವುದಕ್ಕೆ , ಉತ್ಪಾದನಾಶೀಲವಾದ ಅರ್ಥಪೂರ್ಣ ಬದುಕನ್ನು ನಿಭಾಯಿಸುವುದಕ್ಕೆ ಅಗತ್ಯವಾದ ಕೌಶಲಗಳನ್ನು ಹೇಳಿಕೊಡುತ್ತದೆ ಎಂದು ನಿರೀಕ್ಷಿಸಲಾಗುತ್ತದೆ.

## ಹೆಣ್ಣು ಮಕ್ಕಳಿಗೆ ಮುಟ್ಟಿನ ಆರೋಗ್ಯದ ಬಗ್ಗೆ ಅರಿವು:–

